ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

**ಫೆಬ್ರವರಿ ೧ನೇ ವಾರ**

02-02-2026 TO 07-02-2026



## ಕಾರ್ಲೋಸ್ ಅಲ್ಕರಾಜ್ ಮುಡಿಗೆ ಕಿರೀಟ

- ಅಮೆರಿಕದ ಕೃಷಿ ಉತ್ಪನ್ನ ರಫ್ತು ಹೆಚ್ಚಳ
- ವಾಟ್ಸ್‌ಆ್ಯಪ್‌ಗೆ 'ಸುಪ್ರೀಂ' ತರಾಟೆ
- ದಲೈಲಾಮಾಗೆ ಗ್ರಾಮಿ ಪ್ರಶಸ್ತಿ
- ಕೇಂದ್ರ ಬಜೆಟ್ 2026

# ದೂರದತ್ತ ನೋಟ: ನಿರೀಕ್ಷೆಗಳ ಪಲ್ಲಟ

- ರಕ್ಷಣೆಗೆ ₹7.85 ಲಕ್ಷ ಕೋಟಿ
- ಸಾರಿಗೆ ಕ್ಷೇತ್ರಕ್ಕೆ ₹5.98 ಲಕ್ಷ ಕೋಟಿ
- ರೈಲ್ವೆಗೆ ₹2.77 ಲಕ್ಷ ಕೋಟಿ



• ಹಮೀದ್ ಕೆ.

ಕೇಂದ್ರ ಬಜೆಟ್ 2026–27

ಬೆಂಗಳೂರು: ಮೂಲಸೌಕರ್ಯ ಮತ್ತು ತಯಾರಿಕೆಗೆ ಹೆಚ್ಚು ಒತ್ತು ಕೊಟ್ಟಿರುವ, ಮಧ್ಯಮ ವರ್ಗದ ನಿರೀಕ್ಷೆಗಳನ್ನು ಕಡೆಗಣಿಸಿರುವ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ಭಾನುವಾರ ಮಂಡಿಸಿದ್ದಾರೆ. ಇದು ಅವರ ಸತತ 9ನೇ ಬಜೆಟ್. ಹತ್ತು ಹಲವು ಯೋಜನೆಗಳನ್ನು ಬಜೆಟ್‌ಗಳಲ್ಲಿ ಘೋಷಿಸಲಾಗಿದೆ. ಆದರೆ, ಹೆಚ್ಚಿನ ಯೋಜನೆಗಳಿಗೆ ನಿರ್ದಿಷ್ಟ ಮೊತ್ತವನ್ನು ನಿಗದಿಪಡಿಸಲಾಗಿಲ್ಲ ಮತ್ತು ಈ ಯೋಜನೆಗಳನ್ನು ಎಲ್ಲಿ ಜಾರಿಗೊಳಿಸಲಾಗುವುದು ಎಂಬುದನ್ನು ಹೇಳಲಾಗಿಲ್ಲ.

ಷೇರುಮಾರುಕಟ್ಟೆಯು ದೊಡ್ಡ ಮಟ್ಟದಲ್ಲಿ ಕುಸಿದಿದೆ. ಸೆನ್ಸೆಕ್ಸ್ 1,546, ನಿಫ್ಟಿ 495 ಅಂಶ ಕುಸಿದಿದೆ. ಹೂಡಿಕೆದಾರರು ₹9.40 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. ಬಜೆಟ್‌ಗೆ ಮಾರುಕಟ್ಟೆಯ ಪ್ರತಿಕ್ರಿಯೆ ಏನು ಎಂಬುದನ್ನು ಇದರಿಂದ ಅರ್ಥ ಮಾಡಿಕೊಳ್ಳಬಹುದು.

ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು 2014ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಅನುಸರಿಸಿಕೊಂಡು ಬರುತ್ತಿರುವ ಬಂಡವಾಳ ವೆಚ್ಚ ಏರಿಕೆಯನ್ನು ಈ ಬಾರಿಯೂ ಮುಂದುವರಿಸಲಾಗಿದೆ. 2014-15ನೇ ಬಜೆಟ್‌ನಲ್ಲಿ ₹2 ಲಕ್ಷ ಕೋಟಿ ಇದ್ದ ಬಂಡವಾಳ ವೆಚ್ಚದ ಅಂದಾಜನ್ನು 2026-27ನೇ ಸಾಲಿನಲ್ಲಿ ₹12.2 ಲಕ್ಷ ಕೋಟಿಗೆ ಏರಿಸಲಾಗಿದೆ. ಕಳೆದ ವರ್ಷ ಈ ಮೊತ್ತ ₹11.2 ಲಕ್ಷ ಕೋಟಿ ಇತ್ತು. ಬಂಡವಾಳ ವೆಚ್ಚದ ನಿರಂತರ ಏರಿಕೆಯು ಮೂಲಸೌಕರ್ಯ ವಲಯಕ್ಕೆ ಒಳ್ಳೆಯ ಸುದ್ದಿಯಾದರೂ ಖಾಸಗಿ ವಲಯವು ನಿರೀಕ್ಷಿತ ಪ್ರಮಾಣದಲ್ಲಿ ವೆಚ್ಚ ಮಾಡುತ್ತಿಲ್ಲ ಎಂಬ ಕಳವಳಕ್ಕೂ ಕಾರಣ ವಾಗುತ್ತದೆ.

ಬಡವರು, ಹಿಂದುಳಿದವರ ಏಳಿಗೆಗಾಗಿ ಮೂರು ಕರ್ತವ್ಯಗಳನ್ನು ನಿಗದಿಪಡಿಸಿಕೊಳ್ಳಲಾಗಿದೆ ಎಂದು ನಿರ್ಮಲಾ ಅವರು ಬಜೆಟ್ ಭಾಷಣದ ಆರಂಭದಲ್ಲಿಯೇ ಹೇಳಿದ್ದಾರೆ. ಈ ಕರ್ತವ್ಯಗಳೆಂದರೆ, ಉತ್ಪಾದಕತೆ, ಸ್ಪರ್ಧಾತ್ಮಕತೆ, ಜಾಗತಿಕ ಸ್ಥಿತ್ಯಂತರಗಳನ್ನು ತಾಳಿಕೊಳ್ಳಬಲ್ಲ ಸುಸ್ಥಿರ ಆರ್ಥಿಕ ಪ್ರಗತಿ ಎಂದು ಅವರು ಹೇಳಿದ್ದಾರೆ. ಜನರ ಸಾಮರ್ಥ್ಯ ಹೆಚ್ಚಿಸಿ ಅವರ ಆಶೋತ್ತರಗಳು ಈಡೇರುವಂತೆ ಮಾಡುವುದು ಎರಡನೇ ಕರ್ತವ್ಯ ಎಂದಿದ್ದಾರೆ. ಪ್ರತಿ ಕುಟುಂಬ, ಸಮುದಾಯ, ಪ್ರದೇಶ ಮತ್ತು ವಲಯಕ್ಕೂ ಸಂಪನ್ಮೂಲ, ಸೌಲಭ್ಯ ಮತ್ತು ಅವಕಾಶಗಳು ಲಭ್ಯವಾಗಿ ಎಲ್ಲರ ಜೊತೆಗೆ ಎಲ್ಲರ ವಿಕಾಸ ಎಂಬುದು ಮೂರನೇ ಕರ್ತವ್ಯ ಎಂದಿದ್ದಾರೆ.

ಈ ಮೂರು ಕರ್ತವ್ಯಗಳ ಈಡೇರಿಕೆಗಾಗಿ ಆರು ವಲಯಗಳನ್ನು ಅವರು ಗುರುತಿಸಿದ್ದಾರೆ. ಈ ಎಲ್ಲವುಗಳ ಮುಖ್ಯ ಉದ್ದೇಶ ತಯಾರಿಕೆ ಹೆಚ್ಚಳಕ್ಕೆ ದೊಡ್ಡ ಮಟ್ಟದ ಮಹತ್ವ ನೀಡುವುದೇ ಆಗಿದೆ. ▸7

- ವಿಬಿ ಜಿ ರಾಮ್ ಜಿ ಯೋಜನೆಗೆ ₹95,692 ಕೋಟಿ
- ಆದಾಯ ತೆರಿಗೆ ವಿನಾಯಿತಿ ಮಿತಿಯಲ್ಲಿ ಯಾವುದೇ ಬದಲಾವಣೆ ಇಲ್ಲ
- ಗೃಹ ಇಲಾಖೆಗೆ ₹2.55 ಲಕ್ಷ ಕೋಟಿ
- ಕೃಷಿಗೆ ₹ 1.63 ಲಕ್ಷ ಕೋಟಿ
- ಶಿಕ್ಷಣಕ್ಕೆ ₹1.39 ಲಕ್ಷ ಕೋಟಿ

**ಅಗ್ಗ**

- ಮೈಕ್ರೊವೇವ್ ಅವನ್‌ಗಳು
- ಪಾದರಕ್ಷೆ (ಚರ್ಮದ ಉತ್ಪನ್ನ)
- ಕ್ಯಾನ್ಸರ್ ಔಷಧಿಗಳು (17 ಔಷಧಿಗಳು)
- ಕ್ರೀಡಾ ಸಲಕರಣೆಗಳು
- ಏಳು ಅಪರೂಪದ ಕಾಯಿಲೆಗಳ ಔಷಧಿಗಳು
- ಸಾಗರೋತ್ಪನ್ನ ಆಹಾರ
- ಇವಿ ಬ್ಯಾಟರಿಗಳು
- ಸೌರ ಫಲಕಗಳು
- ವಿದೇಶಿ ಶಿಕ್ಷಣ
- ವಿಮಾನಗಳ ಬಿಡಿ ಭಾಗಗಳು
- ವಿದೇಶಿ ಪ್ರವಾಸ ಖರ್ಚು
- ಜೈವಿಕ ಅನಿಲ ಮಿಶ್ರಿತ ಸಿಎನ್‌ಜಿ
- ವೈಯಕ್ತಿಕ ಬಳಕೆಯ ಆಮದು ಸರಕು

**ತುಟ್ಟಿ**

- ಮದ್ಯ
- ಸಿಗರೇಟ್
- ಪಾನ್ ಮಸಾಲ
- ಇತರ ತಂಬಾಕು ಉತ್ಪನ್ನಗಳು
- ಷೇರು ವ್ಯವಹಾರ
- ಆದಾಯ ತೆರಿಗೆ ದಂಡ
- ಕಲ್ಲಿದ್ದಲು, ಖನಿಜಗಳು, ಕಬ್ಬಿಣದ ಅದಿರು
- ಕಾಫಿ ಹುರಿಯುವ ಮತ್ತು ವೆಂಡಿಂಗ್ ಮಷೀನ್
- ಛತ್ರಿ ಮತ್ತು ಬಿಡಿಭಾಗಗಳು
- ಕೆಲವು ರಸಗೊಬ್ಬರಗಳು

## ರಾಜ್ಯದ ರೈಲ್ವೆ ಯೋಜನೆಗಳಿಗೆ ₹7,748 ಕೋಟಿ ಅನುದಾನ

ನವದೆಹಲಿ: ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣ, ಜೋಡಿ ಹಳಿ ಹಾಗೂ ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಕೇಂದ್ರ ಬಜೆಟ್‌ನಲ್ಲಿ ₹7,748 ಕೋಟಿ ಹಂಚಿಕೆ ಮಾಡಲಾಗಿದೆ.

'2009-14ರ ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ವಾರ್ಷಿಕ ₹835 ಕೋಟಿ ಅನುದಾನ ನೀಡಲಾಗುತ್ತಿತ್ತು. ಈಗ ಅನುದಾನ ಬಿಡುಗಡೆ ಪ್ರಮಾಣ ಒಂಬತ್ತು ಪಟ್ಟು ಹೆಚ್ಚಾಗಿದೆ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಬೆಂಗಳೂರು ಉಪನಗರ ರೈಲು ಮಾರ್ಗಕ್ಕೆ ಕಳೆದ ವರ್ಷ ₹350 ಕೋಟಿ ಹಂಚಿಕೆ ಮಾಡಲಾಗಿತ್ತು. ಈ ಸಲ ₹500 ಕೋಟಿ ಕೊಡಲಾಗಿದೆ ಎಂದು ಅವರು ತಿಳಿಸಿದರು. ▸7

## ಸಾಲದ ಸ್ಥಿತಿ ಕಳವಳಕಾರಿ

ಒಟ್ಟು ಬಜೆಟ್ ಗಾತ್ರವು ₹53.47 ಲಕ್ಷ ಕೋಟಿ ಆಗಿದ್ದು, ತೆರಿಗೆ ವರಮಾನ ₹28.66 ಲಕ್ಷ ಕೋಟಿ. ತೆರಿಗೆಯೇತರ ವರಮಾನ ₹6.67 ಲಕ್ಷ ಕೋಟಿ. ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳನ್ನು ಜಾರಿಗೆ ತರಬೇಕಿದ್ದರೆ ₹16.95 ಲಕ್ಷ ಕೋಟಿ ಸಾಲ ಮಾಡಬೇಕಾಗುತ್ತದೆ. ಆಗ ಕೇಂದ್ರದ ಸಾಲದ ಮೊತ್ತವು ₹214 ಲಕ್ಷ ಕೋಟಿಗೆ ಏರಿಕೆ ಯಾಗುತ್ತದೆ. ಸಾಲದ ಬಡ್ಡಿ ಪಾವತಿಗೆ ₹14.04 ಲಕ್ಷ ಕೋಟಿ ಅಥವಾ ಒಟ್ಟು ವೆಚ್ಚದ ಶೇ 20ರಷ್ಟನ್ನು ಮೀಸಲು ಇರಿಸಬೇಕಾಗುತ್ತದೆ.

ವಿಶೇಷ ಪುಟಗಳು : 8,9,10 ಮತ್ತು 11

ಸಂಪಾದಕೀಯ 6

# ದೂರದತ್ತ ನೋಟ: ನಿರೀಕ್ಷೆಗಳ ಪಲ್ಲಟ


**ಒಂದನೇ ಪುಟದಿಂದ...**

ಏಳು ಪ್ರಮುಖ ಕ್ಷೇತ್ರಗಳ ತಯಾರಿಕೆ ಏರಿಕೆ, ಪರಂಪರಾಗತ ಕೈಗಾರಿಕಾ ಪಾರ್ಕ್‌ಗಳ ಪುನಶ್ಚೇತನ, 'ಚಾಂಪಿಯನ್ ಎಂಎಸ್‌ಎಂಇ'ಗಳನ್ನು ರೂಪಿಸುವುದು, ಮೂಲಸೌಕರ್ಯಕ್ಕೆ ಬಲವಾದ ಒತ್ತು, ದೀರ್ಘಾವಧಿ ಇಂಧನ ಸುರಕ್ಷತೆ ಮತ್ತು ಸುಸ್ಥಿರತೆ ಮತ್ತು ನಗರ ಆರ್ಥಿಕ ವಲಯಗಳ ಅಭಿವೃದ್ಧಿಯನ್ನು ನಿರ್ಮಲಾ ಅವರು ಪ್ರಸ್ತಾಪಿಸಿದ್ದಾರೆ. ಕೃತಕ ಬುದ್ಧಿಮತ್ತೆ ಕ್ಷೇತ್ರಕ್ಕೂ ಉತ್ತೇಜನ ಕೊಡುವ ಭರವಸೆಯನ್ನು ನಿರ್ಮಲಾ ನೀಡಿದ್ದಾರೆ.

ಜಾಗತಿಕ ಅಸ್ಥಿರ ಸ್ಥಿತಿ ಮುಂದುವರಿದಿರುವ ಈ ಸಂದರ್ಭದಲ್ಲಿ ಅದನ್ನು ಎದುರಿಸಲು ಬೇಕಾದ ಕೆಲವು ಕ್ರಮಗಳು ಇವೆ. ವಿರಳ ಲೋಹಗಳ ಮೇಲೆ ಚೀನಾ ಮತ್ತು ಅಮೆರಿಕದ ಏಕಸ್ವಾಮ್ಯವನ್ನು ಮುರಿಯುವುದಕ್ಕಾಗಿ ವಿರಳ ಲೋಹ ಕಾರಿಡಾರ್ ಸ್ಥಾಪಿಸಲಾಗುವುದು ಎಂದು ಹೇಳಿದ್ದಾರೆ. ಆದರೆ ಇದಕ್ಕೆ ಎಷ್ಟು ಹಣ ವೆಚ್ಚ ಮಾಡಲಾಗುವುದು ಎಂದು ವಿವರಿಸಿಲ್ಲ.

ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳು ಮತ್ತು ದೇಶದ ಪೂರ್ವ, ಪಶ್ಚಿಮ ಭಾಗವನ್ನು ಸಂಪರ್ಕಿಸುವ ಸರಕು ಸಾಗಣೆ ಕಾರಿಡಾರ್ ಮತ್ತು 20 ಜಲ ಮಾರ್ಗಗಳ ಅಭಿವೃದ್ಧಿ ಯೋಜನೆಗಳಲ್ಲಿ ಮೂಲಸೌಕರ್ಯಕ್ಕೆ ನೀಡಿದ ಒತ್ತು ಪ್ರತಿಫಲಿತವಾಗಿದೆ.

ರಕ್ಷಣಾ ವಲಯಕ್ಕೆ ಹೆಚ್ಚಿನ ಆದ್ಯತೆ ಎಂದಿನಂತೆ ಸಿಕ್ಕಿದೆ. ಆದರೆ, ಈ ಬಾರಿ, ಪ್ರತಿಕೂಲವಾಗಿರುವ ನೆರೆಹೊರೆ ಮತ್ತು 'ಆಪರೇಷನ್ ಸಿಂಧೂರ' ನಂತರದ ಪರಿಣಾಮಗಳ ಕಾರಣಕ್ಕೆ ರಕ್ಷಣಾ ವಲಯಕ್ಕೆ ₹7.85 ಲಕ್ಷ ಕೋಟಿ ನೀಡಲಾಗಿದೆ. ಹಿಂದಿನ ಬಜೆಟ್‌ಗೆ ಹೋಲಿಸಿದರೆ ಇದು ಶೇ 15.19ರಷ್ಟು ಹೆಚ್ಚು.



ಬಜೆಟ್ ಪ್ರತಿಯೊಂದಿಗೆ ನಿರ್ಮಲಾ ಸೀತಾರಾಮನ್ – ಪಿಟಿಐ ಚಿತ್ರ

ಕೃಷಿ ಕ್ಷೇತ್ರಕ್ಕೆ ₹1.63 ಲಕ್ಷ ಕೋಟಿ ಮೀಸಲು ಇರಿಸಲಾಗಿದೆ. ತೆಂಗಿನಕಾಯಿ, ಕೋಕೊ, ಗೋಡಂಬಿ ಮತ್ತು ಶ್ರೀಗಂಧದಂತಹ ಬೆಳೆಗಳನ್ನು ಹೆಚ್ಚಿಸಲು ರೈತರಿಗೆ ಉತ್ತೇಜನ ನೀಡಲಾಗುವುದು ಎಂದು ಹೇಳಲಾಗಿದೆ. ಈ ಯಾವ ಬೆಳೆಗಳೂ ಈಗ ರೈತರಿಗೆ ಆಕರ್ಷಕವಾಗಿ ಉಳಿದಿಲ್ಲ ಎಂಬುದು ನಿರ್ಮಲಾ ಅವರ ಗಮನಕ್ಕೆ ಬಂದಂತಿಲ್ಲ.

**ಗಾಂಧಿ ಹೆಸರು:** ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಆಜೀವಿಕಾ ಯೋಜನೆಗೆ (ಗ್ರಾಮೀಣ) (ವಿಬಿ-ಜಿ ರಾಮ್ ಜಿ) ₹1.26 ಲಕ್ಷ ಕೋಟಿ ಮೀಸಲಿಡಲಾಗಿದೆ. ಆದರೆ, ಬಜೆಟ್ ಭಾಷಣದಲ್ಲಿ ವಿಬಿ-ಜಿ ರಾಮ್ ಜಿ ಕುರಿತು ಉಲ್ಲೇಖವೇ ಇರಲಿಲ್ಲ. ಇದರಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ (ಮನರೇಗಾ) ಬಾಕಿ ತೀರಿಸಲು ₹30 ಸಾವಿರ ಕೋಟಿ ವ್ಯಯ ಆಗಲಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ಬಂದ ನರೇಗಾ ಯೋಜನೆಯನ್ನು ಬದಲಾಯಿಸಿ ವಿಬಿ-ಜಿ-ರಾಮ್ ಜಿ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ಇದಕ್ಕೆ ಕಾಂಗ್ರೆಸ್ ಪಕ್ಷವು ವ್ಯಾಪಕ ಆಕ್ಷೇಪ ವ್ಯಕ್ತಪಡಿಸಿತ್ತು. ಅದಕ್ಕೆ ಉತ್ತರ ಎಂಬಂತೆ, ಖಾದಿ, ಕೈಮಗ್ಗ ಮತ್ತು ಕರಕುಶಲ ವಸ್ತು ತಯಾರಿಕೆಗೆ ಉತ್ತೇಜನ ನೀಡುವುದಕ್ಕಾಗಿ 'ಮಹಾತ್ಮ ಗ್ರಾಮ ಸ್ವರಾಜ್ ಯೋಜನೆ'ಯನ್ನು ಜಾರಿಗೆ ತರುವುದಾಗಿ ಹೇಳಲಾಗಿದೆ.

ಈ ವರ್ಷ ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಿಗೆ ಜನಪ್ರಿಯ ಮತ್ತು ಭಾರಿ ಯೋಜನೆಗಳನ್ನು ಘೋಷಿಸಿಲ್ಲ. ಆದರೆ, ಚುನಾವಣೆ ನಡೆಯಲಿರುವ ರಾಜ್ಯಗಳಿಗೆ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ಕೆಲ ದಿನಗಳ ಮುನ್ನ ಪ್ರಧಾನಿ ಮೋದಿ ಅವರೇ ಯೋಜನೆಗಳನ್ನು ಘೋಷಿಸುವ ಪರಿಪಾಟವನ್ನು ಬಿಜೆಪಿ ಅನುಸರಿಸಿಕೊಂಡು ಬಂದಿದೆ.

ಈಶಾನ್ಯ ರಾಜ್ಯಗಳಲ್ಲಿ ಬೌದ್ಧ ಪ್ರವಾಸ ಪಥವೊಂದನ್ನು ಅಭಿವೃದ್ಧಿಪಡಿಸುವುದಾಗಿಯೂ ಬಜೆಟ್‌ನಲ್ಲಿ ಹೇಳಲಾಗಿದೆ.

**ತೆರಿಗೆ ಸುಧಾರಣೆ ಇಲ್ಲ:** ತೆರಿಗೆ ಕ್ಷೇತ್ರದಲ್ಲಿ ವಿಶೇಷವಾದ ಸುಧಾರಣೆಗಳನ್ನೇನೂ ಪ್ರಕಟಿಸಲಾಗಿಲ್ಲ. ಆದಾಯ ತೆರಿಗೆ ವಿನಾಯಿತಿ ಮಿತಿಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಹೊಸ ಆದಾಯ ತೆರಿಗೆ ಕಾಯ್ದೆ 2025 ಈ ವರ್ಷದ ಏಪ್ರಿಲ್‌ನಿಂದ ಜಾರಿಗೆ ಬರಲಿದೆ ಎಂದು ಘೋಷಿಸಲಾಗಿದೆ.

## ರಾಜ್ಯದ ರೈಲ್ವೆ ಯೋಜನೆಗಳಿಗೆ ₹7,748 ಕೋಟಿ

**ಒಂದನೇ ಪುಟದಿಂದ...**

ಮೂಲಸೌಕರ್ಯ ವ್ಯವಸ್ಥೆ ಬಲಪಡಿಸಲು ಬೆಂಗಳೂರು–ಚೆನ್ನೈ, ಬೆಂಗಳೂರು–ಹೈದರಾಬಾದ್ ಸೇರಿದಂತೆ ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳನ್ನು ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಹೈಸ್ಪೀಡ್ ಕಾರಿಡಾರ್ ಆರಂಭವಾದ ಬಳಿಕ ಬೆಂಗಳೂರು–ಚೆನ್ನೈ ನಡುವಿನ ಪ್ರಯಾಣದ ಅವಧಿ 1 ಗಂಟೆ 13 ನಿಮಿಷ, ಬೆಂಗಳೂರು–ಹೈದರಾಬಾದ್ ನಡುವಿನ ಪ್ರಯಾಣದ ಅವಧಿ 2 ಗಂಟೆಗೆ ಇಳಿಯಲಿದೆ. ಏಳು ಕಾರಿಡಾರ್‌ಗಳ ನಿರ್ಮಾಣಕ್ಕೆ ₹16 ಲಕ್ಷ ಕೋಟಿ ಆಗಲಿದೆ.

ನಗರಗಳ ಬೆಳವಣಿಗೆಯನ್ನು ಇನ್ನಷ್ಟು ಬಲಪಡಿಸುವ ಪ್ರಯತ್ನದ ಭಾಗವಾಗಿ, ಬೆಂಗಳೂರು, ಸೂರತ್ ಮತ್ತು ವಾರಾಣಸಿ ಸೇರಿದಂತೆ ಏಳು ಕಡೆಗಳಲ್ಲಿ ನಗರ ಆರ್ಥಿಕ ಪ್ರದೇಶಗಳನ್ನು (ಸಿಇಆರ್) ಸ್ಥಾಪಿಸಲಾಗುತ್ತದೆ. ಐದು ವರ್ಷಗಳಲ್ಲಿ ಪ್ರತಿ ಪ್ರದೇಶಕ್ಕೆ ₹5,000 ಕೋಟಿ ಹಂಚಿಕೆ ಮಾಡಲಾಗುತ್ತದೆ.

Publication Date
02/02/2026

Presented by

## 16ನೇ ಹಣಕಾಸು ಆಯೋಗದ ಶಿಫಾರಸು: ಉತ್ತರದ ರಾಜ್ಯಗಳಿಗೆ ಮಹಾಪೂರ

# ರಾಜ್ಯದ ತೆರಿಗೆ ಪಾಲು ಅಲ್ಪ ಹೆಚ್ಚಳ

• ಮಂಜುನಾಥ ಹೆಬ್ಬಾರ್

ನವದೆಹಲಿ: ಹಿಂದಿನ ಹಣಕಾಸು ಆಯೋಗಗಳ ಮಾದರಿಯಲ್ಲೇ 16ನೇ ಹಣಕಾಸು ಆಯೋಗವೂ ಕೇಂದ್ರದ ತೆರಿಗೆ ಪಾಲಿನಲ್ಲಿ ಉತ್ತರದ ಹಿಂದುಳಿದ (ಬಿಮಾರು) ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ ಹಂಚಿಕೆ ಮಾಡಿದೆ. ಬಿಜೆಪಿಯೇತರ ರಾಜ್ಯಗಳಿಗೆ 'ತೆರಿಗೆ ಯುದ್ಧ'ಕ್ಕೆ ಮಣಿದಿರುವ ಆಯೋಗವು, ಕರ್ನಾಟಕ ಸೇರಿದಂತೆ ದಕ್ಷಿಣದ ಪ್ರಗತಿಶೀಲ ರಾಜ್ಯಗಳ ಪಾಲನ್ನು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸಿದೆ.

ಅರವಿಂದ ಪನಗರಿಯಾ ಅವರ ಅಧ್ಯಕ್ಷತೆಯ 16ನೇ ಹಣಕಾಸು ಆಯೋಗವು 2026ರ ಏಪ್ರಿಲ್ 1ರಿಂದ ಆರಂಭವಾಗುವ ಐದು ವರ್ಷಗಳ ಅವಧಿಗೆ ಕೇಂದ್ರ ತೆರಿಗೆಗಳಲ್ಲಿ ರಾಜ್ಯಗಳ ಪಾಲನ್ನು ಶೇಕಡಾ 41ರಷ್ಟು ಉಳಿಸಿಕೊಳ್ಳಲು ಶಿಫಾರಸು ಮಾಡಿದೆ. ಆಯೋಗದ ವರದಿಯನ್ನು ಲೋಕಸಭೆಯಲ್ಲಿ ಭಾನುವಾರ ಮಂಡಿಸಲಾಯಿತು. ಆಯೋಗದ ಶಿಫಾರಸಿನ ಪ್ರಕಾರ, ಕೇಂದ್ರವು 2026-27ನೇ ಹಣಕಾಸು ವರ್ಷಕ್ಕೆ ರಾಜ್ಯಗಳಿಗೆ ₹1.4 ಲಕ್ಷ ಕೋಟಿ ಹಂಚಿಕೆ ಮಾಡಿದೆ.


ಕರ್ನಾಟಕಕ್ಕೆ ಶೇ 4.13 ಪಾಲು ಹಂಚಿಕೆ ಮಾಡಲಾಗಿದೆ. ಇದು 15ನೇ ಹಣಕಾಸು ಆಯೋಗದ (ಶೇ 3.64) ಶಿಫಾರಸಿಗಿಂತ ಸ್ವಲ್ಪ ಜಾಸ್ತಿ, 14ನೇ ಹಣಕಾಸು ಆಯೋಗದ (ಶೇ 4.71) ಶಿಫಾರಸಿಗಿಂತ ಅಲ್ಪ ಕಡಿಮೆ. ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಿ. ರಾಜ್ಯಕ್ಕೆ ಶೇ 4.71ಕ್ಕಿಂತ ಹೆಚ್ಚು ತೆರಿಗೆ ಪಾಲು ಸಿಗಲೇಬೇಕು ಎಂದು ಕರ್ನಾಟಕದ ಕಾಂಗ್ರೆಸ್ ಸರ್ಕಾರ ಪಟ್ಟು ಹಿಡಿದಿತ್ತು. ಪರಿಷ್ಕೃತ ಹಂಚಿಕೆ ಪ್ರಕಾರ, ರಾಜ್ಯಕ್ಕೆ ಈ ವರ್ಷ ₹63,049 ಕೋಟಿ ಬರಬಹುದು ಎಂದು ಅಂದಾಜಿಸಲಾಗಿದೆ.

ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ ₹100ನಲ್ಲಿ ಕರ್ನಾಟಕಕ್ಕೆ ₹4.13 ಸಿಗಲಿದೆ. ಉತ್ತರ ಪ್ರದೇಶಕ್ಕೆ ₹17.61, ಬಿಹಾರಕ್ಕೆ ₹9.94, ಮಧ್ಯ ಪ್ರದೇಶಕ್ಕೆ ₹7.34, ಪಶ್ಚಿಮ ಬಂಗಾಳಕ್ಕೆ ₹7.21, ಮಹಾರಾಷ್ಟ್ರಕ್ಕೆ ₹6.44, ರಾಜಸ್ಥಾನಕ್ಕೆ ₹5.92 ದೊರಕಲಿದೆ. ಅಂದರೆ, ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲ ವಿಷಯದಲ್ಲಿ ದಕ್ಷಿಣದ ರಾಜ್ಯಗಳಿಗಿಂತ ಸಮೃದ್ಧವಾಗಿರುವ ಉತ್ತರದ ರಾಜ್ಯಗಳಿಗೆ ಮತ್ತೆ ತೆರಿಗೆ ಪಾಲಿನ ಮಹಾಪೂರ. ಹಿಂದಿ ನೆಲದ ಈ ರಾಜ್ಯಗಳು ಶಿಕ್ಷಣ, ಆರೋಗ್ಯ, ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹಿಂದುಳಿದಿರುವುದನ್ನೇ ಮಾನದಂಡವಾಗಿಟ್ಟುಕೊಂಡು ಅಧಿಕ ಪಾಲು ಹಂಚಿಕೆ ಮಾಡಲಾಗಿದೆ.

ತೆರಿಗೆ ಹಂಚಿಕೆಯೂ ಸೇರಿದಂತೆ ಒಟ್ಟು ಸಂಪನ್ಮೂಲ ಹಂಚಿಕೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂಬ ಆರೋಪ ದಶಕಗಳಿಂದ ಇದೆ. ಈ ತಾರತಮ್ಯದ ವಿರುದ್ಧದ ದಕ್ಷಿಣದ ಬಿಜೆಪಿಯೇತರ ಸರ್ಕಾರಗಳು ಕೇಂದ್ರದ ವಿರುದ್ಧ ವರ್ಷಗಳಿಂದ ಸಂಘರ್ಷ ನಡೆಸಿದ್ದವು. ಈ ಹೋರಾಟಕ್ಕೆ ಈಗ ಸಮಾಧಾನ ಪಟ್ಟುಕೊಳ್ಳುವಂತಹ ಜಯ ಸಿಕ್ಕಿದೆ. ಬಿಮಾರು ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತಿತರ ರಾಜ್ಯಗಳ ಪಾಲನ್ನು ಸಣ್ಣ ಪ್ರಮಾಣದಲ್ಲಿ ಕಡಿತಗೊಳಿಸಲಾಗಿದೆ.

▶12

### ಯಾವ ಆಯೋಗ, ರಾಜ್ಯಗಳಿಗೆ ಎಷ್ಟು ಪಾಲು?




### ತೆರಿಗೆ ಪಾಲು ಹಂಚಿಕೆ (16ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ)

| ಮಾನದಂಡ | ಶೇಕಡಾವಾರು |
|---|---|
| ಜನಸಂಖ್ಯೆ | 17.5 |
| ಜನಸಂಖ್ಯಾ ನಿಯಂತ್ರಣದ ನಿರ್ವಹಣೆ | 10 |
| ವಿಸ್ತೀರ್ಣ | 10 |
| ವರಮಾನ ಅಂತರ | 42.5 |
| ಅರಣ್ಯ ಪ್ರದೇಶ | 10 |
| ಜಿಡಿಪಿಗೆ ಕೊಡುಗೆ | 10 |

### ರಾಜ್ಯಕ್ಕೆ ಮತ್ತೆ ಅನ್ಯಾಯ: ಸಿ.ಎಂ ಸಿದ್ದರಾಮಯ್ಯ



ತೆರಿಗೆ ಪಾಲು ಹಂಚಿಕೆಯಲ್ಲಿ ಕೇಂದ್ರವು ಅನ್ಯಾಯ ಮುಂದುವರಿಸಿದೆ. ನಾವು ಕನಿಷ್ಠ 14ನೇ ಹಣಕಾಸು ಆಯೋಗದಲ್ಲಿ ನಿಗದಿಯಾಗಿದ್ದ ಶೇ 4.71ರಷ್ಟಾದರೂ ಕೊಡಿ ಎಂದು 16ನೇ ಹಣಕಾಸು ಆಯೋಗದ ಎದುರು ವಾದ ಮಂಡಿಸಿದ್ದೆವು. ತೆರಿಗೆ ಹಂಚಿಕೆಯಲ್ಲಿ ನ್ಯಾಯಯುತ ಪಾಲಿಗಾಗಿ ಪ್ರಧಾನಿ, ಕೇಂದ್ರ ಹಣಕಾಸು ಸಚಿವರನ್ನು ಭೇಟಿಯಾಗಿ ಮನವಿ ಮಾಡಿದ್ದೆವು. ಆದರೂ, ತೆರಿಗೆಯಲ್ಲಿ ಬರೀ ಶೇ 4.13ರಷ್ಟು ಪಾಲು ಕೊಡಲಾಗಿದೆ. ನಗರ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಐದು ವರ್ಷಗಳಿಗೆ ರಾಜ್ಯಕ್ಕೆ ಕೇವಲ ತಲಾ ₹ 18 ಸಾವಿರ ಕೋಟಿಗಳಷ್ಟು ಹಂಚಿಕೆ ಮಾಡಿದೆ. ಕರ್ನಾಟಕದಿಂದ ವರ್ಷಕ್ಕೆ ₹ 4.50 ಲಕ್ಷ ಕೋಟಿಗಳಷ್ಟು ತೆರಿಗೆ ಕೇಂದ್ರಕ್ಕೆ ಹೋಗುತ್ತದೆ. ರಾಜ್ಯ ಒಂದು ರೂಪಾಯಿ ತೆರಿಗೆ ಕಟ್ಟಿದರೆ ಬರೀ 14 ಪೈಸೆ ತೆರಿಗೆ ರೂಪದಲ್ಲಿ ಕೊಡುತ್ತಿದೆ. ಇದು ಅನ್ಯಾಯವಲ್ಲವೇ?

**ಸಿದ್ದರಾಮಯ್ಯ**, ಮುಖ್ಯಮಂತ್ರಿ

# ರಾಜ್ಯದ ತೆರಿಗೆ ಪಾಲು ಅಲ್ಪ ಹೆಚ್ಚಳ

ಒಂದನೇ ಪುಟದಿಂದ...

ವಿಪತ್ತು ನಿರ್ವಹಣೆಗಾಗಿ ರಾಜ್ಯಕ್ಕೆ ಐದು ವರ್ಷಗಳ ಅವಧಿಗೆ ₹8,559 ಕೋಟಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಎಸ್‌ಡಿಆರ್‌ಎಫ್‌ಗೆ (ರಾಜ್ಯ ವಿಪತ್ತು ನಿರ್ವಹಣೆ ನಿಧಿ) ₹6,847 ಕೋಟಿ ಹಾಗೂ ಎಸ್‌ಡಿಎಂಎಫ್‌ಗೆ (ರಾಜ್ಯ ವಿಪತ್ತು ತಗ್ಗಿಸುವಿಕೆ ನಿಧಿ) ₹1,712 ಕೋಟಿ. ಆದರೆ, ಇಲ್ಲಿ ಎಸ್‌ಡಿಆರ್‌ಎಫ್ ಹಾಗೂ ಎಸ್‌ಡಿಎಂಎಫ್‌ಗೆ ರಾಜ್ಯದ ಪಾಲು ತಲಾ ₹1,711 ಕೋಟಿ ಹಾಗೂ ₹428 ಕೋಟಿ ಇದೆ. ಆಯೋಗವು ಒಂದು ಕಡೆಯಲ್ಲಿ ತೆರಿಗೆ ಪಾಲನ್ನು ಹೆಚ್ಚಿಸಿ ಇನ್ನೊಂದು ಕಡೆಯಲ್ಲಿ ಕಿತ್ತುಕೊಳ್ಳುವ ಕೆಲಸ ಮಾಡಿದೆ. ಆಯೋಗ ವಿಧಿಸಿರುವ ಷರತ್ತುಗಳನ್ನು ಪಾಲನೆ ಮಾಡಿದರಷ್ಟೇ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ದೊರಕಲಿದೆ. ಸ್ಥಳೀಯ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಸದ ಕಾರಣಕ್ಕೆ 15ನೇ ಹಣಕಾಸು ಆಯೋಗದ ₹1,219 ಕೋಟಿ ಅನುದಾನಕ್ಕೆ ಕೇಂದ್ರ ಸರ್ಕಾರ ಕತ್ತರಿ ಹಾಕಿರುವುದನ್ನು ಇಲ್ಲಿ ನೆನಪಿಸಬಹುದು.

15ನೇ ಹಣಕಾಸು ಆಯೋಗವು ಜನಸಂಖ್ಯೆಯನ್ನು 1971ರ ಬದಲಾಗಿ 2011ನ್ನು ಆಧಾರವಾಗಿರಿಸಿಕೊಂಡ ಕಾರಣದಿಂದಲೂ ರಾಜ್ಯಕ್ಕೆ ತೀವ್ರ ರೂಪದ ಅನ್ಯಾಯವಾಗಿದೆ. ಜನಸಂಖ್ಯಾ ನಿಯಂತ್ರಣದ ಮೂಲಕ ಅಭಿವೃದ್ಧಿ ಸಾಧಿಸುತ್ತಿರುವ ರಾಜ್ಯಗಳಿಗೆ ಇದರಿಂದ ದೊಡ್ಡ ಹೊಡೆತ ಬಿದ್ದಿತು' ಎಂದು ಕರ್ನಾಟಕ ಸರ್ಕಾರವು ಆಕ್ಷೇಪ ವ್ಯಕ್ತಪಡಿಸಿತ್ತು. ಈ ಸಲವೂ 2011ರ ಜನಸಂಖ್ಯೆಯನ್ನೇ ಆಧಾರವಾಗಿಟ್ಟುಕೊಂಡು ತೆರಿಗೆ ಪಾಲು ಹಂಚಿಕೆ ಮಾಡಲಾಗಿದೆ.

ಇನ್ನೊಂದೆಡೆ, ವಿಶೇಷ ಮೂಲಸೌಕರ್ಯ ವ್ಯವಸ್ಥೆ ಒದಗಿಸಲು ಅರ್ಹ ನಗರಗಳನ್ನು ಆಯೋಗ ಪಟ್ಟಿ ಮಾಡಿದೆ. ಈ ಪಟ್ಟಿಯಲ್ಲಿ ರಾಜ್ಯದ ಯಾವ ನಗರವೂ ಸ್ಥಾನ ಪಡೆದಿಲ್ಲ.

## ರಾಜ್ಯಗಳಿಗೆ ತೆರಿಗೆ ಪಾಲು (ಹಂಚಿಕೆ (₹ಕೋಟಿಗಳಲ್ಲಿ))

| ರಾಜ್ಯ | ಶೇ | 2026–27ರಲ್ಲಿ ಹಂಚಿಕೆ |
|---|---|---|
| ಆಂಧ್ರ ಪ್ರದೇಶ | 4.21 | 64,362 |
| ಅರುಣಾಚಲ ಪ್ರದೇಶ | 1.35 | 20,665 |
| ಅಸ್ಸಾಂ | 3.25 | 49,725 |
| ಬಿಹಾರ | 9.94 | 1,51,831 |
| ಛತ್ತೀಸಗಢ | 3.30 | 50,427 |
| ಗೋವಾ | 0.36 | 5,570 |
| ಗುಜರಾತ್ | 3.75 | 57,310 |
| ಹರಿಯಾಣ | 1.36 | 20,772 |
| ಹಿಮಾಚಲ ಪ್ರದೇಶ | 0.91 | 13,949 |
| ಜಾರ್ಖಂಡ್ | 3.35 | 51,236 |
| ಕರ್ನಾಟಕ | 4.13 | 63,049 |
| ಕೇರಳ | 2.38 | 36,355 |
| ಮಧ್ಯ ಪ್ರದೇಶ | 7.34 | 1,12,133 |
| ಮಹಾರಾಷ್ಟ್ರ | 6.44 | 98,306 |
| ಮಣಿಪುರ | 0.62 | 9,554 |
| ಮೇಘಾಲಯ | 0.63 | 9,630 |
| ಮಿಜೊರಾಂ | 0.56 | 8,608 |
| ನಾಗಾಲ್ಯಾಂಡ್ | 0.48 | 7,341 |
| ಒಡಿಶಾ | 4.42 | 67,460 |
| ಪಂಜಾಬ್ | 1.99 | 30,464 |
| ರಾಜಸ್ಥಾನ | 5.92 | 90,445 |
| ಸಿಕ್ಕಿಂ | 0.33 | 5,112 |
| ತಮಿಳುನಾಡು | 4.09 | 62,530 |
| ತೆಲಂಗಾಣ | 2.17 | 33,180 |
| ತ್ರಿಪುರ | 0.64 | 9,783 |
| ಉತ್ತರ ಪ್ರದೇಶ | 17.61 | 2,68,910 |
| ಉತ್ತರಾಖಂಡ | 1.14 | 17,414 |
| ಪಶ್ಚಿಮ ಬಂಗಾಳ | 7.21 | 1,10,119 |

## 16ನೇ ಹಣಕಾಸು ಆಯೋಗ; ರಾಜ್ಯದ ಯಾವುದಕ್ಕೆ ಎಷ್ಟು?

### ರಾಜ್ಯ ವಿಪತ್ತು ನಿರ್ವಹಣೆ ನಿಧಿ (ಎಸ್‌ಡಿಆರ್‌ಎಫ್)

| ವರ್ಷ | ಮೊತ್ತ (₹ಕೋಟಿಗಳಲ್ಲಿ) |
|---|---|
| 2026–27 | 1,239 |
| 2027–28 | 1,301 |
| 2028–29 | 1,366 |
| 2029–30 | 1,434 |
| 2030–31 | 1,507 |

### ರಾಜ್ಯ ವಿಪತ್ತು ತಗ್ಗಿಸುವಿಕೆ ನಿಧಿ (ಎಸ್‌ಡಿಎಂಎಫ್)

| ವರ್ಷ | ಮೊತ್ತ (₹ಕೋಟಿಗಳಲ್ಲಿ) |
|---|---|
| 2026–27 | 310 |
| 2027–28 | 326 |
| 2028–29 | 342 |
| 2029–30 | 359 |
| 2030–31 | 375 |

### ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಅನುದಾನ

| | |
|---|---|
| 2026–27 | 2,427 |
| 2027–28 | 3,094 |
| 2028–29 | 4,000 |
| 2029–30 | 4,440 |
| 2030–31 | 4,928 |
| ಒಟ್ಟು | 18,889 |


### ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ

| | |
|---|---|
| 2026–27 | 2,374 |
| 2027–28 | 3,420 |
| 2028–29 | 3,797 |
| 2029–30 | 4,214 |
| 2030–31 | 4,678 |
| ಒಟ್ಟು | 18,483 |

## ❖ ವೆನೆಜುವೆಲಾದಿಂದ ತೈಲ ಖರೀದಿಸಲಿದೆ ಭಾರತ: ಟ್ರಂಪ್

**ಸಂದರ್ಭ: ಭಾರತವು ಇರಾನ್ ಬದಲಿಗೆ ವೆನೆಜುವೆಲಾದಿಂದ ಕಚ್ಚಾತೈಲವನ್ನು ಖರೀದಿ ಮಾಡಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.**

- ವೆನೆಜುವೆಲಾಗೆ ನೀಡಿರುವ ಸಾಲವನ್ನು ಚೀನಾ ವಾಪಸ್ ಪಡೆಯಲಿದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಶನಿವಾರ ಉತ್ತರಿಸಿದ ಟ್ರಂಪ್, 'ತೈಲ ಖರೀದಿಗೆ ಸಂಬಂಧಿಸಿದಂತೆ ವೆನೆಜುವೆಲಾದೊಂದಿಗೆ ಚೀನಾ ಒಪ್ಪಂದ ಮಾಡಿಕೊಳ್ಳುವುದಾದರೆ ಅದನ್ನು ನಾವು ಸ್ವಾಗತಿಸುತ್ತೇವೆ' ಎಂದು ಎ ಹೇಳಿದರು.
- 'ಭಾರತವೂ ಇರಾನ್ ಬದಲಾಗಿ ವೆನೆಜುವೆಲಾದಿಂದ ತೈಲ ಖರೀದಿಗೆ ಮುಂದಾಗಿದೆ. ಈ ಸಂಬಂಧ ಒಪ್ಪಂದ ಚಾಲ್ತಿಯಲ್ಲಿದೆ' ಎಂದು ಹೇಳಿದರು.
- ಟ್ರಂಪ್ ಹೇಳಿಕೆಯ ಬಗ್ಗೆ ಭಾರತ ಸರ್ಕಾರ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.
- ಭಾರತವು 2019ರವರೆಗೂ ಇರಾನ್‌ನಿಂದ ಕಚ್ಚಾತೈಲ ಖರೀದಿಸುವ ಪ್ರಮುಖ ರಾಷ್ಟ್ರವಾಗಿತ್ತು, ಇರಾನ್ ಮೇಲೆ ಅಮೆರಿಕ ನಿರ್ಬಂಧ ಹೇರಿದ ಬಳಿಕ ಆಮದು ಪ್ರಮಾಣ ಗಮನಾರ್ಹವಾಗಿ ತಗ್ಗಿತು. ನಿರ್ಬಂಧ ವಿಧಿಸಿರುವ ದೇಶಗಳಿಂದ ಕಚ್ಚಾತೈಲ ಖರೀದಿಯನ್ನು ನಿಲ್ಲಿಸುವಂತೆ ಪ್ರಮುಖ ಆಮದುದಾರ ದೇಶಗಳಿಗೆ ಅಮೆರಿಕ ಒತ್ತಡ ಹೇರುತ್ತಿದೆ.
- ಇತ್ತೀಚಿನ ವರ್ಷಗಳಲ್ಲಿ ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾತೈಲ ಖರೀದಿಸುತ್ತಿದೆ. ಇದೇ ಕಾರಣಕ್ಕಾಗಿ ಅಮೆರಿಕವು ಭಾರತದ ಮೇಲೆ ಶೇ 50ರಷ್ಟು ಸುಂಕ ವಿಧಿಸಿದೆ.
- ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾ ಹಂಗಾಮಿ ಅಧ್ಯಕ್ಷ ಡೆಲ್ಸಿ ರಾಡ್ರಿಗಸ್ ಅವರೊಂದಿಗೆ ಶುಕ್ರವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದರು. ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧವನ್ನು ವೃದ್ಧಿಸುವ ಬಗ್ಗೆ ಪರಸ್ಪರ ಸಹಮತ ವ್ಯಕ್ತಪಡಿಸಿದ್ದರು.



# ಬ್ಯಾಟರಿಗೆ ಸುಂಕ ವಿನಾಯಿತಿ



ನವದೆಹಲಿ (ಪಿಟಿಐ): ಪಳೆಯುಳಿಕೆ ಅಲ್ಲದ ಇಂಧನ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಅಣುಶಕ್ತಿ ಕ್ಷೇತ್ರ ಹಾಗೂ ಬ್ಯಾಟರಿ ಶಕ್ತಿ ಸಂಗ್ರಹಣೆ ಕ್ಷೇತ್ರದಲ್ಲಿ ಹೂಡಿಕೆ ಹೆಚ್ಚಿಸಲು ಕೇಂದ್ರ ಸರ್ಕಾರವು ಮೂಲ ಕಸ್ಟಮ್ ಸುಂಕದಲ್ಲಿ ವಿನಾಯಿತಿ ನೀಡಿದೆ.

'ಬ್ಯಾಟರಿಗಳಿಗಾಗಿ ಲಿಥಿಯಂ-ಅಯಾನ್ ಕೋಶಗಳನ್ನು ತಯಾರಿಸಲು ಬಳಸುವ ಸರಕುಗಳಿಗೆ ನೀಡುವ ಮೂಲ ಕಸ್ಟಮ್ಸ್ ಸುಂಕ ವಿನಾಯಿತಿಯನ್ನು ಬ್ಯಾಟರಿ ಸಂಗ್ರಹಣ ವ್ಯವಸ್ಥೆಗೂ ವಿಸ್ತರಿಸುವ ಪ್ರಸ್ತಾವವನ್ನು ಮುಂದಿಡುತ್ತಿದ್ದೇನೆ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಪ್ರಕಟಿಸಿದರು.

ಇದರಿಂದ ಬ್ಯಾಟರಿ ಶಕ್ತಿ ಸಂಗ್ರಹ ವ್ಯವಸ್ಥೆಗೆ ಬಳಸುವ ಲಿಥಿಯಂ-ಅಯಾನ್ ಕೋಶಗಳ ಬಂಡವಾಳ ಸರಕುಗಳ ಮೇಲಿನ ಆಮದು ಸುಂಕ ಶೂನ್ಯ ಇರಲಿದೆ.

ಬ್ಯಾಟರಿ ದೇಶಿಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿದ್ಯುತ್ ವಾಹನಗಳ ಬ್ಯಾಟರಿ ತಯಾರಿಕೆಗೆ 35ಕ್ಕೂ ಹೆಚ್ಚು ಬಂಡವಾಳ ಸರಕುಗಳ ಮೇಲೆ ಹಾಗೂ ಮೊಬೈಲ್ ಬ್ಯಾಟರಿ ತಯಾರಿಕೆಗೆ ಬಳಸುವ 28ಕ್ಕೂ ಅಧಿಕ ವಸ್ತುಗಳ ಮೇಲೆ ತೆರಿಗೆ ವಿನಾಯಿತಿ ನೀಡಲಾಗಿದೆ.

ಅದೇ ರೀತಿ, ಸೌರ ಫಲಕಗಳ ತಯಾರಿಕೆಗೆ ಬಳಸುವ 'ಸೋಡಿಯಂ ಅಂಟಿಮೊನೆಟ್' ಮೇಲಿನ ಆಮದು ಕಸ್ಟಮ್ ಸುಂಕ ವಿನಾಯಿತಿ ನೀಡುವ ಪ್ರಸ್ತಾವ ಮಂಡಿಸಲಾಗಿದೆ.

ಪ್ರಸಕ್ತ, ಸೋಡಿಯಂ ಅಂಟಿಮೊನೆಟ್ ಮೇಲೆ ಕಸ್ಟಂ ಸುಂಕ ಶೇಕಡ 7.5ರಷ್ಟಿದೆ.

# ಕೌಶಲ ತರಬೇತಿಗೆ ₹1,000 ಕೋಟಿ

ನವದೆಹಲಿ (ಪಿಟಿಐ): ವಿಕಸಿತ ಭಾರತ ಗುರಿ ಸಾಧಿಸಲು ದೇಶದ ಯುವಜನತೆಗೆ ಕೌಶಲಪೂರ್ಣ ವೃತ್ತಿಮಾರ್ಗಗಳನ್ನು ರೂಪಿಸಲು ವಿವಿಧ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಘೋಷಿಸಿದೆ.

ಕೌಶಲಪೂರ್ಣ ಆರೋಗ್ಯ ವೃತ್ತಿಪರತೆಯಲ್ಲಿ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ 1 ಲಕ್ಷ ಮಂದಿ ಆರೋಗ್ಯ ವೃತ್ತಿಪರರಿಗೆ (ಎಎಚ್‌ಪಿಎಸ್) ಐದು ವರ್ಷಗಳ ತರಬೇತಿ ಒದಗಿಸುವ ಯೋಜನೆಯನ್ನು ಪ್ರಸ್ತಾಪಿಸಿದೆ.

ಈ ಉದ್ದೇಶಕ್ಕಾಗಿ ಇದೇ ಮೊದಲ ಬಾರಿಗೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಆಯವ್ಯಯದಲ್ಲಿ ₹1,000 ಕೋ ಅನುದಾನ ಘೋಷಿಸಲಾಗಿದೆ. ಜತೆಗೆ ದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚುತ್ತಿರುವ ಕಾರಣ ವೃದ್ಧರ ಆರೈಕೆಗೆಂದೇ ವಿಶೇಷ ಕಾರ್ಯಕ್ರಮದ ಅಡಿಯಲ್ಲಿ 1.5 ಲಕ್ಷ ಮಂದಿಗೆ ತರಬೇತಿ ಒದಗಿಸಲಾಗುತ್ತದೆ ಎಂದೂ ತಿಳಿಸಿದೆ.

## ₹10 ಲಕ್ಷ ಮಿತಿ ಹಿಂತೆಗೆತ

ನವದೆಹಲಿ: ಇ-ವಾಣಿಜ್ಯ ವ್ಯವಹಾರಗಳ ಮೂಲಕ ನವೋದ್ಯಮಗಳು ಜಾಗತಿಕ ಮಾರುಕಟ್ಟೆಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಕೊರಿಯರ್ ರಫ್ತಿನ ಪ್ರತಿ ಘಟಕದ ಮೇಲಿನ ₹10 ಲಕ್ಷ ಮಿತಿಯನ್ನು ಸಂಪೂರ್ಣ ತೆಗೆದುಹಾಕುವುದಾಗಿ ಘೋಷಿಸಲಾಗಿದೆ.

ಜತೆಗೆ ಹಿಂದಿರುಗಿಸಿದ, ತಿರಸ್ಕರಿಸಿದ ಸರಕುಗಳ ಘಟಕಗಳನ್ನು ಗುರುತಿಸಿ, ನಿರ್ವಹಿಸಲು ತಂತ್ರಜ್ಞಾನ ಸುಧಾರಣೆಗೆ ಒತ್ತು ನೀಡುವುದಾಗಿಯೂ ಆಯವ್ಯಯದಲ್ಲಿ ಘೋಷಿಸಲಾಗಿದೆ.

## ಫಸಲು ಭೀಮಾ: ಅನುದಾನ ಕಡಿತ

| ಆರ್ಥಿಕ ವರ್ಷ | ಅನುದಾನ |
|---|---|
| 2024-25 | ₹14,473 ಕೋಟಿ |
| 2025-26 | ₹12,267 ಕೋಟಿ |
| 2026-27 | ₹12,200 ಕೋಟಿ |

## ವಿಬಿ– ಜಿ ರಾಮ್ ಜಿಗೆ ₹95 ಸಾವಿರ ಕೋಟಿ, ನರೇಗಾಕ್ಕೆ ₹30 ಸಾವಿರ ಕೋಟಿ

ನವದೆಹಲಿ (ಪಿಟಿಐ): ಹೊಸದಾಗಿ ಜಾರಿಗೆ ತಂದಿರುವ 'ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ' (ವಿಬಿ–ಜಿ ರಾಮ್ ಜಿ) ಕಾಯ್ದೆಗೆ ಈ ಸಾಲಿನ ಬಜೆಟ್‌ನಲ್ಲಿ ₹95,692.31 ಕೋಟಿ ಅನುದಾನ ನೀಡಲಾಗಿದೆ. ಈಗಾಗಲೇ ಜಾರಿಯಲ್ಲಿರುವ 'ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ'ಗೂ (ಮನರೇಗಾ) ₹30 ಸಾವಿರ ಕೋಟಿ ನೀಡಲಾಗಿದೆ.

ವಿಬಿ–ಜಿ ರಾಮ್ ಜಿ ಅಡಿಯಲ್ಲಿ ವರ್ಷಕ್ಕೆ 125 ದಿನಗಳ ಕಾಲ ಉದ್ಯೋಗ ನೀಡುವ ಖಾತರಿ ಒದಗಿಸಲಾಗಿದೆ. ಆ ಮೂಲಕ ಎರಡು ದಶಕಗಳ ಹಿಂದೆ (2005) ಯುಪಿಎ ಸರ್ಕಾರವು ಜಾರಿಗೆ ತಂದಿದ್ದ ಮನರೇಗಾವನ್ನು ಬದಲಾಯಿಸಲಿದೆ.

'ವಿಬಿ– ಜಿ ರಾಮ್ ಜಿ ಜಾರಿಯಾಗುವವರೆಗೂ ಮ–ನರೇಗಾ ಮುಂದುವರಿಯಲಿದೆ. ಮ–ನರೇಗಾದಡಿ ಈಗಾಗಲೇ ಕೈಗೆತ್ತಿಕೊಂಡಿರುವ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ತಿಳಿಸಿದೆ.

ಬಜೆಟ್ ದಾಖಲೆಗಳ ಪ್ರಕಾರ, ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ₹1 ಲಕ್ಷ 94 ಸಾವಿರ ಕೋಟಿ (₹1,94,368,81 ಕೋಟಿ) ಅನುದಾನ ಘೋಷಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಅನುದಾನ ಸ್ವಲ್ಪ ಹೆಚ್ಚಾಗಿದೆ. ಹಿಂದಿನ ವರ್ಷದಂತೆ ಪರಿಷ್ಕೃತ ಅಂದಾಜಿನ ಪ್ರಕಾರ, ₹1ಲಕ್ಷ 86 ಸಾವಿರ ಕೋಟಿ (₹1,86,995.61) ಅನುದಾನ ನೀಡಲಾಗಿತ್ತು.

ಭೂ ಸಂಪನ್ಮೂಲ ಇಲಾಖೆಗೆ 2026–27ರಲ್ಲಿ ₹2,654.33 ಕೋಟಿ ಅನುದಾನ ನೀಡಲಾಗಿದೆ. ಕಳೆದ ವರ್ಷ ₹2,651 ಕೋಟಿ ಅನುದಾನ ನಿಗದಿಯಾಗಿತ್ತು. ಪರಿಷ್ಕೃತ ಅಂದಾಜಿನ ಪ್ರಕಾರ, 1,757.4 ಕೋಟಿ ಅನುದಾನ ನೀಡಲಾಗಿತ್ತು.

ಮನರೇಗಾಕ್ಕೆ 2025–26ರಲ್ಲಿ ಪರಿಷ್ಕೃತ ಅಂದಾಜಿನಂತೆ ₹88 ಸಾವಿರ ಕೋಟಿ ಅನುದಾನ ನೀಡಲಾಗಿತ್ತು. ಆರಂಭದಲ್ಲಿ ₹86 ಸಾವಿರ ಕೋಟಿ ಅನುದಾನವು ಬಳಕೆಯಾಗಿದೆ.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ)ಗೆ 2026–27ರಲ್ಲಿ ₹19 ಸಾವಿರ ಕೋಟಿ ಅನುದಾನ ನೀಡಲಾಗಿದೆ. ಕಳೆದ ವರ್ಷ ಇಷ್ಟೇ ಅನುದಾನ ನೀಡಲಾಗಿತ್ತು. ಕಳೆದ ವರ್ಷ ಆರ್ಥಿಕ ವರ್ಷದಲ್ಲಿ ಪರಿಷ್ಕೃತ ಅಂದಾಜಿನಂತೆ ₹11 ಸಾವಿರ ಕೋಟಿ ವ್ಯಯಿಸಲಾಗಿತ್ತು.

ದೀನದಯಾಳ್ ಅಂತ್ಯೋದಯ ಯೋಜನೆ–ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಗೆ ಈ ಸಾಲಿನಲ್ಲಿ ₹19,200 ಕೋಟಿ ಅನುದಾನ ನೀಡಲಾಗಿದೆ. ಕಳೆದ ವರ್ಷ ₹19,005 ಕೋಟಿ ಅನುದಾನ ನೀಡಿದ್ದು, ಪರಿಷ್ಕೃತ ಅಂದಾಜಿನಂತೆ ₹16 ಸಾವಿರ ಕೋಟಿ ವ್ಯಯಿಸಲಾಗಿತ್ತು.



ಈ ವರ್ಷ ಪ್ರಧಾನಮಂತ್ರಿ ಆವಾಸ್ ಯೋಜನೆ–ಗ್ರಾಮೀಣ (ಪಿಎಂಎವೈ–ಜಿ)ಗೆ ₹54,916.70 ಅನುದಾನ ಮೀಸಲಿಡಲಾಗಿದೆ. ಕಳೆದ ಸಾಲಿನಲ್ಲಿ ₹54,832 ಕೋಟಿ ಅನುದಾನ ನೀಡಲಾಗಿತ್ತು. ಪರಿಷ್ಕೃತ ಅಂದಾಜಿನಂತೆ ₹32,500.01 ಕೋಟಿ ವ್ಯಯಿಸಲಾಗಿತ್ತು.




# ರೈತರ ಆದಾಯ ಹೆಚ್ಚಿಸಲು ಕಸರತ್ತು

## ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಕ್ರಮ, ತೆಂಗು ಬೆಳೆಗೆ ಉತ್ತೇಜನ

**ಪ್ರಮುಖ ಅಂಶಗಳು**

- 2030ರ ವೇಳೆಗೆ ಗೋಡಂಬಿ, ಕೋಕೊ ಜಾಗತಿಕ ಪ್ರೀಮಿಯಂ ಬ್ರ್ಯಾಂಡ್‌ಗಳನ್ನಾಗಿ ರೂಪಿಸಲು ಕ್ರಮ
- ಕೃಷಿಕರಿಗೆ ಬಹುಭಾಷಾ ಎ.ಐ ನೆರವು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಸಾಂಪ್ರದಾಯಿಕ ಬೆಳೆಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಉತ್ತೇಜನ ನೀಡುವ ಯೋಜನೆಗಳ ಮೂಲಕ ಅನ್ನದಾತರ ಆದಾಯ ಹೆಚ್ಚಿಸುವ ಆಶಯವನ್ನು ಈ ಬಾರಿಯ ಬಜೆಟ್ ಒಳಗೊಂಡಿದೆ.

ಕೃಷಿ ಕ್ಷೇತ್ರದಲ್ಲಿ ಬಹು ಆಯಾಮದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸುವ ಉದ್ದೇಶ ಹೊಂದಲಾಗಿದೆ. ಅನ್ನದಾತರ ನಿರೀಕ್ಷೆಗಳ ಭಾರ ಕಡಿಮೆಗೊಳಿಸುವ ಪ್ರಯತ್ನ ಕೈಗೊಂಡಿದ್ದರೂ ಕೃಷಿ ವಲಯ ನಿರಂತರವಾಗಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರದ ಮಾರ್ಗ ತೋರಿಸಿಲ್ಲ ಎನ್ನುವುದು ತಜ್ಞರ ವಿಶ್ಲೇಷಣೆ.

ಕೃಷಿ ಮತ್ತು ಸಂಬಂಧಿತ ವಲಯಕ್ಕೆ ಈ ಬಾರಿ ₹1.62 ಲಕ್ಷ ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಇದು ಕಳೆದ ವರ್ಷಕ್ಕಿಂತ ಶೇ 7.12ರಷ್ಟು ಹೆಚ್ಚು. 2025-26ರಲ್ಲಿ ₹1.51 ಲಕ್ಷ ಕೋಟಿ ನಿಗದಿಪಡಿಸಲಾಗಿತ್ತು.

ಶ್ರೀಗಂಧ ಮತ್ತು ತೆಂಗು ಬೆಳೆಗೆ ಉತ್ತೇಜನ, ಕೃತಕ ಬುದ್ಧಿಮತ್ತೆ ಬಳಕೆಗೆ ಆದ್ಯತೆ ನೀಡುವುದನ್ನು ಸಹ ಪ್ರಸ್ತಾಪಿಸಲಾಗಿದೆ. ಜತೆಗೆ, ಕೃಷಿಕರನ್ನು ಉದ್ಯಮಶೀಲರನ್ನಾಗಿ ಪರಿವರ್ತಿಸುವ ಅಂಶಗಳನ್ನು ಉಲ್ಲೇಖಿಸಲಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಗಮನದಲ್ಲಿರಿಸಿಕೊಂಡು ಈ ಅಂಶಗಳನ್ನು ಪ್ರಸ್ತಾಪಿಸಲಾಗಿದೆ.

ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಪಶು ಸಂಗೋಪನಾ ವಲಯದಲ್ಲಿ ಉದ್ಯಮಶೀಲತೆ ಅಭಿವೃದ್ಧಿಗೆ ಬೆಂಬಲ ನೀಡುವುದಾಗಿ ಘೋಷಿಸಲಾಗಿದೆ.

ಸಾಲ ಆಧಾರಿತ ಸಬ್ಸಿಡಿ ಯೋಜನೆ, ಜಾನುವಾರುಗಳ ಸಾಕಾಣಿಕೆಗೆ ಆಧುನಿಕತೆಯ ಸ್ಪರ್ಶ, ಜಾನುವಾರುಗಳು, ಡೇರಿ ಮತ್ತು ಪೌಲ್ಟ್ರಿ ವಲಯವನ್ನು ಗಮನದಲ್ಲಿರಿಸಿಕೊಂಡು ಸರಪಳಿಯ ರೀತಿಯ ವ್ಯವಸ್ಥೆಯನ್ನು ರೂಪಿಸುವುದು ಹಾಗೂ ಜಾನುವಾರು ಕೃಷಿಕರ ಉತ್ಪಾದಕರ ಸಂಘಟನೆಗಳನ್ನು ಆರಂಭಿಸುವ ಮೂಲಕ ಈ ವಲಯಕ್ಕೆ ಹೊಸ ಸ್ಪರ್ಶ ನೀಡುವುದನ್ನು ಉಲ್ಲೇಖಿಸಲಾಗಿದೆ.

ಅತಿ ಹೆಚ್ಚು ಬೆಲೆ ದೊರೆಯುವ ತೆಂಗು, ಶ್ರೀಗಂಧ, ಕೋಕೊ ಮತ್ತು ಗೋಡಂಬಿಗೆ ಉತ್ತೇಜನ ಮತ್ತು ಈಶಾನ್ಯ ರಾಜ್ಯಗಳಲ್ಲಿ 'ಅಗರ್' ಮರಗಳು, ಬಾದಾಮಿ, ವಾಲ್ನಟ್ಸ್‌ಗಳಿಗೂ ಬೆಂಬಲ ನೀಡುವುದಾಗಿ ತಿಳಿಸಲಾಗಿದೆ.

ಭಾರತ ಜಗತ್ತಿನಲ್ಲೇ ಅತಿ ಹೆಚ್ಚು ತೆಂಗು ಬೆಳೆಯುವ ರಾಷ್ಟ್ರ. ಒಂದು ಕೋಟಿ ರೈತರು ಸೇರಿದಂತೆ ಸುಮಾರು ಮೂರು ಕೋಟಿ ಮಂದಿ ತೆಂಗು ಬೆಳೆ ಮೇಲೆ ಅವಲಂಬಿತರಾಗಿದ್ದಾರೆ. ತೆಂಗು ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ 'ತೆಂಗು ಉತ್ತೇಜನ ಯೋಜನೆ'ಯನ್ನು ಘೋಷಿಸಲಾಗಿದೆ. ಅತಿ ಹೆಚ್ಚು ತೆಂಗು ಬೆಳೆಯುವ ರಾಜ್ಯಗಳಲ್ಲಿ ಹಳೆಯ ತೆಂಗಿನ ಗಿಡಗಳನ್ನು ಬದಲು ಹೊಸ ಸಸಿಗಳು ಅಥವಾ ಉತ್ತಮ ತಳಿಗಳನ್ನು ನೆಡುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಮೂಲಕ ಉತ್ಪಾದನೆ ಹೆಚ್ಚಿಸುವುದು ಮತ್ತು ಮೌಲ್ಯವರ್ಧನೆ ಹೆಚ್ಚಿಸುವ ಉದ್ದೇಶವನ್ನು ಹೊಂದಲಾಗಿದೆ.

ಗೋಡಂಬಿ ಮತ್ತು ಕೋಕೊ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ಸ್ವಾವಲಂಬನೆ ಸಾಧಿಸಿ ರಫ್ತಿಗೆ ಉತ್ತೇಜನ ನೀಡಲಾಗುವುದು. ಈ ಮೂಲಕ 2030ರ ವೇಳೆಗೆ ಈ ಉತ್ಪನ್ನಗಳನ್ನು ಜಾಗತಿಕ ಪ್ರೀಮಿಯಂ ಬ್ರ್ಯಾಂಡ್‌ಗಳನ್ನಾಗಿ ರೂಪಿಸುವ ಉದ್ದೇಶ ಹೊಂದಲಾಗಿದೆ.

ವಾಲ್ನಟ್ಸ್, ಬಾದಾಮಿ ಬೆಳೆಯಲು ಪ್ರತ್ಯೇಕವಾದ ವಿಶೇಷ ಯೋಜನೆಗಳನ್ನು ಕೈಗೊಂಡು ರೈತರ ಆದಾಯ ಹೆಚ್ಚಿಸಲಾಗುವುದು. ಈ ಯೋಜನೆಯಲ್ಲಿ ಯುವಕರಿಗೆ ಆದ್ಯತೆ ನೀಡಲಾಗುವುದು ಎಂದು ಘೋಷಿಸಲಾಗಿದೆ.

**ಕೃಷಿಯಲ್ಲಿ ಎಐ:** ಕೃಷಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನವನ್ನು ಮತ್ತಷ್ಟು ಹೆಚ್ಚಿಸಲು ಕೃತಕ ಬುದ್ಧಿಮತ್ತೆ (ಎಐ) ಬಳಸಿಕೊಳ್ಳುವ ಕ್ರಮಗಳನ್ನು ಘೋಷಿಸಲಾಗಿದೆ.

ಕೃಷಿಕರಿಗೆ ಸಹಾಯ ಮತ್ತು ಸಲಹೆಗಾಗಿ 'ಭಾರತ್ ವಿಸ್ತಾರ್' (ವರ್ಚ್ಯುವಲ್ ಇಂಟಿಗ್ರೇಟೆಡ್ ಸಿಸ್ಟಮ್ ಟು ಆಕ್ಸೆಸ್ ಅಗ್ರಿಕಲ್ಚರಲ್ ರಿಸೋರ್ಸಸ್) ಎಂಬ ಬಹುಭಾಷಾ ಎಐ ಸಾಧನ ಪರಿಚಯಿಸುವುದಾಗಿ ತಿಳಿಸಲಾಗಿದೆ.

ರೈತರು ಉತ್ತಮ ನಿರ್ಧಾರ ಕೈಗೊಳ್ಳಲು ಮತ್ತು ಸಲಹೆಗಳನ್ನು ಪಡೆಯಲು ಇದರಿಂದ ಅನುಕೂಲವಾಗಲಿದೆ. ಕೃಷಿ-ಸ್ಟ್ಯಾಕ್ ಪೋರ್ಟಲ್ ಮತ್ತು ಐಸಿಎಆರ್ ಅನುಮೋದಿತ ಕೃಷಿ ಪದ್ಧತಿಗಳನ್ನು ಎಐ ವ್ಯವಸ್ಥೆಗಳೊಂದಿಗೆ ಸಂಯೋಜಿಸಲಾಗುವುದು. ಇದರಿಂದ, ರೈತರಿಗೆ ಒಂದೇ ಕಡೆ ವಿಶ್ವಾಸಾರ್ಹ, ವೈಜ್ಞಾನಿಕ ಸಲಹೆ ದೊರೆಯಲಿದೆ.




### ಶ್ರೀಗಂಧ ಕೃಷಿಗೆ ಉತ್ತೇಜನ

ಶ್ರೀಗಂಧ, ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆ ಜತೆ ಮೇಳೈಸಿದೆ. ದೇಶದ ಶ್ರೀಗಂಧ ಪರಂಪರೆ ವೈಭವವನ್ನು ಮುಂದುವರಿಸುವ ನಿಟ್ಟಿನಲ್ಲಿ ಶ್ರೀಗಂಧ ಬೆಳೆಯಲು ಮತ್ತು ಕಟಾವು ನಂತರ ಪ್ರಕ್ರಿಯೆಗಳಿಗೆ ನೆರವು ನೀಡಲಾಗುವುದು. ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಕೈಗೊಳ್ಳಲಾಗುವುದು ಎಂದು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

Publication Date
02/02/2026

Presented by ಪ್ರಜಾವಾಣಿ




## ಪಶುವೈದ್ಯಕೀಯ ವೃತ್ತಿಪರರ ಸಂಖ್ಯೆ ಹೆಚ್ಚಳಕ್ಕೆ ಕ್ರಮ

ನವದೆಹಲಿ (ಪಿಟಿಐ): ಹೈನುಗಾರಿಕೆ, ಮೀನುಗಾರಿಕೆ, ಹಣ್ಣು, ತರಕಾರಿ ಬೆಳೆಗಳನ್ನು ಒಳಗೊಂಡ ಗರಿಷ್ಠ ಮೌಲ್ಯದ ಕೃಷಿ ವಲಯಕ್ಕೆ ಹೆಚ್ಚಿನ ಕೊಡುಗೆ ನೀಡಲಾಗಿದೆ. ಪಶುವೈದ್ಯಕೀಯ ವೃತ್ತಿಪರರು, ಆಸ್ಪತ್ರೆಗಳ ಲಭ್ಯತೆಯನ್ನು ಹೆಚ್ಚಿಸಲು ವಿಶೇಷ ಯೋಜನೆಯನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಕೃಷಿ ಆದಾಯದಲ್ಲಿ ಪಶು ಸಂಗೋಪನಾ ವಲಯದಿಂದ ಶೇ 16ರಷ್ಟು ದೊರೆಯುತ್ತದೆ. ಹೀಗಾಗಿ, ಈ ವಲಯಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಮತ್ತೆ 20 ಸಾವಿರಕ್ಕೂ ಹೆಚ್ಚು ಪಶುವೈದ್ಯಕೀಯ ವೃತ್ತಿಪರರು ಲಭ್ಯವಾಗುವಂತೆ ಕ್ರಮಕೈಗೊಳ್ಳುವ ಯೋಜನೆ ರೂಪಿಸಲಾಗಿದೆ.

ಈ ಯೋಜನೆ ಅಡಿ ಪಶುವೈದ್ಯಕೀಯ ಮತ್ತು ಪ್ಯಾರಾ ಪಶುವೈದ್ಯಕೀಯ ಕಾಲೇಜುಗಳು, ಆಸ್ಪತ್ರೆಗಳು, ಡಯಗ್ನಾಸ್ಟಿಕ್ ಪ್ರಯೋಗಾಲಯಗಳನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ.

**ಮೀನುಗಾರಿಕೆ:** ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್) ಮತ್ತು ಆಳ ಸಮುದ್ರಗಳಲ್ಲಿ ಹಿಡಿಯುವ ಮೀನುಗಳ ಮೇಲೆ ಯಾವುದೇ ಸುಂಕವನ್ನು ವಿಧಿಸಲಾಗುವುದಿಲ್ಲ. ಇದರೊಂದಿಗೆ, ವಿಶೇಷವಾಗಿ ಕರಾವಳಿಯ ರೈತರನ್ನು ಗಮನದಲ್ಲಿಟ್ಟುಕೊಂಡು ಸಬ್ಸಿಡಿ ಆಧಾರಿತ ಸಾಲ ಯೋಜನೆಗಳನ್ನೂ ಪ್ರಕಟಿಸಲಾಗಿದೆ. 500 ಜಲಾಶಯ ಮತ್ತು ಅಮೃತ ಸರೋವರಗಳ ಸಮಗ್ರ ಅಭಿವೃದ್ಧಿಗೆ ಗಮನ ನೀಡಲಾಗಿದೆ.

## ❖ ಬೆಳವಣಿಗೆಗೆ ಹೇಗೆ ನೆರವಾಗಲಿದೆ ಮುಂಗಡಪತ್ರ?

**ಸಂದರ್ಭ: ಬೆಳವಣಿಗೆಗೆ ಸರ್ಕಾರದ ಬಗ್ಗೆ ಬಜೆಟ್ ಹೆಚ್ಚಿನ ಅನುಮಾನಗಳನ್ನು ಉಳಿಸಿಲ್ಲ.ದೇಶದ ಬೆಳವಣಿಗೆಗೆ ಸರ್ಕಾರ ಮಾಡುವ ಬಂಡವಾಳ ವೆಚ್ಚವು ಊರುಗೋಲಾಗಿ ನಿಲ್ಲುವುದು ಮುಂದುವರಿಯಲಿದೆ. ಇದೇ ವೇಳೆ ಹಣಕಾಸಿನ ಶಿಸ್ತನ್ನು ಕೂಡ ಕೈಬಿಡುವುದಿಲ್ಲ ಎಂದು ಬಜೆಟ್ ಹೇಳಿದೆ.ದೇಶದ ಜಿಡಿಪಿಯಗಾತ್ರದ ಶೇ 3.1ರಷ್ಟನ್ನು, ಅಂದರೆ ₹12.22 ಲಕ್ಷ ಕೋಟಿಯನ್ನು, ಬಂಡವಾಳ ವೆಚ್ಚಗಳಿಗಾಗಿ ಮೀಸಲು ಇಡಲಾಗಿದೆ. ಈಮೂಲಕ ಮೂಲಸೌಕರ್ಯವಲಯವು ಸರ್ಕಾರದ ಪ್ರಾಥಮಿಕ ಸನ್ನೆಗೋಲಾಗಿ ಇರಲಿದೆ.**

- ಕೇಂದ್ರಸರ್ಕಾರದ ವಿತ್ತೀಯ ಕೊರತೆ ಪ್ರಮಾಣವನ್ನು ಜಿಡಿಪಿಯ ಶೇ4.3ಕ್ಕೆ ತಗ್ಗಿಸುವ ಗುರಿಯನ್ನು ನಿಗದಿ ಮಾಡಲಾಗಿದೆ. ಅಂದರೆ, ಬೆಳವಣಿಗೆಗೆ ಉತ್ತೇಜನ ಹಾಗೂ ಹಣಕಾಸಿನ ಶಿಸ್ತು ಪರಸ್ಪರ ಸ್ಪರ್ಧೆಗೆ ಬಿದ್ದ ಅಂಶಗಳಲ್ಲ. ಇದು ಮಹತ್ತದ ಸಂಗತಿ. ಬಾಹ್ಯ ಬೇಡಿಕೆ ಕಡಿಮೆ ಇರುವ ಹಾಗೂ ಬಂಡವಾಳದ ಹರಿವು ಅಸ್ಥಿರವಾಗಿರುವ ಜಾಗತಿಕ ಸಂದರ್ಭದಲ್ಲಿ, ಖಾಸಗಿ ವಲಯದ ಹೂಡಿಕೆಯು ಸ್ಥಿರವಾಗಿಲ್ಲದಿದ್ದಾಗ ಸರ್ಕಾರದ ಕಡೆಯಿಂದ ಆಗುವ ಬಂಡವಾಳ ವೆಚ್ಚವು ನೆರವಿಗೆ ಬರಬೇಕು ಎಂಬ ಆರ್ಥಿಕ ಮಾದರಿಯನ್ನು ಬಜೆಟ್ ನೆಚ್ಚಿಕೊಂಡಿದೆ. ಇಲ್ಲಿರುವ ಪ್ರಶ್ನೆ ಸರ್ಕಾರ ಮಾಡುತ್ತಿರುವ ವೆಚ್ಚಗಳು ಸಾಕಾಗುವ ಮಟ್ಟದಲ್ಲಿಯೇ ಎಂಬುದಲ್ಲ:ಬದಲಿಗೆ.
- ಉತ್ಪಾದಕತೆಯಲ್ಲಿ ಆಗಿರುವಬೆಳವಣಿಗೆಯನ್ನು ಸರ್ಕಾರದ ವೆಚ್ಚಗಳು ಉಳಿಸಿಕೊಳ್ಳಬಲ್ಲವೇ ಎಂಬುದು.
- ಸಾರಿಗೆ ಮತ್ತು ಸಂಪರ್ಕವಲಯಕ್ಕೆ ಹೆಚ್ಚಿನ ವೆಚ್ಚ ನಿಗದಿ ಮಾಡಲಾಗಿದೆ. ಹೆಚ್ಚುವರಿ ಬಂಡವಾಳ ವೆಚ್ಚದಲ್ಲಿ ರಸ್ತೆ, ಹೆದ್ದಾರಿಗಳು, ರೈಲ್ವೆ, ದೂರಸಂಪರ್ಕ ವಲಯಕ್ಕೆ ಜಾಸ್ತಿ ಆದ್ಯತೆ ದೊರೆತಿದೆ. ರೈಲ್ವೆ ವಲಯಕ್ಕೆ ಹೆಚ್ಚಿನ ಬಂಡವಾಳನಿಗದಿಮಾಡಿ, ಅದು ದೇಶದ ಪಾಲಿಗೆ ದೀರ್ಘಾವಧಿ ಅಸ್ತಿ ಎಂಬುದನ್ನು ಮತ್ತೆ ಸ್ಪಷ್ಟಪಡಿಸಲಾಗಿದೆ.ದೂರಸಂಪರ್ಕ ವಲಯದಲ್ಲಿ ಹೆಚ್ಚಿನ ಹೂಡಿಕೆಯ ಘೋಷಣೆ ಮೂಲಕ, ಡಿಜಿಟಲ್ ಸಂಪರ್ಕಸೌಲಭ್ಯವು ಇಡೀ ಅರ್ಥವ್ಯವಸ್ಥೆಯ ಪಾಲಿನ ಸಂಪನ್ಮೂಲ ಎಂಬುದನ್ನು ಹೇಳಲಾಗಿದೆ.
- ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ₹26.21 ಲಕ್ಷ ಕೋಟಿ ವರ್ಗಾವಣೆ ಮಾಡಲಾಗುತ್ತದೆ. ವರ್ಗಾವಣೆ ಮೊತ್ತವು ಹೆಚ್ಚಳವಾಗಿದೆ.ರಾಜ್ಯಗಳ ಬಂಡವಾಳ ವೆಚ್ಚಗಳಿಗೆ ನೀಡುವ ವಿಶೇಷ ನೆರವಿನ ಮೊತ್ತವು 2 ಲಕ್ಷ ಕೋಟಿಗೆ ಏರಿದೆ. ಕಾರ್ಯಕ್ರಮ ಅನುಷ್ಠಾನ ಸಾಮರ್ಥ್ಯವು ಈಗ ಹೆಚ್ಚು ಮುಖ್ಯ ಎಂಬ ಸಂದೇಶವನ್ನು ಇದು ನೀಡುತ್ತಿದೆ. ಬಂಡವಾಳವೆಚ್ಚವನ್ನು ರಾಜ್ಯಗಳ ಮೂಲಕ ಮಾಡಿಸುವುದರಿಂದ ಅನುಷ್ಠಾನದಲ್ಲಿನ ಸವಾಲುಗಳನ್ನು ನಿವಾರಿಸಲುಹೆಚ್ಚು ಸಂಪನ್ಮೂಲ ಲಭ್ಯವಾದಂತೆ, ಕೊನೆಯ ಹಂತದ ಅನುಷ್ಠಾನಕ್ಕೆ ಸುಧಾರಣೆ ತಂದಂತೆ ಆಗುತ್ತದೆ.

- ಅರ್ಥವ್ಯವಸ್ಥೆಯ ದೃಷ್ಟಿಯಿಂದ ಈನಡೆಯು ಹಲವು ಉದ್ದೇಶಗಳನ್ನು ಈಡೇರಿಸುತ್ತದೆ. ಮೂಲ ಸೌಕರ್ಯದ ಮೇಲಿನ ಸರ್ಕಾರದ ಹೂಡಿಕೆಯು ಖಾಸಗಿ ಹೂಡಿಕೆ ಬರುವುದಕ್ಕೆ ಉತ್ತೇಜನದಂತೆ ಆಗುತ್ತದೆ, ಪೂರೈಕೆ ವ್ಯವಸ್ಥೆಯಲ್ಲಿನ ಅಡ್ಡಿಗಳನ್ನು ನಿವಾರಿಸುತ್ತದೆ. ಹಣದುಬ್ಬರವನ್ನು ಹೆಚ್ಚು ಮಾಡದೆಯೇ ಬೆಳವಣಿಗೆಗೆ ನೆರವಾಗುತ್ತದೆ.
- ತಯಾರಿಕೆಗೆ ನೆರವು ಮಿತಿಯಲ್ಲಿದೆ. ಕೈಗಾರಿಕೆಗಳನ್ನು ನಿರ್ವಹಿಸುವ ಇಲಾಖೆಗಳಿಗೆ ಹಂಚಿಕೆ ಜಾಸ್ತಿ ಆಗಿದ್ದರೂ, ತಯಾರಿಕಾ ವಲಯದ ಆಸ್ತಿಗಳ ಮೇಲಿನ ಹೂಡಿಕೆಯಲ್ಲಿ ಏರಿಕೆ ಆಗಿಲ್ಲ. ಅದರ ಬದಲಿಗೆ ರಫ್ತು ಉತ್ತೇಜನಕ್ಕೆ ಆದ್ಯತೆ ನೀಡಲಾಗಿದೆ. ಇದು ಆರ್ಥಿಕ ಸಮೀಕ್ಷೆಯಲ್ಲಿ ಹೇಳಿರುವ ತಯಾರಿಕಾ ವಲಯದ ಸ್ಪರ್ಧಾತ್ಮಕತೆಯು ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸುವುದರ ಮೇಲೆ, ಅದನ್ನು ಜಾಗತಿಕ ಜಾಲದ ಜೊತೆ ಬೆಸೆಯುವುದರ ಮೇಲೆ ಹೆಚ್ಚು ಅವಲಂಬಿತವಾಗಿದೆ' ಎಂಬ ಮಾತಿಗೆ ಪೂರಕವಾಗುವಂತಿದೆ.
- **ಬಜೆಟ್‌ನಲ್ಲಿನ ಸಂದೇಶ ಏನು?:** ಒಟ್ಟಾಗಿ ನೋಡಿದರೆ ಈ ಬಜೆಟ್ ಹಳೆಯದರ ಮುಂದುವ ರಿಕೆಯನ್ನು ಹಾಗೂ ಒಂದಿಷ್ಟು ಎಚ್ಚರಿಕೆಯನ್ನು ಸೂಚಿಸುತ್ತಿದೆ. ಬಂಡವಾಳ ವೆಚ್ಚವು ಬಜೆಟ್‌ನ ಪ್ರಮುಖ ಅಂಶವಾಗಿ ಮುಂದುವರಿದಿದೆ. ಹಣಕಾಸಿನ ಶಿಸ್ತು ಇದಕ್ಕೆ ನೆರವಿನ ರೂಪದಲ್ಲಿ ನಿಂತಿದೆ. ತಯಾರಿಕಾ ವಲಯಕ್ಕೆ ಉತ್ತೇಜನ ನೀಡುವ ಕ್ರಮಗಳು ಇವೆ. ಆದರೆ ಅವುಗಳನ್ನು ಬಾಹ್ಯ ಬದಲಾವಣೆಗಳಿಗೆ, ಬಾಹ್ಯ ಅಂಶಗಳಿಗೆ ಅನುಗುಣವಾಗಿ, ಅವುಗಳಿಗೆ ಹೊಂದಿಕೆಯಾಗುವಂತೆ ಜಾರಿಗೆ ತರಲಾಗುತ್ತದೆ.

## ❖ ಪರಮಾಣು ಇಂಧನಕ್ಕೆ ಒತ್ತು

**ಸಂದರ್ಭ: ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆ ಯನ್ನು ಬದಲಾಯಿಸುವ ಅಗತ್ಯತೆ ಹಿನ್ನೆಲೆ ಯಲ್ಲಿ ಪರಮಾಣು ಶಕ್ತಿ ಇಂಧನ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಾಗಿದೆ.**

- 'ದೇಶದ ಎಲ್ಲಾ ಪರಮಾಣುಗಳ ಈಗಿ ರುವ ಸಾಮರ್ಥ್ಯ ವಿಸ್ತರಿಸುವ ನಿಟ್ಟಿನಲ್ಲಿ ಇಂಧನ ಯೋಜನೆಗಳಿಗೆ ಅಗತ್ಯ ವಾದ ಸರಕುಗಳ ಮೇಲಿನ ಮೂಲ ಕಸ್ಟಮ್ ಸುಂಕವನ್ನು 2035ರವರೆಗೆ ವಿಸ್ತರಿಸಲಾಗುತ್ತದೆ' ಎಂದು ನಿರ್ಮಲಾ ಪ್ರಕಟಿಸಿದರು.
- ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತವು 500 ಗಿಗಾವಾಟ್ ಉತ್ಪಾದನೆಯಗುರಿ ಹೊಂದಿದ್ದು, ಈ ಪ್ರೋತ್ಸಾಹವು ಮಹತ್ತ ಪಡೆದುಕೊಂಡಿದೆ.
- ಜೈವಿಕ ಅನಿಲ ಮಿಶ್ರಿತ ಸಿಎನ್‌ಜಿ (ಸಾಂದ್ರಿಕೃತ ನೈಸರ್ಗಿಕ ಅನಿಲ) ಮೇಲೆ ಪಾವತಿಸಬೇಕಾದ ಕೇಂದ್ರ ಅಬಕಾರಿ ಸುಂಕಲೆಕ್ಕಾಚಾರ ಮಾಡುವ ವೇಳೆ ಜೈವಿಕ ಇಂಧನ ಸಂಪೂರ್ಣಮೌಲ್ಯವನ್ನು ಸುಂಕದಿಂದಲೇ ಹೊರಗಿಡಲಾಗಿದೆ.

Dr. Rajkumar IAS, KAS Academy

## ❖ ಸೀಮಿತ 'ಕಲ್ಯಾಣ', ರಾಜ್ಯಗಳ ಹೊರೆ ಉಲ್ಬಣ



### ವಿಶ್ಲೇಷಣೆ

**ವಸಂತ ಕಲಾಲ್**

ಸರ್ವರನ್ನು ಒಳಗೊಳ್ಳುವಂತೆ ಅನಿಸಿದರೂ, ಸಾರ್ವಜನಿಕ ಹೊಣೆಗಾರಿಕೆಯಿಂದ ಸರ್ಕಾರವು ದೂರ ಸರಿಯುತ್ತಿರುವುದನ್ನು ಪ್ರಸ್ತುತ ಬಜೆಟ್ ತೋರಿಸುತ್ತಿದೆ.

ಶಿಕ್ಷಣ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಸುಮಾರು ₹1,39,285.95 ಕೋಟಿ (ಜಿಡಿಪಿಯಲ್ಲಿ ಶೇ 2.7ರಷ್ಟು) ಘೋಷಿಸಲಾಗಿದೆ. ಆದರೆ, ಇದರಲ್ಲಿ ಕೇಂದ್ರದ ಪಾಲು ಶೇ 0.5 ಮಾತ್ರ. ರಾಜ್ಯ ಸರ್ಕಾರಗಳೇ ಉಳಿದ ಶೇ 2.2 ರಷ್ಟು ಭರಿಸಬೇಕು. ಜಿಡಿಪಿಯಲ್ಲಿ ಶಿಕ್ಷಣ ವೆಚ್ಚದ ಪಾಲು ಇನ್ನೂ ಸುಮಾರು ಶೇ 2.7–ಶೇ 2.9ರಲ್ಲೇ ನಿಂತಿದ್ದು, ಶೇ 6ರ ಗುರಿಯಿಂದ ಇದು ಬಹಳ ದೂರದಲ್ಲಿದೆ. ಉದ್ಯೋಗ ಮಾರುಕಟ್ಟೆಗೆ ಅಗತ್ಯವಾದ ಮಾನವ ಸಂಪತ್ತನ್ನು ಉತ್ಪಾದಿಸುವ ಸಂಶೋಧನೆ ಮತ್ತು ಅಭಿವೃದ್ಧಿಯ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವೇ ಇಲ್ಲ.

ಆರೋಗ್ಯ ಕ್ಷೇತ್ರದಲ್ಲಿಯೂ ಇದೇ ಚಿತ್ರಣ ಕಾಣಿಸುತ್ತದೆ. ಆರೋಗ್ಯಕ್ಕೆ ನೀಡಲಾಗುವ ಮೊತ್ತದಲ್ಲಿ ಶೇ 10ರಷ್ಟು ಏರಿಸಿ ₹1,06,530 ಕೋಟಿ ಘೋಷಿಸಲಾಗಿದೆ. ಇದು ಜಿಡಿಪಿಯ ಶೇ 1.8ರಷ್ಟಿದೆ. ಇದರಲ್ಲಿ ಜಿಡಿಪಿಯ ಶೇ 0.3–ಶೇ 0.4 ರಷ್ಟು ಹಣವನ್ನು ಮಾತ್ರ ಕೇಂದ್ರ ಭರಿಸಲಿದ್ದು, ಉಳಿದದ್ದನ್ನು ರಾಜ್ಯ ಸರ್ಕಾರಗಳು ಭರಿಸಬೇಕು. ಆರೋಗ್ಯ ಕ್ಷೇತ್ರಕ್ಕೆ ಒದಗಿಸಿರುವ ಬಜೆಟ್ ಪ್ರಮಾಣವು ಜಾಗತಿಕ ಸರಾಸರಿ ಮಟ್ಟಕ್ಕಿಂತ ಅತಿ ಕಡಿಮೆಯಿದೆ. 2025ರ ವೇಳೆಗೆ ಜಿಡಿಪಿಯ ಶೇ 2.5ರಷ್ಟು ವೆಚ್ಚವನ್ನು ಆರೋಗ್ಯಕ್ಕೆ ವ್ಯಯಿಸುವುದಾಗಿ 2017ರ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಸರ್ಕಾರ ಆ ಗುರಿ ತಲುಪುವಲ್ಲಿ ವಿಫಲವಾಗಿದೆ. ಬಜೆಟ್‌ನ ಬಹುಪಾಲು ಹಣ 'ಆಯುಷ್ಮಾನ್ ಭಾರತ'ದಂತಹ ವಿಮಾ ಆಧಾರಿತ ಯೋಜನೆಗಳಿಗೆ ಮತ್ತು ಆಸ್ಪತ್ರೆಗಳ ನಿರ್ವಹಣೆಗೆ ವ್ಯಯವಾಗುತ್ತಿದೆ. ಎರಡು ವರ್ಷದ ಹಿಂದೆ ಘೋಷಿಸಲಾಗಿದ್ದ ಹೊಸ ಏಮ್ಸ್‌ಗಳ ನಿರ್ಮಾಣ ಇನ್ನೂ ಮಂದ ಗತಿಯಲ್ಲೇ ಸಾಗುತ್ತಿದೆ. ಪೂರ್ಣಕಾಲಿಕ ವೈದ್ಯರು ಮತ್ತು ನರ್ಸ್‌ಗಳ ನೇಮಕ ಹಾಗೂ ಗ್ರಾಮೀಣ ಆರೋಗ್ಯ ಮೂಲಸೌಕರ್ಯದ ವಿಸ್ತರಣೆ ಸಾಕಷ್ಟು ವೇಗದಲ್ಲಿ ನಡೆಯುತ್ತಿಲ್ಲ. ಔಷಧಿ, ವೈದ್ಯಕೀಯ ಉಪಕರಣಗಳು ಮತ್ತು ವೈದ್ಯಕೀಯ ಸಿಬ್ಬಂದಿಯ ವೆಚ್ಚಗಳು ವೇಗವಾಗಿ ಹೆಚ್ಚುತ್ತಿವೆ. ಆರೋಗ್ಯ ವೆಚ್ಚವನ್ನು ನಾಮಕಾವಸ್ತೆ ಏರಿಸುವುದರಿಂದ ಯಾವುದೇ ಅನುಕೂಲವಿಲ್ಲ. ಆರೋಗ್ಯ ಕ್ಷೇತ್ರವನ್ನು ಸುಧಾರಿಸುವ ಬದಲು ಅವುಗಳನ್ನು ಆರೋಗ್ಯ ವಿಮಾ ವ್ಯವಸ್ಥೆಯ ಮೂಲಕ ನಿರ್ವಹಿಸುವಂತಹ ಕ್ರಮಗಳನ್ನು ಬಜೆಟ್ ಸೂಚಿಸುತ್ತಿದೆ.

ಕೈಗಾರಿಕಾ ನೀತಿಯಲ್ಲಿ ಸರ್ಕಾರವು ದೇಶೀಯ ಕೈಗಾರಿಕೆಗಳನ್ನು ನಿರ್ಮಿಸುವುದಕ್ಕಿಂತ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದರ ಮೇಲೆ ಹೆಚ್ಚು ಅವಲಂಬಿತವಾಗಿದೆ. ದತ್ತಾಂಶ ಕೇಂದ್ರಗಳು ಮತ್ತು ಡಿಜಿಟಲ್ ಆಧಾರಿತ ಸಂಸ್ಥೆಗಳಿಗೆ ತೆರಿಗೆ ರಿಯಾಯಿತಿ ಮತ್ತು ನಿಯಂತ್ರಣ ಸಡಿಲಿಕೆಗಳನ್ನು ಈ ಬಜೆಟ್‌ನಲ್ಲಿ ನೀಡಲಾಗಿದೆ. ಆದರೆ ಇವು ಕೇವಲ ಅಲ್ಪ ಪ್ರಮಾಣದ ಉದ್ಯೋಗವನ್ನು ಮಾತ್ರ ಸೃಷ್ಟಿಸುತ್ತವೆ. ಮೂಲ ಕೈಗಾರಿಕೆಗಳ ಪುನಶ್ಚೇತನ ಮತ್ತು ಅಭಿವೃದ್ಧಿ ಕುರಿತಂತೆ ಏಳು ಪ್ರಮುಖ ವಲಯಗಳನ್ನು ಈ ಬಾರಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಇದು ಒಂದು ಒಳ್ಳೆಯ ಬೆಳವಣಿಗೆ. ಆದರೆ ಇದು ಎಷ್ಟು ಸಾಧ್ಯವಾಗುತ್ತದೆ ಎನ್ನುವುದನ್ನು ಕಾದು ನೋಡಬೇಕು. ಇನ್ನೊಂದು ಮುಖ್ಯ ಅಂಶವೆಂದರೆ, ಕಾರ್ಮಿಕರ ಸಾಮಾಜಿಕ ಭದ್ರತೆಯ ಯೋಜನೆಗಳಿಗೆ ಹಿಂದಿನ ಬಜೆಟ್‌ಗಿಂತ ₹128 ಕೋಟಿ ಹಣವನ್ನು ಕಡಿಮೆಗೊಳಿಸಿದೆ. ಹೊಸ ಉದ್ಯೋಗ ಯೋಜನೆಗಳು ಉದ್ಯೋಗದಾತರಿಗೆ ಸಾಲದ ಪ್ರೋತ್ಸಾಹ ನೀಡುವಿಕೆಗೆ ಮಾತ್ರ ಸೀಮಿತವಾಗಿದ್ದು, ಹೆಚ್ಚುತ್ತಿರುವ ಅಸಂಘಟಿತ ವಲಯ, ಕಾರ್ಮಿಕರ ಉದ್ಯೋಗ ಭದ್ರತೆ ಬಗ್ಗೆ ಈ ಬಜೆಟ್ ಹೆಚ್ಚೇನೂ ಪ್ರಸ್ತಾಪಿಸಿಲ್ಲ. ಅದೇ ಸಮಯದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ನೀಡಲಾಗುವ ಅನುದಾನದ ಪ್ರಮಾಣವನ್ನು ಸರ್ಕಾರ ಹೆಚ್ಚಳ ಮಾಡಿದ್ದರೂ ಅದರ ಹೊರೆ ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರಗಳ ಮೇಲೆಯೇ ಇರಲಿದೆ.

ಕಳೆದ 5 ವರ್ಷಗಳಲ್ಲಿ ಕಾರ್ಪೊರೇಟ್ ಲಾಭವು ಶೇ 180ಕ್ಕೂ ಹೆಚ್ಚು ಏರಿಕೆಯಾಗಿದ್ದರೆ, ಕಾರ್ಪೊರೇಟ್ ತೆರಿಗೆ ಸಂಗ್ರಹವು ಸುಮಾರು ಶೇ 110ರಷ್ಟು ಮಾತ್ರ ಏರಿಕೆಯಾಗಿದೆ. ಇದೇ ಸಮಯದಲ್ಲಿ ತೆರಿಗೆ ಭಾರವನ್ನು ಕ್ರಮೇಣ ವೈಯಕ್ತಿಕ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಮುಂತಾದ ಪರೋಕ್ಷ ತೆರಿಗೆಗಳ ಮೂಲಕ ಸಾಮಾನ್ಯ ಜನರೇ ಹೊರುವಂತಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಈ ಬಜೆಟ್‌ನಲ್ಲಿ ಜನಕಲ್ಯಾಣದಂತಹ ಯೋಜನೆಗಳನ್ನು ನಿರ್ವಹಣೆ ಮತ್ತು ಪಿಂಚಣಿಗಳ ಮಟ್ಟಕ್ಕೆ ಮಾತ್ರಕ್ಕೆ ಸೀಮಿತಗೊಳಿಸಲಾಗಿದೆ. ಜಿಡಿಪಿ ಮಟ್ಟ ಹೆಚ್ಚಾದರೂ ಉದ್ಯೋಗಗಳು ಸೃಷ್ಟಿಯಾಗುವುದರಲ್ಲಿನ ವೈಫಲ್ಯವನ್ನು ಬಜೆಟ್ ಅಂಕಿಅಂಶಗಳು ಸೂಚಿಸುತ್ತಿವೆ.

ಲೇಖಕ: ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿ

## ದೇಶದ ಪುರಾತತ್ವ ಸ್ಥಳಗಳ ದಾಖಲೆ ಡಿಜಿಟಲೀಕರಣ



ದೇಶದಾದ್ಯಂತ ಇರುವ ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ಥಳಗಳು ಸೇರಿದಂತೆ ಪ್ರಮುಖ ಪುರಾತತ್ವ ತಾಣಗಳ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ರಾಷ್ಟ್ರೀಯ ಮಟ್ಟದ ಡಿಜಿಟಲ್ ವೇದಿಕೆಯನ್ನು ಸ್ಥಾಪಿಸುವುದಾಗಿ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ.

ಲೋಥಲ್ ಮತ್ತು ಲೇಹ್ ಅರಮನೆ ಸೇರಿದಂತೆ ದೇಶದ 15 ಪುರಾತತ್ವ ಸ್ಥಳಗಳನ್ನು 'ವೈಭವಯುತ ಸಾಂಸ್ಕೃತಿಕ ತಾಣ'ಗಳನ್ನಾಗಿ ಅಭಿವೃದ್ಧಿಪಡಿಲಾಗುವುದು ಎಂದು ತಿಳಿಸಿದೆ.

ಇದರಿಂದಾಗಿ ಸ್ಥಳೀಯ ಸಂಶೋಧಕರಿಗೆ, ಇತಿಹಾಸಕಾರರಿಗೆ, ತಂತ್ರಜ್ಞಾನ ಕೌಶಲವಿರುವವರಿಗೆ ಉದ್ಯೋಗ ಸೃಷ್ಟಿಯಾಗಲಿದೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

### ಒಳನಾಡಿನ ಜಲಮಾರ್ಗಕ್ಕೆ ಒತ್ತು

ರಸ್ತೆ ಮತ್ತು ರೈಲು ಮಾರ್ಗದಲ್ಲಿ ಸರಕು ಸಾಗಣೆಯ ಒತ್ತಡವನ್ನು ಕಡಿಮೆಗೊಳಿಸಲು ಒಳನಾಡಿನ ಜಲಮಾರ್ಗಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. 2047ರ ವೇಳೆಗೆ ಒಳನಾಡಿನ ಜಲಮಾರ್ಗ ಮತ್ತು ಕರಾವಳಿಯಲ್ಲಿ ಸಾಗಣೆಯ ಪಾಲನ್ನು ಶೇ 6ರಿಂದ ಶೇ 12ಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ. ಒಡಿಶಾದಲ್ಲಿ ಮುಂದಿನ ಐದು ವರ್ಷಗಳಲ್ಲಿ 20 ಹೊಸ ರಾಷ್ಟ್ರೀಯ ಜಲಮಾರ್ಗಗಳನ್ನು ಕಾರ್ಯಗತಗೊಳಿಸಲಾಗುವುದು ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

ಅಗತ್ಯ ಮಾನವಶಕ್ತಿಯ ಅಭಿವೃದ್ಧಿಗೆ ಪ್ರಾದೇಶಿಕ ಶ್ರೇಷ್ಠತಾ ಕೇಂದ್ರಗಳಾಗಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಇದು ಜಲಮಾರ್ಗಗಳ ಕುರಿತು ಯುವ ಜನರಿಗೆ ತರಬೇತಿ ನೀಡುತ್ತದೆ. ಅಲ್ಲದೆ ಒಳನಾಡಿನ ಮಾರ್ಗಗಳಲ್ಲಿ ಸಂಚರಿಸುವ ಹಡಗುಗಳ ದುರಸ್ತಿಗಾಗಿ ವಾರಾಣಸಿ ಮತ್ತು ಪಟ್ನಾದಲ್ಲಿ ದುರಸ್ತಿ ಕೇಂದ್ರ ನಿರ್ಮಿಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.



# ರೈಲ್ವೆ: ಏಳು ಹೈಸ್ಪೀಡ್ ಕಾರಿಡಾರ್

### ಬೆಂಗಳೂರು– ಹೈದರಾಬಾದ್, ಬೆಂಗಳೂರು– ಚೆನ್ನೈಗೆ ಒಲಿದ ಅತಿ ವೇಗದ ರೈಲು ಮಾರ್ಗ

ಪ್ರಜಾವಾಣಿ ವಾರ್ತೆ/ಪಿಟಿಐ

**ನವದೆಹಲಿ:** ಬೆಂಗಳೂರು-ಹೈದರಾಬಾದ್, ಬೆಂಗಳೂರು-ಚೆನ್ನೈ ಸೇರಿದಂತೆ ದೇಶದ ವಿವಿಧ ನಗರಗಳ ನಡುವಿನ ಸಂಪರ್ಕ ಸೌಲಭ್ಯವನ್ನು ಇನ್ನಷ್ಟು ವೃದ್ಧಿಸಲು ಏಳು ಹೊಸ ಹೈಸ್ಪೀಡ್ ರೈಲ್ವೆ ಕಾರಿಡಾರ್‌ಗಳ ಯೋಜನೆಯನ್ನು ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಲಿದೆ.

ಈ ಕುರಿತು ಅದು 2026-27ರ ಬಜೆಟ್‌ನಲ್ಲಿ ಪ್ರಕಟಿಸಿದೆ. ಮುಂಬೈ-ಪುಣೆ, ಪುಣೆ-ಹೈದರಾಬಾದ್, ಹೈದರಾಬಾದ್-ಚೆನ್ನೈ, ದೆಹಲಿ-ವಾರಾಣಸಿ, ವಾರಾಣಸಿ-ಸಿಲಿಗುರಿ ನಡುವೆಯೂ ಹೈಸ್ಪೀಡ್ ರೈಲ್ವೆ ಕಾರಿಡಾರ್ ನಿರ್ಮಿಸುವ ಕುರಿತು ಉಲ್ಲೇಖಿಸಲಾಗಿದೆ. ನಗರಗಳ ನಡುವಿನ ಪ್ರಯಾಣದ ಅವಧಿಯನ್ನು ಕಡಿಮೆಗೊಳಿಸುವುದು ಇದರ ಉದ್ದೇಶ.

'ಪರಿಸರ-ಸುಸ್ಥಿರ ಪ್ರಯಾಣದ ವ್ಯವಸ್ಥೆಯನ್ನು ಉತ್ತೇಜಿಸಲು ಈ ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು. ಇವು ವಿವಿಧ ನಗರಗಳ ನಡುವೆ ಸಂಪರ್ಕವನ್ನು ಇನ್ನಷ್ಟು ವೃದ್ಧಿಸಲು ಸಹಕಾರಿ ಆಗಲಿವೆ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಭಾಷಣದಲ್ಲಿ ಹೇಳಿದರು.



ಪ್ರಸ್ತುತ, ಅಹಮದಾಬಾದ್ ಮತು ಮುಂಬೈ ನಡುವೆ ಒಂದು ಹೈಸ್ಪೀಡ್ ಕಾರಿಡಾರ್‌ನ ಕಾಮಗಾರಿ ಪ್ರಗತಿಯಲ್ಲಿದೆ.

**ಸರಕು ಸಾಗಣೆಗೆ ಪ್ರತ್ಯೇಕ ಕಾರಿಡಾರ್:** ಪಶ್ಚಿಮ ಬಂಗಾಳದ ಡಂಕುನಿ ಮತ್ತು ಗುಜರಾತ್‌ನ ಸೂರತ್ ನಡುವೆ ಸರಕು ಸಾಗಣೆಗೆ ಮೀಸಲಾದ ಕಾರಿಡಾರ್ ಅಭಿವೃದ್ಧಿಪಡಿಸಲಾಗುವುದು ಎಂದೂ ಪ್ರಸ್ತಾಪಿಸಲಾಗಿದೆ.

ಪ್ರಸ್ತುತ ಸರಕು ಸಾಗಣೆಗೆಂದೇ ಮೀಸಲಾದ ಎರಡು ಕಾರಿಡಾರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಅವು ದೇಶದ ಪೂರ್ವ ಮತ್ತು ಪಶ್ಚಿಮದ ವಿವಿಧ ರಾಜ್ಯಗಳು ಮತ್ತು ಜಿಲ್ಲೆಗಳನ್ನು ಸಂಪರ್ಕಿಸುತ್ತಿವೆ.

**ಹೆದ್ದಾರಿ ಸಚಿವಾಲಯಕ್ಕೆ ₹3.09 ಲಕ್ಷ ಕೋಟಿ:** ರಸ್ತೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಈ ಬಾರಿ ₹3.09 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದ್ದು, ಇದು ಕಳೆದ ವರ್ಷಕ್ಕಿಂತ ಶೇ 8ರಷ್ಟು ಹೆಚ್ಚಳವಾಗಿದೆ. ಅದರಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ₹1.87 ಲಕ್ಷ ಕೋಟಿ ಹಂಚಲಾಗಿದೆ.

**ವಿಮಾನ ತಯಾರಿಕೆಗೆ ಕಸ್ಟಮ್ಸ್ ಸುಂಕ ವಿನಾಯಿತಿ:** ನಾಗರಿಕ, ತರಬೇತಿ ಮತ್ತು ಇತರ ವಿಮಾನಗಳ ತಯಾರಿಕೆಗೆ ಅಗತ್ಯವಿರುವ ಘಟಕಗಳು ಮತ್ತು ಬಿಡಿ ಭಾಗಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕಕ್ಕೆ ಬಜೆಟ್‌ನಲ್ಲಿ ವಿನಾಯಿತಿ ಘೋಷಿಸಲಾಗಿದೆ. ಅಲ್ಲದೆ ರಕ್ಷಣಾ ವಲಯದ ಘಟಕಗಳಿಂದ ನಿರ್ವಹಣೆ, ದುರಸ್ತಿಗೆ ಬಳಸಲಾಗುವ ವಿಮಾನದ ಭಾಗಗಳ ತಯಾರಿಕೆಗಾಗಿ ಆಮದು ಮಾಡಿಕೊಳ್ಳುವ ಕಚ್ಚಾ ವಸ್ತುಗಳ ಮೇಲಿನ ಕಸಮ್ ಸುಂಕಕೂ ವಿನಾಯಿತಿ ನೀಡಲಾಗಿದೆ.

### ಬೆಂಗಳೂರು ಸಬ್ ಅರ್ಬನ್‌ಗೆ ₹500 ಕೋಟಿ

ಬೆಂಗಳೂರು ಸಬ್ ಅರ್ಬನ್ ಯೋಜನೆಗೆ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ₹500 ಕೋಟಿ ಒದಗಿಸಲಾಗಿದೆ. ಕಳೆದ ವರ್ಷ ₹350 ಕೋಟಿ ಹಂಚಿಕೆ ಮಾಡಲಾಗಿತ್ತು.

ಒಟ್ಟಾರೆ ರೈಲ್ವೆ ಸಚಿವಾಲಯಕ್ಕೆ ಈ ಬಾರಿ ₹2,77,830 ಕೋಟಿ ಹಂಚಿಕೆ ಮಾಡಲಾಗಿದೆ. ಇದು ಕಳೆದ ಬಜೆಟ್‌ಗಿಂತ ₹25,830 ಕೋಟಿ ಹೆಚ್ಚು. ಇದಲ್ಲದೆ ಹೆಚ್ಚುವರಿ ಬಜೆಟ್ ಸಂಪನ್ಮೂಲಗಳಿಂದ ₹15,000 ಕೋಟಿ ಒದಗಿಸಲಾಗುವುದು ಎಂದು ಉಲ್ಲೇಖಿಸಲಾಗಿದೆ.

ಪ್ರಸಕ್ತ ವರ್ಷ ಹೊಸ ರೈಲ್ವೆ ಮಾರ್ಗಗಳಿಗೆ ₹36,722 ಕೋಟಿ, ದ್ವಿಪಥ ಹಳಿ ನಿರ್ಮಾಣಕ್ಕೆ ₹37,750 ಕೋಟಿ, ರೈಲ್ವೆ ಬೋಗಿ ಸೇರಿದಂತೆ ರೋಲಿಂಗ್ ಸ್ಟಾಕ್‌ಗೆ ₹52,109 ಕೋಟಿ, ಹಳಿ ನವೀಕರಣಕ್ಕೆ ₹22,853 ಕೋಟಿ, ರೈಲ್ವೆ ಮೇಲ್ಸೇತುವೆ, ಕೆಳಸೇತುವೆಗೆ ₹8,225 ಕೋಟಿ, ಸಿಗ್ನಲಿಂಗ್ ಮತ್ತು ಟೆಲಿಕಾಂಗೆ ₹7,500 ಕೋಟಿ, ವಿದ್ಯುದೀಕರಣ ಯೋಜನೆಗೆ ₹5,000 ಕೋಟಿ, ಗೇಜ್ ಪರಿವರ್ತನೆಗೆ ₹4,600 ಕೋಟಿ ಹಂಚಿಕೆ ಮಾಡಲಾಗಿದೆ.

### 4,000 ಕಿ.ಮೀ ವ್ಯಾಪ್ತಿ, ₹16,000 ಕೋಟಿ ಹೂಡಿಕೆ


ಬಜೆಟ್‌ನಲ್ಲಿ ಘೋಷಿಸಲಾಗಿರುವ ಏಳು ಹೈಸ್ಪೀಡ್ ರೈಲ್ವೆ ಕಾರಿಡಾರ್‌ಗಳು ದೇಶದ ವಿವಿಧ ಭಾಗಗಳನ್ನು ಸಂಪರ್ಕಿಸಲಿದ್ದು, ಒಟ್ಟು 4,000 ಕಿ.ಮೀನಷ್ಟು ವ್ಯಾಪ್ತಿ ಹೊಂದಿರಲಿವೆ. ಇವು ಸುಮಾರು ₹16,000 ಕೋಟಿಯಷ್ಟು ಹೂಡಿಕೆಯನ್ನು ಆಕರ್ಷಿಸುತ್ತವೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಬೆಂಗಳೂರು–ಚೆನ್ನೈ–ಹೈದರಾಬಾದ್ ಕಾರಿಡಾರ್‌ಗಳು ದಕ್ಷಿಣ ರಾಜ್ಯಗಳಲ್ಲಿ ಹೈಸ್ಪೀಡ್ 'ಟ್ರೈಯಾಂಗಲ್' ಅನ್ನು ರೂಪಿಸಲಿವೆ. ಇದರಿಂದ ಕರ್ನಾಟಕ, ಕೇರಳ, ಆಂಧ್ರ ಪ್ರದೇಶ, ತಮಿಳುನಾಡು, ತೆಲಂಗಾಣ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಗೆ ಪ್ರಯೋಜನವಾಗಲಿದೆ ಎಂದರು.

ಚೆನ್ನೈ–ಬೆಂಗಳೂರು, ಬೆಂಗಳೂರು–ಹೈದರಾಬಾದ್ ಮತ್ತು ಚೆನ್ನೈ–ಹೈದರಾಬಾದ್ ನಡುವಿನ ಪ್ರಯಾಣದ ಅವಧಿಯು ಕ್ರಮವಾಗಿ 1.13 ಗಂಟೆ, 2 ಗಂಟೆ ಹಾಗೂ 2.55 ಗಂಟೆಗೆ ತಗ್ಗಲಿದೆ ಎಂದು ಅವರು ವಿವರಿಸಿದರು.

ಹಾಗೆಯೇ ಮುಂಬೈ–ಪುಣೆ ನಡುವಿನ ಪ್ರಯಾಣ 48 ನಿಮಿಷಕ್ಕೆ, ಪುಣೆ–ಹೈದರಾಬಾದ್ ನಡುವಿನ ಪ್ರಯಾಣ 1.55 ಗಂಟೆಗೆ, ವಾರಾಣಸಿ–ಸಿಲಿಗುರಿ ನಡುವಿನ ಪ್ರಯಾಣ 2.55 ಗಂಟೆಗೆ, ದೆಹಲಿ–ವಾರಾಣಸಿ ನಡುವಿನ ಪ್ರಯಾಣದ ಅವಧಿ 3.50 ಗಂಟೆಗೆ ಇಳಿಯಲಿದೆ ಎಂದರು.

### ರೈಲ್ವೆ: ಸಾರ್ವಕಾಲಿಕ ಗರಿಷ್ಠ ಹಂಚಿಕೆ




### ಹಳಿ ನವೀಕರಣಕ್ಕೆ ಕಡಿಮೆ ಅನುದಾನ





ರೈಲ್ವೆ ಸುರಕ್ಷತೆಯಲ್ಲಿ ಹಳಿ ನವೀಕರಣವು ಬಹುಮುಖ್ಯ ಭಾಗವಾಗಿದೆ. ಆದರೆ, ಇದಕ್ಕೆ ಕಳೆದ ಬಾರಿ ಬಜೆಟ್‌ನಲ್ಲಿ ಮೀಸಲಿಟ್ಟಿದ್ದ ಹಣಕ್ಕಿಂತ ಕಡಿಮೆ ಹಂಚಿಕೆ ಮಾಡಲಾಗಿದೆ. 2025–26ನೇ ಆರ್ಥಿಕ ವರ್ಷದಲ್ಲಿ ಅಂದಾಜಿಸಿದಂತೆ 7,500 ಕಿ.ಮೀಗೂ ಹೆಚ್ಚು ಉದ್ದಕ್ಕೆ ಹಳಿ ನವೀಕರಣ ಕಾಮಗಾರಿ ನಡೆಯುತ್ತಿದೆ ಎಂದು ರೈಲ್ವೆ ಸಚಿವಾಲಯ ಹೇಳಿತ್ತು. ಅದರಂತೆ ಇದಕ್ಕಾಗಿ ₹25,166 ಕೋಟಿ ಅನುದಾನ ಮೀಸಲಿಟ್ಟಿತ್ತು. ಆದರೆ, 2026–27ರಲ್ಲಿ 7,900 ಕಿ.ಮೀ ಉದ್ದದ ಹಳಿ ನವೀಕರಣ ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. ಕಳೆದ ಬಾರಿಗಿಂತ ಹಳಿ ನವೀಕರಣ ಮಾಡುವ ಗುರಿಯನ್ನು ಹೆಚ್ಚಿಸಲಾಗಿದೆ. ಆದರೆ, ಅನುದಾನ ಕಡಿತ ಮಾಡಲಾಗಿದೆ.

ಆಧಾರ: ಪಿಐಬಿ, ಬಜೆಟ್ ದಾಖಲೆ

## ನಗರಾಭಿವೃದ್ಧಿ

### 2ನೇ ಮತ್ತು 3ನೇ ಹಂತದ ನಗರಗಳಿಗೆ ₹5 ಸಾವಿರ ಕೋಟಿ




ಎರಡನೇ ಮತ್ತು ಮೂರನೇ ಹಂತದ ಮತ್ತು ಧಾರ್ಮಿಕ ಕೇಂದ್ರಗಳಿರುವ ನಗರ ಮತ್ತು ಪಟ್ಟಣ ಪ್ರದೇಶಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಅಂಥ ನಗರಗಳ ಮೂಲಸೌಕರ್ಯ ಮತ್ತು ಆಧುನೀಕರಣದತ್ತ ಗಮನ ಹರಿಸಲಾಗುತ್ತದೆ. ನಗರದ ಅಭಿವೃದ್ಧಿಯ ವೇಗವರ್ಧಕಗಳಾಗಿರುವ ಆರ್ಥಿಕ ಪ್ರದೇಶಗಳಲ್ಲಿ (ಸಿಇಆರ್) ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು 5 ವರ್ಷಗಳಲ್ಲಿ ಪ್ರತಿ ಸಿಇಆರ್‌ಗೆ ₹5 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ.

### ಮುನ್ಸಿಪಲ್ ಬಾಂಡ್‌ಗಳಿಗೆ ₹100 ಕೋಟಿ ಪ್ರೋತ್ಸಾಹಧನ

ದೊಡ್ಡ ನಗರಗಳಲ್ಲಿ ಅಧಿಕ ಮೌಲ್ಯದ ಮುನ್ಸಿಪಲ್ ಬಾಂಡ್‌ಗಳ ಒದಗಿಸುವುದನ್ನು ಉತ್ತೇಜಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ₹1,000 ಕೋಟಿಗಿಂತ ಹೆಚ್ಚಿನ ಬಾಂಡ್‌ಗಳ ವಿತರಣೆಯ ಮೂಲಕ ಮೂಲ ಸೌಕರ್ಯ ಅಭಿವೃದ್ಧಿಗೆ ಸಾಲ ಪಡೆಯುವುದರ ಮೇಲೆ ₹ 100 ಕೋಟಿ ಪ್ರೋತ್ಸಾಹಧನ ಘೋಷಿಸಲಾಗಿದೆ.

ಸಣ್ಣ ಮತ್ತು ಮಧ್ಯಮ ಹಂತದ ನಗರಗಳಿಗೆ ನೆರವು ನೀಡಲು ₹200 ಕೋಟಿವರೆಗಿನ ಮೌಲ್ಯದ ಬಾಂಡ್‌ಗಳಿಗೆ ಅಮೃತ ಯೋಜನೆಯಡಿ ನೀಡಲಾಗುವ ಪ್ರೋತ್ಸಾಹಧನ ಮುಂದುವರಿಸಲಾಗುವುದು ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.



# ಬಂಡವಾಳ ವೆಚ್ಚ: ₹12.22 ಲಕ್ಷ ಕೋಟಿ ನಿಗದಿ

ನವದೆಹಲಿ (ಪಿಟಿಐ): ದೇಶದ ಬಂಡವಾಳ ವೆಚ್ಚವು 2026–27ರ ಸಾಲಿನಲ್ಲಿ ದಾಖಲೆಯ ಗರಿಷ್ಠ ಮಟ್ಟ ತಲುಪಲಿದೆ. ದೇಶದ ಜಿಡಿಪಿಯ ಗಾತ್ರದ ಶೇ 4.4 ರಷ್ಟನ್ನು, ಅಂದರೆ ₹12.22 ಲಕ್ಷ ಕೋಟಿಯನ್ನು ಬಂಡವಾಳ ವೆಚ್ಚಗಳಿಗಾಗಿ ಮೀಸಲು ಇಡಲಾಗಿದೆ. ಈ ಮೂಲಕ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ.

ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಿರುವ ಬಂಡವಾಳ ವೆಚ್ಚವು 2025–26ರ ಹಣಕಾಸು ವರ್ಷದಲ್ಲಿ ಘೋಷಿಸಿರುವ ಮೊತ್ತಕ್ಕಿಂತ ಶೇ 10ರಷ್ಟು ಹೆಚ್ಚಾಗಿದೆ. ಕಳೆದ ಬಜೆಟ್‌ನಲ್ಲಿ ₹11.11 ಲಕ್ಷ ಕೋಟಿ ಬಂಡವಾಳ ವೆಚ್ಚವನ್ನು ಘೋಷಿಸಲಾಗಿತ್ತು.

‘ಈ ಬಾರಿಯ ಬಂಡವಾಳ ವೆಚ್ಚವು ಜಿಡಿಪಿಯ ಶೇ 4.4 ರಷ್ಟಿದೆ. ಅಂದರೆ, ಇದು ಕಳೆದ 10 ವರ್ಷಗಳಲ್ಲೇ ಅತ್ಯಧಿಕ. 10 ವರ್ಷಗಳಿಗಿಂತ ಹಿಂದಿನ ಅವಧಿಯ ಅಂಕಿ–ಅಂಶವನ್ನು ನೀವು ತೆಗೆದುಕೊಂಡು ನೋಡಿದರೂ ಈ ಬಾರಿಯದ್ದು ಅತ್ಯಧಿಕವಾಗಿರಬಹುದು’ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು. 2021-22ರಲ್ಲಿ ಬಂಡವಾಳ ವೆಚ್ಚವು ಜಿಡಿಪಿಯ ಶೇ 2.5 ರಷ್ಟು ಮತ್ತು 2024-25ರಲ್ಲಿ ಜಿಡಿಪಿಯ ಶೇಕಡಾ 4ರಷ್ಟಿತ್ತು. 2015-16ರಲ್ಲಿ ಸರ್ಕಾರದ ಬಂಡವಾಳ ವೆಚ್ಚವು ₹2.35 ಲಕ್ಷ ಕೋಟಿಗಳಷ್ಟಿತ್ತು.

ಸಾರಿಗೆ ಮತ್ತು ಸಂಪರ್ಕ ವಲಯಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ವೆಚ್ಚ ನಿಗದಿ ಮಾಡಲಾಗಿದೆ. ರಸ್ತೆ, ಹೆದ್ದಾರಿಗಳು ಮತ್ತು ದೂರಸಂಪರ್ಕ ವಲಯಗಳಿಗೆ ಆದ್ಯತೆ ಲಭಿಸಿದೆ. ರೈಲ್ವೆ ವಲಯಕ್ಕೂ ಹೆಚ್ಚಿನ ಬಂಡವಾಳ ನಿಗದಿ ಮಾಡಲಾಗಿದೆ.

ಬಂಡವಾಳ ವೆಚ್ಚಕ್ಕಾಗಿ ದಾಖಲೆಯ ಮೊತ್ತವನ್ನು ನಿಗದಿಪಡಿಸುವ ಮೂಲಕ, ಪ್ರಮುಖ ನಗರಗಳ ಆಚೆಗೂ ಅಭಿವೃದ್ಧಿಯನ್ನು ವಿಸ್ತರಿಸುವ ಪ್ರಧಾನ ಮಂತ್ರಿಯವರ ಇಚ್ಛೆಯಂತೆ ‘ಭವಿಷ್ಯಕ್ಕೆ ಸಿದ್ಧವಾದ ಭಾರತ’ ನಿರ್ಮಾಣಕ್ಕೆ ಈ ಬಜೆಟ್ ಒತ್ತು ನೀಡಿದೆ ಎಂದು ವಿಶ್ಲೇಷಿಸಲಾಗಿದೆ.




Publication Date
02/02/2026

Presented by

### ಉಡಾನ್: ಶೇ 27ರಷ್ಟು ಅನುದಾನ ಹೆಚ್ಚಳ

ನವದೆಹಲಿ (ಪಿಟಿಐ): 2026–27ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರದ ಮಹತ್ವಾಕಾಂಕ್ಷೆಯ ಪ್ರಾದೇಶಿಕ ವಾಯು ಸಂಪರ್ಕ ಯೋಜನೆಗೆ (ಉಡಾನ್) ಸುಮಾರು ಶೇ27ರಷ್ಟು ಹೆಚ್ಚುವರಿ ಅನುದಾನ ದೊರೆಯಲಿದೆ.

2025–26ನೇ ಸಾಲಿನ ಪರಿಷ್ಕೃತ ಬಜೆಟ್ ಅಂದಾಜಿನ ಪ್ರಕಾರ ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಾಗರಿಕ ವಿಮಾನಯಾನ ಸಚಿವಾಲಯದ ಒಟ್ಟು ಅನುದಾನ ಹಂಚಿಕೆಯನ್ನು ₹4,688.03 ಕೋಟಿಗೆ ನಿಗದಿಪಡಿಸಲಾಗಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ಈ ಅನುದಾನ ಹಂಚಿಕೆ ₹4,669.92 ಕೋಟಿಗೆ ತಲುಪಲಿದೆ.

ಹೀಗಾಗಿ ಉಡಾನ್‌ಗೆ ಹೆಚ್ಚಿನ ಅನುದಾನ ದೊರೆಯುವ ನಿರೀಕ್ಷೆ ಇದೆ. ಪ್ರಸಕ್ತ ವರ್ಷದಲ್ಲಿ ಉಡಾನ್ ಯೋಜನೆಯ ಅನುದಾನ 434.50 ಕೋಟಿ ಆಗಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಇದು ₹550 ಕೋಟಿಗೆ ಏರಿಕೆಯಾಗಲಿದೆ ಎಂದು ಬಜೆಟ್ ದಾಖಲೆಗಳಿಂದ ತಿಳಿದುಬಂದಿದೆ. ಹೀಗಾದರೆ ಉಡಾನ್ ಅನುದಾನ ಹಂಚಿಕೆಯಲ್ಲಿ ಶೇ 27ರಷ್ಟು ಹೆಚ್ಚಳವಾದಂತಾಗುತ್ತದೆ.


ಪ್ರಾದೇಶಿಕ ವಿಮಾನಯಾನ ಕ್ಷೇತ್ರದಲ್ಲಿ ಸುಧಾರಣೆ ತಂದು ವಾಯುಯಾನ ಸೇವೆಯನ್ನು ಉತ್ತೇಜಿಸುವ ಉದ್ದೇಶವನ್ನು ಉಡಾನ್ ಹೊಂದಿದೆ.

# ಚಹಾ ತೋಟಗಳ ಕಾರ್ಮಿಕರಿಗೆ ನೆರವು

ಚಹಾ ತೋಟಗಳ ಕಾರ್ಮಿಕರಿಗಾಗಿ ರೂಪಿಸಲಾಗಿದ್ದ 'ಪ್ರಧಾನ ಮಂತ್ರಿ ಚಾ ಶ್ರಮಿಕ್ ಪ್ರೋತ್ಸಾಹನ್ ಯೋಜನೆ'ಯನ್ನು ಮತ್ತೊಂದು ವರ್ಷ ವಿಸ್ತರಿಸಲಾಗಿದೆ. 2024–25 ಮತ್ತು 2025–26ರ ಬಜೆಟ್‌ನಲ್ಲಿ ಒಟ್ಟು ₹1,000 ಕೋಟಿ ಅನುದಾನದೊಂದಿಗೆ ಯೋಜನೆ ಜಾರಿ ಮಾಡಲಾಗಿತ್ತು. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದ ಚಹಾ ತೋಟಗಳ ಕಾರ್ಮಿಕರ ಕಲ್ಯಾಣಕ್ಕಾಗಿ ಯೋಜನೆ ರೂಪಿಸಲಾಗಿತ್ತು. ಅದರಲ್ಲೂ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳನ್ನು ದೃಷ್ಟಿಯಲ್ಲಿರಿಸಿಕೊಂಡು ಯೋಜನೆ ಜಾರಿ ಮಾಡಲಾಗಿತ್ತು.



ಚಹಾ ತೋಟಗಳ ಕಾರ್ಮಿಕರ ಅಗತ್ಯಗಳನ್ನು ಆಧರಿಸಿ ಯೋಜನೆಯ ಫಲಾನುಭವಿಗಳನ್ನಾಗಿ ಆಯ್ಕೆ ಮಾಡಲಾಗುತ್ತಿದೆ. ವಿಶೇಷವಾಗಿ, ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸಲಾಗುತ್ತಿದೆ. ಯೋಜನೆಯ ಭಾಗವಾಗಿ ಕಾರ್ಮಿಕರಿಗೆ ಪಿಂಚಣಿ, ವಿಮಾ ಸೌಲಭ್ಯವನ್ನೂ ಕಲ್ಪಿಸಲಾಗುತ್ತಿದೆ.





# ದೇಶಿ ಉದ್ದಿಮೆಗಳಿಗೆ ಉತ್ತೇಜನ

ನವದೆಹಲಿ (ಪಿಟಿಐ): ಗಡಿಯಲ್ಲಿ ದಾಳಿ, ನೆರೆ ರಾಷ್ಟ್ರಗಳ ಜೊತೆಗಿನ ಬಿಗುವಿನ ಸಂಬಂಧದ ಮಧ್ಯೆಯೂ, ಕೇಂದ್ರ ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರಕ್ಕೆ ಅನುದಾನ ಹಂಚಿಕೆಯಲ್ಲಿ ಸಮಾಧಾನಕರ ಎಂಬಂತೆ ತುಸು ಏರಿಕೆ ಮಾಡಲಾಗಿದೆ.

2026-27ನೇ ಸಾಲಿನ ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರಕ್ಕೆ ₹ 7,84,678 ಕೋಟಿ ಕಾಯ್ದಿರಿಸಲಾಗಿದೆ. ಇದು ಕಳೆದ ವರ್ಷದ ಬಜೆಟ್‌ನಲ್ಲಿ ನಿಗದಿಯಾಗಿದ್ದಕ್ಕಿಂತ ₹1,03,468 ಕೋಟಿ ಅಧಿಕವಾಗಿದೆ.

ನಾಗರಿಕ, ತರಬೇತಿ ಮತ್ತು ಇತರೆ ವಿಮಾನಗಳ ಉತ್ಪಾದನೆಗೆ ಅಗತ್ಯವಿರುವ ಬಿಡಿಭಾಗಗಳು, ಉತ್ಪನ್ನಗಳಿಗೆ ಮೂಲ ಕಸ್ಟಮ್ಸ್ ಸುಂಕ ವಿನಾಯಿತಿಯನ್ನು ಸಚಿವೆ ಪ್ರಕಟಿಸಿದ್ದಾರೆ.

ಅಲ್ಲದೆ, ವಿಮಾನಗಳ ನಿರ್ವಹಣೆ, ದುರಸ್ತಿ ಅಥವಾ ರಕ್ಷಣಾ ಕ್ಷೇತ್ರದ ಉದ್ಯಮಗಳಿಗೆ ಅಗತ್ಯವಿರುವ ಉತ್ಪನ್ನಗಳ ತಯಾರಿಕೆಗಾಗಿ, ಎಂಜಿನ್ ಒಳಗೊಂಡಂತೆ ಆಮದು ಆಗಲಿರುವ ಕಚ್ಚಾ ವಸ್ತುಗಳಿಗೂ ಮೂಲ ಕಸ್ಟಮ್ಸ್ ಸುಂಕದಿಂದ ವಿನಾಯಿತಿ ಪ್ರಕಟಿಸಲಾಗಿದೆ.

ರಕ್ಷಣಾ ಸಚಿವಾಲಯದ ಅಡಿಯಲ್ಲಿ ಬರುವ ಸಾರ್ವಜನಿಕ ವಲಯದ ಘಟಕಗಳು ಆಮದು ಮಾಡಿಕೊಳ್ಳುವ ಕಚ್ಚಾ ವಸ್ತುಗಳಿಗೆ ಈ ವಿನಾಯಿತಿಗಳು ಅನ್ವಯವಾಗಲಿವೆ.

ಈ ಎರಡೂ ನಿರ್ಧಾರಗಳು ರಕ್ಷಣಾ ಕ್ಷೇತ್ರದಲ್ಲಿ ಪ್ರಮುಖವಾಗಿ ವೈಮಾನಿಕ ಉದ್ಯಮಗಳಿಗೆ ಸಹಕಾರಿಯಾಗಲಿವೆ ಎಂದು ಅಂದಾಜು ಮಾಡಲಾಗಿದೆ.

ಬಜೆಟ್‌ನಲ್ಲಿ ಗಣನೀಯ ಮೊತ್ತ ಹಂಚಿಕೆ ಆಗಿಲ್ಲ ಎಂಬುದಕ್ಕೆ ಷೇರುಪೇಟೆ ನಕಾರಾತ್ಮಕವಾಗಿ ಸ್ಪಂದಿಸಿದೆ. ನಿಫ್ಟಿಯಲ್ಲಿ ಭಾರತ ರಕ್ಷಣಾ ವಲಯದ ಸೂಚ್ಯಂಕ ಶೇ 5.6ರಷ್ಟು ಕುಸಿದಿದೆ. ಈ ಕ್ಷೇತ್ರಕ್ಕೆ ಹೆಚ್ಚಿನ ಮೊತ್ತ ಹಂಚಿಕೆ ಆಗಬಹುದು ಎಂಬ ನಿರೀಕ್ಷೆ ಹೂಡಿಕೆದಾರರದಾಗಿತ್ತು.

**ಈಡೇರದ ನಿರೀಕ್ಷೆ:** ಪಾಕಿಸ್ತಾನ ಜೊತೆಗಿನ ತಿಕ್ಕಾಟದ ಹಿನ್ನೆಲೆಯಲ್ಲಿ ರಕ್ಷಣಾ ವಲಯದ ಅನುದಾನವನ್ನು ಶೇ 20ರಷ್ಟು ಹೆಚ್ಚಿಸಬೇಕು ಎಂಬುದು ರಕ್ಷಣಾ ಸಚಿವಾಲಯದ ನಿರೀಕ್ಷೆ ಆಗಿತ್ತು.

ಇನ್ನೊಂದೆಡೆ, 2.5 ಲಕ್ಷ ಕಂಪನಿಗಳ ಸದಸ್ಯತ್ವ ಹೊಂದಿರುವ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಒಕ್ಕೂಟವು, ರಕ್ಷಣಾ ಕ್ಷೇತ್ರದಲ್ಲಿ ರಫ್ತು ವಹಿವಾಟಿಗೆ ಉತ್ತೇಜನ ನೀಡಲು ರಫ್ತು ಉತ್ತೇಜನಾ ಕಾರಿಡಾರ್ ಸ್ಥಾಪಿಸಬೇಕು ಎಂದು ಮನವಿ ಮಾಡಿತ್ತು.

ಇದು, 2029ರ ವೇಳೆಗೆ 5.5 ಬಿಲಿಯನ್ ಡಾಲರ್ ಮೊತ್ತದ ರಫ್ತು ವಹಿವಾಟು ಗುರಿಯನ್ನು ಸಾಧಿಸಲು ಅನುಕೂಲ ಎಂದೂ ಪ್ರತಿಪಾದಿಸಿತ್ತು. ಆದರೆ, ಇದಕ್ಕೆ ಸ್ಪಂದನೆ ದೊರೆತಿಲ್ಲ.

**ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ವಿಷಯದಲ್ಲಿ ಸಂಸ್ಥೆಗೆ ಎಂದಿಗೂ ಬಜೆಟ್ ಕೊರತೆ ಆಗಿಲ್ಲ. ಸರ್ಕಾರ ಯಾವತ್ತಿಗೂ ದೊಡ್ಡ ಪ್ರಮಾಣದಲ್ಲಿ ಬೆಂಬಲ ನೀಡಿದೆ**

**ವಿನಯ್ ಕುಮಾರ್ ದಾಸ್**

ಪ್ರಧಾನ ನಿರ್ದೇಶಕ, ಡಿಆರ್‌ಡಿಒ

ಕೇಂದ್ರ ಸರ್ಕಾರ 2026-27ನೇ ಆರ್ಥಿಕ ವರ್ಷದಲ್ಲಿ ಬೊಕ್ಕಸಕ್ಕೆ ಬರುವ ಪ್ರತಿ ರೂಪಾಯಿಯಲ್ಲಿ 11 ಪೈಸೆಯನ್ನು ರಕ್ಷಣಾ ಕ್ಷೇತ್ರಕ್ಕೆ ವಿನಿಯೋಗಿಸಲಿದೆ. 2025-26ನೇ ಸಾಲಿನಲ್ಲಿ ಈ ಕ್ಷೇತ್ರಕ್ಕೆ ಒಟ್ಟು ₹6,81,210 ಕೋಟಿ ಹಂಚಿಕೆ ಮಾಡಲಾಗಿತ್ತು.

ಆದರೆ, ರಕ್ಷಣಾ ಕ್ಷೇತ್ರದಲ್ಲಿ ದೇಶೀಯ ಉದ್ಯಮಗಳಿಗೆ ಉತ್ತೇಜನ ನೀಡುವ ಹೆಜ್ಜೆಯಾಗಿ ವಿತ್ತ ಸಚಿವೆ ನಿರ್ಧಾರ ಪ್ರಕಟಿಸಿದ್ದಾರೆ.



# ಐದು 'ವಿಶ್ವವಿದ್ಯಾಲಯ ಟೌನ್‌ಶಿಪ್' ನಿರ್ಮಾಣ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಹಾಗೂ ಉದ್ಯಮ ಕ್ಷೇತ್ರ ಪರಸ್ಪರ ಪೂರಕವಾಗಿರಬೇಕು, ಶಿಕ್ಷಣ, ಕೌಶಲಗಳು ಒಂದು ಕಡೆ ಸಿಗುವಂತಾಗಬೇಕು ಎಂಬ ಉದ್ದೇಶದಿಂದ ಹಲವು ಯೋಜನೆಗಳನ್ನು ನಿರ್ಮಲಾ ಅವರು ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಐದು 'ವಿಶ್ವವಿದ್ಯಾಲಯ ಟೌನ್‌ಶಿಪ್'ಗಳನ್ನು ಅಭಿವೃದ್ಧಿಪಡಿಸುವುದಕ್ಕೆ ರಾಜ್ಯಗಳಿಗೆ ನೆರವು ನೀಡಲಾಗುವುದು ಎಂದು ಅವರು ಹೇಳಿದ್ದಾರೆ.

ಪ್ರಮುಖ ಕೈಗಾರಿಕೆಗಳ ಸನಿಹದಲ್ಲಿ ಈ 'ವಿಶ್ವವಿದ್ಯಾಲಯ ಟೌನ್‌ಶಿಪ್'ಗಳು ಸ್ಥಾಪನೆ ಆಗಲಿದ್ದು, ಸುಸಜ್ಜಿತವಾದ ಶೈಕ್ಷಣಿಕ ವಲಯಗಳಾಗಿ ರಲಿವೆ. ವಿಶ್ವವಿದ್ಯಾಲಯ, ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ಕೌಶಲ ಅಭಿವೃದ್ಧಿ ಕೇಂದ್ರಗಳು, ವಸತಿ ಸಮುಚ್ಚಯಗಳಿರಲಿವೆ.

**ಉನ್ನತ ಶಿಕ್ಷಣ:** ಉನ್ನತ ಶಿಕ್ಷಣದಲ್ಲಿ 'ಸ್ಟೆಮ್'ಗೆ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಹಾಗೂ ಗಣಿತ) ಪ್ರಸ್ತುತ ಹೆಚ್ಚು ಪ್ರಾಮುಖ್ಯವಿದೆ. ಇಂತಹ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿನಿಯರು ಅಧ್ಯಯನ, ಪ್ರಯೋಗಾಲಯ ಕಾರ್ಯಗಳಲ್ಲಿ ದೀರ್ಘ ಸಮಯ ಕಳೆಯುತ್ತಿರುತ್ತಾರೆ. ಹೀಗಾಗಿ ಅವರು ಹಲವಾರು ಸವಾಲುಗಳನ್ನು ಎದುರಿಸ ಬೇಕಾಗುತ್ತದೆ. ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಹಾಸ್ಟೆಲ್ ನಿರ್ಮಿಸುವ ಮೂಲಕ ಅವರ ಉನ್ನತ ಶಿಕ್ಷಣಕ್ಕೆ ಅನುಕೂಲ ಕಲ್ಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಖಭೌತವಿಜ್ಞಾನ ಹಾಗೂ ಖಗೋಳವಿಜ್ಞಾನ ಅಧ್ಯಯನಕ್ಕೆ ಉತ್ತೇಜನ ನೀಡುವುದಕ್ಕಾಗಿ ಹಲವು ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ.

**'ವೈದ್ಯಕೀಯ ಸೇವಾ ಹಬ್ ಆಗಿ ಭಾರತ':** ಆರೋಗ್ಯ ಕ್ಷೇತ್ರದಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಲ್ಲದೆ, 'ವೈದ್ಯಕೀಯ ಪ್ರವಾಸೋದ್ಯಮ ಸೇವಾ ಕ್ಷೇತ್ರದ ಹಬ್' ಆಗಿ ರೂಪಿಸುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಇದಕ್ಕಾಗಿ, ಖಾಸಗಿ ಸಹಯೋಗದಲ್ಲಿ ಐದು ಪ್ರಾದೇಶಿಕ ವೈದ್ಯಕೀಯ ಹಬ್‌ಗಳನ್ನು ಸ್ಥಾಪಿಸಲು ರಾಜ್ಯಗಳಿಗೆ ನೆರವು ನೀಡಲಾಗುತ್ತದೆ. ಈ ಹಬ್‌ಗಳು ಸಮಗ್ರ ಆರೋಗ್ಯ ಸೇವೆಯ ಸಂಕೀರ್ಣಗಳಾಗಿ ರಲಿದ್ದು, ವೈದ್ಯಕೀಯ ಸೇವೆ ಜೊತೆಗೆ ವೈದ್ಯಕೀಯ ಶಿಕ್ಷಣ, ಸಂಶೋಧನಾ ಸೌಲಭ್ಯಗಳನ್ನು ಒಳಗೊಂಡಿರಲಿವೆ ಎಂದು ಪ್ರಸ್ತಾಪಿಸಲಾಗಿದೆ.

ಆಯುಷ್ ಕೇಂದ್ರಗಳು, ವೈದ್ಯಕೀಯ ಪ್ರವಾಸೋದ್ಯಮ ಉತ್ತೇಜನಾ ಕೇಂದ್ರಗಳ ಜೊತೆಗೆ, ರೋಗಪತ್ತೆ ಸೌಲಭ್ಯಗಳು, ಚಿಕಿತ್ಸೆ ಬಳಿಕ ಆರೈಕೆ ಹಾಗೂ ಪುನರ್‌ವಸತಿ ಸೌಕರ್ಯಗಳನ್ನೂ ಈ ಹಬ್‌ಗಳು ಒಳಗೊಂಡಿರಲಿವೆ.

ಭಾರತೀಯ ವೈದ್ಯ ಪದ್ಧತಿಗೆ ಉತ್ತೇಜನ ನೀಡಲು ಮೂರು ಅಖಿಲ ಭಾರತ ಆಯುರ್ವೇದ ಸಂಸ್ಥೆಗಳನ್ನು ಸ್ಥಾಪಿಸಲು ಕೇಂದ್ರ ನಿರ್ಧರಿಸಿದೆ. ಜೊತೆಗೆ, ಆಯುಷ್ ಔಷಧ ಕೇಂದ್ರಗಳು, ಅವುಗಳ ಪ್ರಯೋಗಾಲಯಗಳನ್ನು ಮೇಲ್ದರ್ಜೆಗೇರಿಸಲು ಸಹ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಆಪ್ಟೊಮೆಟ್ರಿ, ರೇಡಿಯಾಲಜಿ, ಅನಸ್ತೇಷಿಯಾ, ಒ.ಟಿ ಟೆಕ್ನಾಲಜಿ, ಅನ್ವಯಿಕ ಮನೋವಿಜ್ಞಾನ ಮತ್ತು ನಡತೆಗೆ ಸಂಬಂಧಿಸಿದಂತಹ ವೈದ್ಯಕೀಯ ವೃತ್ತಿಗೆ ಪೂರಕವಾದ ಕೋರ್ಸ್‌ಗಳ ಕಲಿಕೆಗೆ ಉತ್ತೇಜನ ನೀಡುವ ಪ್ರಸ್ತಾವ ಮಂಡಿಸಲಾಗಿದೆ.

ಈ ಸ್ವರೂಪದ ಶಿಕ್ಷಣವನ್ನು ನೀಡುವ ಖಾಸಗಿ ಮತ್ತು ಸರ್ಕಾರಿ ವಲಯದ ಕೇಂದ್ರಗಳನ್ನು (ಎಎಚ್‌ಪಿ) ಮೇಲ್ದರ್ಜೆಗೇರಿಸಲಾಗುವುದು. ಇದರಿಂದ, ಮುಂದಿನ ಐದು ವರ್ಷಗಳಲ್ಲಿ 1 ಲಕ್ಷ ವೃತ್ತಿಪರರನ್ನು (ಅಲೈಡ್ ಹೆಲ್ತ್ ಪ್ರೊಫೆಷನಲ್) ಸೇವೆಗೆ ಸಜ್ಜುಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಮಾನಸಿಕ ಆರೋಗ್ಯ ಸೇವೆ ಒದಗಿಸುವ ನಿಮ್ಹಾನ್ಸ್ ನಂತರ ಸಂಸ್ಥೆಗಳು ಉತ್ತರ ಭಾರತದಲ್ಲಿ ಇಲ್ಲ. ಈ ಕೊರತೆ ನೀಗಿಸುವ ಉದ್ದೇಶದಿಂದ ನಿಮ್ಹಾನ್ಸ್-2 ಸ್ಥಾಪಿಸಲಾಗುವುದು. ರಾಂಚಿ ಮತ್ತು ತೇಜ್‌ಪುರದಲ್ಲಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ಅವರು ಹೇಳಿದ್ದಾರೆ.

## ಮುಖ್ಯಾಂಶಗಳು

- ಖಭೌತವಿಜ್ಞಾನ ಹಾಗೂ ಖಗೋಳವಿಜ್ಞಾನ ಅಧ್ಯಯನಕ್ಕೆ ಉತ್ತೇಜನ
- ಮೂರು ಅಖಿಲ ಭಾರತ ಆಯುರ್ವೇದ ಸಂಸ್ಥೆಗಳನ್ನು ಸ್ಥಾಪಿಸಲು ನಿರ್ಧಾರ

## ಪ್ರಮುಖ ಘೋಷಣೆಗಳು

- ಜಾಮ್‌ನಗರದಲ್ಲಿ ಜಾಗತಿಕ ಪಾರಂಪರಿಕ ವೈದ್ಯಕೀಯ ಕೇಂದ್ರ ಸ್ಥಾಪನೆ
- ಐದು ಪ್ರಾದೇಶಿಕ ವೈದ್ಯಕೀಯ ಹಬ್ ಸ್ಥಾಪನೆಗೆ ಖಾಸಗಿ ಸಹಭಾಗಿತ್ವ
- ದೇಶದ ಪೂರ್ವ ಭಾಗದ ರಾಜ್ಯವೊಂದ-ರಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಸ್ಥಾಪನೆ

'ಇಮ್ಮರ್ಸಿವ್' ತಂತ್ರಜ್ಞಾನ ಬಳಕೆಗೆ ಉತ್ತೇಜನ ನೀಡಲಾಗುವುದು. ನಾಲ್ಕು ಟೆಲಿಸ್ಕೋಪ್ ಮೂಲ ಸೌಕರ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇಲ್ಲವೇ, ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ನ್ಯಾಷನಲ್ ಲಾರ್ಜ್ ಸೋಲಾರ್ ಟೆಲಿಸ್ಕೋಪ್, ನ್ಯಾಷನಲ್ ಲಾರ್ಜ್ ಆಪ್ಟಿಕಲ್ ಇನ್‌ಫ್ರಾರೆಡ್ ಟೆಲಿಸ್ಕೋಪ್, ಹಿಮಾಲಯನ್ ಚಂದ್ರ ಟೆಲಿಸ್ಕೋಪ್ ಹಾಗೂ ಕಾಸ್‌ಮೋಸ್ ಅನ್ನು ಮೇಲ್ದರ್ಜೆಗೆ ಏರಿಸಲಾಗುವುದು. ಎರಡು ತಾರಾಲಯಗಳನ್ನು ಸ್ಥಾಪಿಸಲಾಗುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

Publication Date
02/02/2026

Presented by

# ‘ಶೀ ಮಾರ್ಟ್’ಗಳ ಸ್ಥಾಪನೆಗೆ ಒಲವು

ನವದೆಹಲಿ (ಪಿಟಿಐ): ‘ಲಕ್‌ಪತಿ ದೀದಿ’ ಕಾರ್ಯಕ್ರಮದ ಯಶಸ್ಸಿನ ಬೆನ್ನಲ್ಲೇ, ಮಹಿಳಾ ಉದ್ಯಮಿಗಳಿಗೆ ಅನುಕೂಲವಾಗುವಂತೆ ಸ್ವಸಹಾಯ ಸಂಘಗಳ ಮಾಲೀಕತ್ವದಲ್ಲಿ ‘ಬಿಡಿ ಮಳಿಗೆ’ ಸ್ಥಾಪಿಸುವ ಕಾರ್ಯಕ್ಕೆ ಕೇಂದ್ರ ಸರ್ಕಾರ ಉತ್ತೇಜನ ನೀಡಲಿದೆ.

ಕೇಂದ್ರ ಬಜೆಟ್‌ನಲ್ಲಿ ಈ ವಿಷಯವನ್ನು ಪ್ರಕಟಿಸಿರುವ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಮಹಿಳಾ ಸ್ವಸಹಾಯ ಸಂಘಗಳ (ಎಸ್‌ಎಚ್‌ಜಿ) ಉದ್ಯಮಗಳ ಮಾಲೀಕತ್ವವನ್ನು ಹೊಂದುವ ನಿಟ್ಟಿನಲ್ಲಿ ಈ ಕ್ರಮವು ಮಹತ್ವದ ಹೆಜ್ಜೆಯಾಗಿದೆ ಎಂದು ಪ್ರತಿಪಾದಿಸಿದರು.

‘ಶೀ ಮಾರ್ಟ್’ ಎಂದು ಹೇಳಲಾಗುವ ಈ ಬಿಡಿ ಮಳಿಗೆಗಳನ್ನು ಕ್ಲಸ್ಟರ್ ಹಂತದ ಒಕ್ಕೂಟಗಳ ನೇತೃತ್ವದಲ್ಲಿ ನವೀನ ಆರ್ಥಿಕ ನೆರವಿನ ವ್ಯವಸ್ಥೆ ಮೂಲಕ ಸ್ಥಾಪಿಸಲಾಗುವುದು ಎಂದರು.

ಒಂದು ಲಕ್ಷ ರೂಪಾಯಿ ಆದಾಯ ಗಳಿಸುವ ಸ್ವಸಹಾಯ ಸಂಘಗಳ (ಎಸ್‌ಎಚ್‌ಜಿ) ಸದಸ್ಯೆಯರನ್ನು ಪ್ರಸ್ತುತ ‘ಲಕ್‌ಪತಿ ದೀದಿ’ ಎಂದು ಗುರುತಿಸಲಾಗುತ್ತದೆ.

ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ಮಾಹಿತಿ ಪ್ರಕಾರ, ಇದುವರೆಗೂ ಸುಮಾರು ಎರಡು ಕೋಟಿ ಮಹಿಳೆಯರು ವಾರ್ಷಿಕ ಒಂದು ಲಕ್ಷ ಆದಾಯ ಗಳಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. 2027ರ ವೇಳೆಗೆ ಇವರ ಸಂಖ್ಯೆ 3 ಕೋಟಿ ದಾಟಬೇಕು ಎಂಬುದು ಕೇಂದ್ರದ ಗುರಿಯಾಗಿದೆ.

ಅಲ್ಲದೆ, ಯುವಜನರನ್ನು ಮುಖ್ಯವಾಗಿ ಗ್ರಾಮೀಣ ಭಾಗದ ಯುವಜನರಿಗೆ ಖಾದಿ, ಕೈಮಗ್ಗ, ಕರಕುಶಲ ಕ್ಷೇತ್ರಗಳಿಗೆ ಉತ್ತೇಜನ ನೀಡಲು ‘ಮಹಾತ್ಮಗಾಂಧಿ ಗ್ರಾಮ ಸ್ವರಾಜ್’ ಕಾರ್ಯಕ್ರಮವನ್ನು ಕೇಂದ್ರವು ಬಜೆಟ್‌ನಲ್ಲಿ ಪ್ರಕಟಿಸಿದೆ.

ಈ ಮೂಲಕ, ಉತ್ಪನ್ನಗಳಿಗೆ ಮಾರುಕಟ್ಟೆ, ಬ್ರ್ಯಾಂಡ್ ಸೇವೆ ಒದಗಿಸುವುದು ಹಾಗೂ ತರಬೇತಿ, ಕೌಶಲ, ಉತ್ಪಾದನಾ ಪ್ರಕ್ರಿಯೆಯ ಗುಣಮಟ್ಟ ಏರಿಕೆಗೆ ಒತ್ತು ನೀಡಲಾಗುತ್ತದೆ. ಇದು, ಗ್ರಾಮೀಣ ಭಾಗದ ಉದ್ಯಮಗಳಿಗೆ ‘ಒಂದು ಜಿಲ್ಲೆ ಒಂದು ಉತ್ಪನ್ನ’ ಯೋಜನೆಯ ಲಾಭ ಪಡೆಯಲು ಹೆಚ್ಚು ಅನುಕೂಲಕರವಾಗಲಿದೆ ಎಂದು ಕೇಂದ್ರ ಪ್ರತಿಪಾದಿಸಿದೆ.

**ಮುಖ್ಯಾಂಶಗಳು**

- ಮಹಿಳಾ ಸ್ವ ಸಹಾಯ ಸಂಘಗಳಿಗೆ ಉತ್ತೇಜನ
- ಲಕ್‌ಪತಿ ದೀದಿಗಳ ಸಂಖ್ಯೆಯನ್ನು 2027ರ ವೇಳೆಗೆ 3 ಕೋಟಿ ದಾಟಿಸುವ ಗುರಿ
- ಖಾದಿ, ಕೈಮಗ್ಗ ವಲಯದ ಉತ್ತೇಜನಕ್ಕಾಗಿ ‘ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್’



ಬಟ್ಟೆ ತಯಾರಿಕೆಯಲ್ಲಿ ನಿರತವಾಗಿರುವ ಸ್ವಸಹಾಯ ಸಂಘಗಳ ಮಹಿಳೆಯರು

# ಎ.ಐ, ಗೇಮಿಂಗ್‌ಗೆ ಒತ್ತು



ನವದೆಹಲಿ (ಪಿಟಿಐ): ‘ಅನಿಮೇಶನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್ ಹಾಗೂ ಕಾಮಿಕ್ಸ್ (ಎವಿಜಿಸಿ) ಕ್ಷೇತ್ರವು ಭಾರತದಲ್ಲಿ ವೇಗವಾಗಿ ಬೆಳೆಯುತ್ತಿದೆ. ಅಗಾಧ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ಸಾಧ್ಯತೆಗಳು ಇವೆ. ಸಮೀಕ್ಷೆ ಪ್ರಕಾರ, 2030ರ ವೇಳೆಗೆ ಈ ಕ್ಷೇತ್ರಕ್ಕೆ ಸಂಬಂಧಿಸಿದ 20 ಲಕ್ಷ ವೃತ್ತಿಪರರ ಅಗತ್ಯ ಕಂಡುಬರಲಿದೆ’ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಹೀಗಾಗಿ, ಈ ಕ್ಷೇತ್ರಕ್ಕೆ ಉತ್ತೇಜನ ನೀಡಲು ದೇಶದ 15 ಸಾವಿರ ಶಾಲೆ ಹಾಗೂ 500 ಕಾಲೇಜುಗಳಲ್ಲಿ ‘ಎವಿಜಿಸಿ ಕಂಟೆಂಟ್ ಕ್ರಿಯೇಟರ್ ಲ್ಯಾಬ್’ ಸ್ಥಾಪನೆಗೆ ಒತ್ತು ನೀಡಲಾಗುತ್ತದೆ. ಮುಂಬೈನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕ್ರಿಯೇಟಿವ್ ಟೆಕ್ನಾಲಜೀಸ್ ಈ ಲ್ಯಾಬ್‌ಗಳನ್ನು ಸ್ಥಾಪಿಸಲಿದೆ ಎಂದೂ ಅವರು ಪ್ರಕಟಿಸಿದ್ದಾರೆ.

ಪ್ರಸಕ್ತ ದಿನಗಳಲ್ಲಿ ಹೆಚ್ಚಿನ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಬಳಕೆ ವ್ಯಾಪಕವಾಗುತ್ತಿದೆ. ರೈತರು, ವಿದ್ಯಾರ್ಥಿಗಳು, ಆರೋಗ್ಯ ಸೇವೆ ಕಾರ್ಯಕರ್ತರು ಸೇರಿ ಎಲ್ಲ ಕ್ಷೇತ್ರದವರಿಗೂ ಎ.ಐ ಪ್ರಯೋಜನ ಸಿಗುವಂತಾಗಬೇಕು. ಇದಕ್ಕಾಗಿ ನಿಯಮಾವಳಿ ರೂಪಿಸುವುದಾಗಿ ಹೇಳಿದ್ದಾರೆ.


ಅನುಸಂಧಾನ ನ್ಯಾಷನಲ್ ರಿಸರ್ಚ್ ಫಂಡ್, ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ) ಹಾಗೂ ಇತರ ನಿಧಿಗಳ ಮೂಲಕ ಎ.ಐ, ಮಷಿನ್ ಲರ್ನಿಂಗ್, ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರಕ್ಕೆ ನೆರವು ನೀಡುವುದನ್ನು ಪ್ರಸ್ತಾಪಿಸಿದ್ದಾರೆ.

ಎ.ಐ ಸೇರಿ ಅಧುನಿಕ ತಂತ್ರಜ್ಞಾನಗಳಿಂದ ಉದ್ಯೋಗ, ಕೌಶಲದ ಅಗತ್ಯತೆ ಮೇಲಿನ ಪರಿಣಾಮಗಳ ಮೌಲ್ಯಮಾಪನಕ್ಕಾಗಿ ‘ಶಿಕ್ಷಣದಿಂದ ಉದ್ಯೋಗ ಹಾಗೂ ಉದ್ಯಮಶೀಲತೆ’ ಕುರಿತ ಉನ್ನತಾಧಿಕಾರ ಸ್ಥಾಯಿ ಸಮಿತಿ ರಚಿಸುವ ಉದ್ದೇಶವಿದೆ ಎಂದೂ ಅವರು ಹೇಳಿದ್ದಾರೆ.

ಅಂಗವಿಕಲರಿಗಾಗಿ ಎ.ಐ ಆಧಾರಿತ ಸಾಧನಗಳನ್ನು ಅಭಿವೃದ್ಧಿಪಡಿಸಲಾಗುವುದು. ಇದಕ್ಕಾಗಿ ಭಾರತ ಕೃತಕ ಅಂಗ ತಯಾರಿಕಾ ನಿಗಮಕ್ಕೆ (ಎಎಲ್‌ಐಎಂಸಿಒ) ನೆರವು ನೀಡಲಾಗುವುದು ಎಂದು ಪ್ರಕಟಿಸಿದ್ದಾರೆ.

ದೇಶದ ಪ್ರಮುಖ ಬಂದರುಗಳಲ್ಲಿ ಕಂಟೇನರುಗಳ ಸ್ಕ್ಯಾನಿಂಗ್ ನಡೆಸಲು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಲಾಗುವುದು. ಈ ಸೌಲಭ್ಯವನ್ನು ಹಂತಹಂತವಾಗಿ ಜಾರಿಗೊಳಿಸಲಾಗುವುದು ಎಂದು ಪ್ರಸ್ತಾಪಿಸಿದ್ದಾರೆ.

‘ಕೃತಕ ಬುದ್ಧಿಮತ್ತೆಯು ಉತ್ತಮ ಆಡಳಿತಕ್ಕೆ ವೇಗವರ್ಧಕವಾಗಿ ಕೆಲಸ ಮಾಡಲಿದೆ’ ಆಡಳಿತದ ಎಲ್ಲ ಹಂತಗಳಲ್ಲಿ ಎ.ಐ ಬಳಕೆ ಸಾಧ್ಯವಾಗುವಂತಾಗಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.



# ಕೇಂದ್ರ ಬಜೆಟ್

## ಪಿಐಎಸ್ ಮೂಲಕ ಷೇರುಗಳಲ್ಲಿ ಹೂಡಿಕೆ: ಎನ್‌ಆರ್‌ಐಗಳಿಗೆ ಅವಕಾಶ

ನವದೆಹಲಿ: ಅನಿವಾಸಿ ಭಾರತೀಯರು 'ಪೋರ್ಟ್‌ಫೋಲಿಯೊ ಇನ್ವೆಸ್ಟ್‌ಮೆಂಟ್ ಸ್ಕೀಂ' (ಪಿಐಎಸ್) ಮೂಲಕ ಭಾರತೀಯ ಷೇರುಗಳಲ್ಲಿ ಹೂಡಿಕೆ ಮಾಡಬಹುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಭಾರತೀಯ ಷೇರು ಮಾರುಕಟ್ಟೆಗಳು ನಿರ್ಣಾಯಕ ಹಂತ-ದಲ್ಲಿರುವಾಗ ಈ ಘೋಷಣೆ ಹೊರಬಿದ್ದಿದೆ. ವಿದೇಶಿ ಹೂಡಿಕೆದಾರರು 2025ರಲ್ಲಿ ₹1,900 ಕೋಟಿ ಮತ್ತು 2026ರ ಜನವರಿಯಲ್ಲಿ ₹400 ಕೋಟಿಯನ್ನು ಹಿಂಪಡೆದಿದ್ದಾರೆ. ಈ ಯೋಜನೆಯಡಿ ಹೂಡಿಕೆ ಮಾಡಲು ಹೂಡಿಕೆದಾರರು ಆರ್‌ಬಿಐನಿಂದ ಅನುಮೋದಿಸಲ್ಪಟ್ಟ ಬ್ಯಾಂಕ್‌ನಲ್ಲಿ ವಿಶೇಷ ಪಿಐಎಸ್ ಖಾತೆಯನ್ನು ಹೊಂದಿರಬೇಕು. ಒಬ್ಬ ವ್ಯಕ್ತಿಯು ಒಂದು ಕಂಪನಿಯಲ್ಲಿ ಗರಿಷ್ಠ ಶೇ 5ರಷ್ಟು ಮಾತ್ರ ಹೂಡಿಕೆ ಮಾಡಬಹುದು. ಇಡೀ ಕಂಪನಿಯಲ್ಲಿ ಒಟ್ಟು ಅನಿವಾಸಿ ಹೂಡಿಕೆ ಮಿತಿಯು ಸಾಮಾನ್ಯವಾಗಿ ಶೇ 10 ಆಗಿರುತ್ತದೆ.

### ಸ್ಥಿರಾಸ್ತಿ: ಟಿಎಎನ್ ಸಂಖ್ಯೆ ಅಗತ್ಯವಿಲ್ಲ

ಅನಿವಾಸಿ ಭಾರತೀಯರಿಂದ ಸ್ಥಿರಾಸ್ತಿ ಖರೀದಿಸುವ ವ್ಯಕ್ತಿಗಳು ಇನ್ನು ಮುಂದೆ ತೆರಿಗೆ ಕಡಿತಕ್ಕಾಗಿ 'ತೆರಿಗೆ ಕಡಿತ ಮತ್ತು ಸಂಗ್ರಹ ಖಾತೆ ಸಂಖ್ಯೆ' (ಟಿಎಎನ್) ವಿವರಗಳನ್ನು ನೀಡುವ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ.


ಈ ಮೊದಲು ಅನಿವಾಸಿ ಭಾರತೀಯರಿಂದ ಆಸ್ತಿ ಖರೀದಿಸುವಾಗ ಟಿಎಎನ್ ಸಂಖ್ಯೆ ನೀಡಬೇಕಿತ್ತು. ಆದರೆ, ಈಗ ಪ್ಯಾನ್ ಕಾರ್ಡ್ ಮೂಲಕವೇ ಈ ಪ್ರಕ್ರಿಯೆ ಮುಗಿಸಬಹುದು. ಇದು ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ.


## ನಕ್ಸಲರ ನಿರ್ಮೂಲನೆ: ₹3,610 ಕೋಟಿ

ನವದೆಹಲಿ (ಪಿಟಿಐ): ನಕ್ಸಲರ ನಿರ್ಮೂಲನೆಯ ಕಾರ್ಯತಂತ್ರದ ಭಾಗವಾಗಿ ಭದ್ರತೆ ಮತ್ತು ಮೂಲಸೌಕರ್ಯ ವೆಚ್ಚಗಳಿಗಾಗಿ ಬಜೆಟ್‌ನಲ್ಲಿ ₹3,610.80 ಕೋಟಿ ಮೀಸಲಿಡಲಾಗಿದೆ.

ಕಳೆದ ವರ್ಷ ₹3,006.56 ಕೋಟಿ ಘೋಷಿಸಲಾಗಿತ್ತು. ಈ ಸಾಲಿನಲ್ಲಿ ಶೇ 20ರಷ್ಟು ಹೆಚ್ಚಿನ ಹಣವನ್ನು ಮೀಸಲಿಡಲಾಗಿದೆ. ಮಾರ್ಚ್ 31ರೊಳಗೆ ದೇಶದಿಂದ ನಕ್ಸಲರ ನಿರ್ಮೂಲನೆ ಮಾಡುವ ಗುರಿಯನ್ನು ಗೃಹ ಸಚಿವಾಲಯ ಹೊಂದಿದೆ.

## ರೂಪಾಯಿ ಲೆಕ್ಕಾಚಾರ






# ಏಳು ವಲಯ ಪ್ರಗತಿಗೆ ಒತ್ತು

**ಉತ್ಪಾದನೆ**

ಉತ್ಪಾದನೆ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಮೂಲಕ ಆರ್ಥಿಕ ಬೆಳವಣಿಗೆಗೆ ವೇಗ ನೀಡುವ 'ಮೊದಲ ಕರ್ತವ್ಯ'ದ ಭಾಗವಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆರು ಕ್ಷೇತ್ರಗಳನ್ನು ಆದ್ಯತೆಯನ್ನಾಗಿ ಪರಿಗಣಿಸಿದ್ದಾರೆ. ಅವುಗಳಲ್ಲಿ, ಏಳು ಪ್ರಮುಖ ವಲಯಗಳಲ್ಲಿ ಉತ್ಪಾದನೆ ಹೆಚ್ಚಿಸುವುದು ಮೊದಲ ಆದ್ಯತೆಯಾದರೆ, ಪಾರಂಪರಿಕ ಕೈಗಾರಿಕಾ ಸಮೂಹಗಳನ್ನು ಪುನಶ್ಚೇತನಗೊಳಿಸುವುದು ಎರಡನೆಯ ಆದ್ಯತೆಯಾಗಿದೆ ಎಂದು ಘೋಷಿಸಿದ್ದಾರೆ

### ಪಾರಂಪರಿಕ ಕೈಗಾರಿಕಾ ಸಮೂಹಗಳ ಪುನಶ್ಚೇತನ

ಮೂಲಸೌಕರ್ಯ ಮತ್ತು ತಂತ್ರಜ್ಞಾನವನ್ನು ಮೇಲ್ದರ್ಜೆಗೆ ಏರಿಸುವ ಮೂಲಕ ದೇಶದ 200 ಪಾರಂಪರಿಕ ಕೈಗಾರಿಕಾ ಸಮೂಹಗಳನ್ನು ಪುನಶ್ಚೇತನಗೊಳಿಸುವುದು. ಈ ಮೂಲಕ ಅವುಗಳ ಸ್ಪರ್ಧಾತ್ಮಕತೆಯನ್ನು, ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಮುಖ ಯೋಜನೆಯನ್ನೂ ಹಣಕಾಸು ಸಚಿವರು ಬಜೆಟ್‌ನಲ್ಲಿ ಘೋಷಿಸಿದ್ದಾರೆ.

## ಪ್ರಮುಖ ಏಳು ವಲಯಗಳು

### 1 'ಬಯೋಫಾರ್ಮಾ ಶಕ್ತಿ'

ಸಾಂಕ್ರಾಮಿಕವಲ್ಲದ ರೋಗಗಳು ಹೆಚ್ಚುತ್ತಿರುವ ದಿಸೆಯಲ್ಲಿ, ಭಾರತವನ್ನು ಜೈವಿಕ ಔಷಧಗಳ (ಬಯೋಫಾರ್ಮಾ) ತಯಾರಿಕೆಯ ಕೇಂದ್ರವನ್ನಾಗಿ ರೂಪಿಸಲು ಮುಂದಿನ ಐದು ವರ್ಷಗಳಲ್ಲಿ ₹10,000 ಕೋಟಿ ನಿಗದಿ ಮಾಡಲಾಗಿದೆ. ದೇಶದಲ್ಲಿ ಔಷಧ ಉತ್ಪಾದನೆಗೆ ಅಗತ್ಯವಾದ ವ್ಯವಸ್ಥೆ ಕಲ್ಪಿಸಲಾಗುವುದು. ಪ್ರಸ್ತುತ ಔಷಧ ವಿಜ್ಞಾನದ ಕಲಿಕೆ ಮತ್ತು ಸಂಶೋಧನೆಗಾಗಿ ಏಳು ಸಂಸ್ಥೆಗಳಿದ್ದು (ಎನ್‌ಐಪಿಇಆರ್), ಹೊಸದಾಗಿ ಮೂರು ಸಂಸ್ಥೆಗಳನ್ನು ಸ್ಥಾಪಿಸಿ, ಒಂದು ವ್ಯವಸ್ಥಿತ ಜಾಲವನ್ನು ರೂಪಿಸಲಾಗುವುದು.



### 2 ಜವಳಿ: ಸಂಯೋಜಿತ ರೂಪ

ಕಾರ್ಮಿಕ ಪ್ರಧಾನವಾದ ಜವಳಿ ಉದ್ಯಮಕ್ಕೆ ಐದು ಅಂಶಗಳ ಕಾರ್ಯಕ್ರಮವನ್ನು ಘೋಷಿಸಲಾಗಿದೆ; ಸ್ವಾವಲಂಬನೆಗಾಗಿ ರಾಷ್ಟ್ರೀಯ ನಾರು ಯೋಜನೆ, ಸಾಂಪ್ರದಾಯಿಕ ಗುಂಪುಗಳಿಗೆ ಆಧುನಿಕತೆಯ ಸ್ಪರ್ಶ ನೀಡುವ ಮೂಲಕ ಜವಳಿ ವಿಸ್ತರಣೆ ಮತ್ತು ಉದ್ಯೋಗ ಯೋಜನೆ, ನೇಕಾರರು ಮತ್ತು ಕುಶಲ ಕರ್ಮಿಗಳಿಗಾಗಿ ರಾಷ್ಟ್ರೀಯ ಕೈಮಗ್ಗ ಮತ್ತು ಕರಕುಶಲ ವಸ್ತು ಕಾರ್ಯಕ್ರಮ, ಜಾಗತಿಕವಾಗಿ ಸ್ಪರ್ಧಾತ್ಮಕವಾದ ಮತ್ತು ಸುಸ್ಥಿರವಾದ ಜವಳಿ ಉತ್ಪಾದನೆಗಾಗಿ ಸೂಕ್ತ ವ್ಯವಸ್ಥೆ ರೂಪಿಸುವುದು ಸಂಯೋಜಿತ ಯೋಜನೆಯ ಭಾಗಗಳಾಗಿವೆ. ಜವಳಿ ಕೌಶಲಗಳ ಉತ್ತೇಜನಕ್ಕಾಗಿ ಉದ್ಯಮ ಮತ್ತು ಶೈಕ್ಷಣಿಕ ರಂಗಗಳೊಂದಿಗೆ ಸಂಯೋಜಿತ ಪ್ರಯತ್ನವಾಗಿ ಸಮರ್ಥ್ 2.0 ಕಾರ್ಯಕ್ರಮ ರೂಪಿಸುವುದು.

### 3 ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ಯ ಯೋಜನೆ



ಖಾದಿ, ಕೈಮಗ್ಗ ಮತ್ತು ಕರಕುಶಲ ವಸ್ತುಗಳ ಗುಣಮಟ್ಟ ವರ್ಧನೆಗಾಗಿ ಕುಶಲಕರ್ಮಿಗಳಿಗೆ ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ಯ ಯೋಜನೆಯನ್ನು ಆರಂಭಿಸಿ ತರಬೇತಿ, ನೆರವು ನೀಡಲಾಗುವುದು. ಕ್ರೀಡಾ ಉತ್ಪಾದನೆ ಉತ್ತೇಜಿಸಲು ಕ್ರೀಡಾ ಸಾಮಗ್ರಿ ಯೋಜನೆ ಪ್ರಾರಂಭಿಸಲಾಗುವುದು. ಸಾಧನಗಳ ವಿನ್ಯಾಸ, ಸಂಶೋಧನೆ ಮತ್ತು ತಂತ್ರಜ್ಞಾನದ ಮೂಲಕ ಭಾರತದಲ್ಲಿ ಅತ್ಯುನ್ನತ ದರ್ಜೆಯ ಮತ್ತು ಕೈಗೆಟುಕುವ ಬೆಲೆಯ ಕ್ರೀಡಾ ಸಾಮಗ್ರಿಗಳು ದೊರೆಯುವಂತೆ ಮಾಡುವುದು ಯೋಜನೆ ಗುರಿ.

### 4 ಎಲೆಕ್ಟ್ರಾನಿಕ್ ಉಪಕರಣ: ಬಿಡಿಭಾಗಗಳ ಉತ್ಪಾದನೆ


2025ರಲ್ಲಿ ಈ ಯೋಜನೆಗೆ ₹22,919 ಕೋಟಿ ನೀಡಲಾಗಿತ್ತು. ಪ್ರಗತಿಯನ್ನು ಉತ್ತೇಜಿಸಲು ಮತ್ತು ಸ್ಥಳೀಯ ಪೂರೈಕೆ ಸರಪಳಿಯನ್ನು ಉತ್ತಮಪಡಿಸಲು ಅದರ ಮೊತ್ತವನ್ನು ದ್ವಿಗುಣಗೊಳಿಸಲಾಗಿದೆ (₹40,000 ಕೋಟಿ).

### 5 ಅಪರೂಪದ ಖನಿಜಗಳ ಕಾರಿಡಾರ್

ಅಪರೂಪದ ಖನಿಜವಾದ ಶಾಶ್ವತ ಅಯಸ್ಕಾಂತಕ್ಕಾಗಿ 2025ರ ನವೆಂಬರ್‌ನಲ್ಲಿ ಯೋಜನೆ ಜಾರಿಮಾಡಲಾಗಿತ್ತು. ಖನಿಜಗಳು ಸಮೃದ್ಧವಾಗಿರುವ ಒಡಿಶಾ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಗಣಿಗಾರಿಕೆ, ಸಂಸ್ಕರಣೆ, ಸಂಶೋಧನೆ ಮತ್ತು ಉತ್ಪಾದನೆಗಾಗಿಯೇ ಅಪರೂಪದ ಖನಿಜಗಳ ಕಾರಿಡಾರ್ ಸ್ಥಾಪಿಸಲಾಗುವುದು. ಜತೆಗೆ, ವಿದೇಶಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ರಾಜ್ಯಗಳಲ್ಲಿ ಮೂರು ರಾಸಾಯನಿಕ ಪಾರ್ಕ್‌ಗಳನ್ನು ಸ್ಥಾಪಿಸಲು ಬೆಂಬಲ ನೀಡಲಾಗುವುದು.

### 6 ಸೆಮಿಕಂಡಕ್ಟರ್ ಮಿಷನ್

ಐಎಸ್‌ಎಮ್ 1.0 ಯಶಸ್ಸಿನ ಆಧಾರದಲ್ಲಿ ಕೇಂದ್ರವು ಐಎಸ್‌ಎಂ 2.0 ಅನ್ನು ಘೋಷಿಸಿದೆ. ಸೆಮಿಕಂಡಕ್ಟರ್ ಸಾಧನಗಳು ಮತ್ತು ವಸ್ತುಗಳನ್ನು ಉತ್ಪಾದಿಸುವುದು, ಎಲ್ಲ ಹಂತಗಳಲ್ಲಿ ದೇಶೀಯ ತಂತ್ರಜ್ಞಾನವನ್ನೇ ಬಳಸುವುದು ಮತ್ತು ಪೂರೈಕೆ ಸರಪಳಿಗಳನ್ನು ಬಲಪಡಿಸಲಾಗುವುದು.



### 7 ಬಂಡವಾಳ ಸರಕುಗಳ ಉತ್ಪಾದನೆ

ವಿವಿಧ ವಲಯಗಳಲ್ಲಿ ಉತ್ಪಾದನೆ ಮತ್ತು ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಬಂಡವಾಳ ಸರಕುಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಈ ದಿಸೆಯಲ್ಲಿ ಎರಡು ಸ್ಥಳಗಳಲ್ಲಿ ಟೂಲ್ ರೂಮ್ಸ್ ಸ್ಥಾಪನೆ ಮಾಡುವುದು ಮತ್ತು 5 ವರ್ಷಗಳಲ್ಲಿ ₹10,000 ಕೋಟಿ ವೆಚ್ಚದಲ್ಲಿ ಕಂಟೇನರ್ ಉತ್ಪಾದನಾ ವ್ಯವಸ್ಥೆ ರೂಪಿಸಲಾಗುವುದು.



## 'ಎಂಎಸ್‌ಎಂಇ ಚಾಂಪಿಯನ್' ₹10 ಸಾವಿರ ಕೋಟಿ ಮೀಸಲು

ನವದೆಹಲಿ (ಪಿಟಿಐ): ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು (ಎಂಎಸ್‌ಎಂಇ) ಚಾಂಪಿಯನ್‌ಗಳಾಗಿ ರೂಪಿಸಲು ಬಜೆಟ್‌ನಲ್ಲಿ ₹10 ಸಾವಿರ ಕೋಟಿ ಮೀಸಲಿರಿಸಲಾಗಿದೆ.

ಎಂಎಸ್‌ಎಂಇ ಆರ್ಥಿಕಾಭಿವೃದ್ಧಿಯ ಪ್ರಮುಖ ಎಂಜಿನ್. ಹೀಗಾಗಿ, ಇವುಗಳನ್ನು ಚಾಂಪಿಯನ್‌ಗಳಾಗಿ ಬೆಳೆಸುವ ಉದ್ದೇಶದಿಂದ ಬಂಡವಾಳ ನೆರವು, ನಗದು ಲಭ್ಯತೆ ಮತ್ತು ವೃತ್ತಿಪರ ನೆರವು ಎಂಬ ಮೂರು ಹಂತದ ವಿಧಾನಗಳನ್ನು ಪರಿಚಯಿಸಲಾಗಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡನೆ ವೇಳೆ ಪ್ರಸ್ತಾಪಿಸಿದರು.

**ಬಂಡವಾಳ ನೆರವು:** 2021ರಲ್ಲಿ ಸ್ಥಾಪಿಸಿದ 'ಸ್ವಾವಲಂಬಿ ಭಾರತ ನಿಧಿ'ಗೆ ಹೆಚ್ಚುವರಿಯಾಗಿ ₹2,000 ಕೋಟಿ ನೀಡುವುದಾಗಿ ಘೋಷಿಸಿದರು. ಇದು ಸಣ್ಣ ಉದ್ಯಮಗಳಿಗೆ ಅಗತ್ಯ ಬೆಂಬಲವನ್ನು ಮುಂದುವರಿಸಲು ಸಹಾಯ ಮಾಡುತ್ತದೆ.

**ವೃತ್ತಿಪರ ನೆರವು:** ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಕಡಿಮೆ ಖರ್ಚಿನಲ್ಲಿ ಕಾನೂನು ಮತ್ತು ನಿಯಮಗಳ ಪಾಲನೆಗೆ ಸಹಾಯ ಮಾಡಲು ಸರ್ಕಾರವು ವೃತ್ತಿಪರ ಸಂಸ್ಥೆಗಳ ಮೂಲಕ 'ಕಾರ್ಪೊರೇಟ್ ಮಿತ್ರ' ಎಂಬ ಪರಿಕಲ್ಪನೆಯನ್ನು ವಿಶೇಷವಾಗಿ 2ನೇ ಮತ್ತು 3ನೇ ಹಂತದ ನಗರಗಳಲ್ಲಿ ಜಾರಿಗೊಳಿಸಲು ಉತ್ತೇಜನ ನೀಡಲಿದೆ.

### ಟಿಆರ್‌ಇಡಿಎಸ್ ಮೂಲಕ ನಗದು ಲಭ್ಯತೆ

- ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳು (ಸಿಪಿಎಸ್‌ಇ) ಎಂಎಸ್‌ಎಂಇಗಳಿಂದ ವಸ್ತುಗಳನ್ನು ಖರೀದಿಸಿದಾಗ, ಹಣವನ್ನು ಕಡ್ಡಾಯವಾಗಿ ಟ್ರೇಡ್ ರಿಸೀವಬಲ್ಸ್ ಡಿಸ್ಕೌಂಟಿಂಗ್ ಸಿಸ್ಟಮ್ (ಟಿಆರ್‌ಇಡಿಎಸ್) ಎಂಬ ಡಿಜಿಟಲ್ ವೇದಿಕೆ ಮೂಲಕವೇ ಪಾವತಿಸಬೇಕು. ಇತರ ಕಾರ್ಪೊರೇಟ್ ಸಂಸ್ಥೆಗಳಿಗೆ ಇದನ್ನು ಒಂದು ಮಾದರಿಯಾಗಿಸುವ ಗುರಿ ಹೊಂದಲಾಗಿದೆ.
- ಸಣ್ಣ ಉದ್ಯಮಗಳು ತಮ್ಮ ಬಿಲ್‌ಗಳನ್ನು ಬ್ಯಾಂಕ್‌ಗಳಲ್ಲಿ ರಿಯಾಯಿತಿ ದರದಲ್ಲಿ ನಗದೀಕರಿಸಿಕೊಳ್ಳುವಾಗ (ಇನ್‌ವಾಯ್ಸ್ ಡಿಸ್ಕೌಂಟಿಂಗ್) ಒಂದು ವೇಳೆ ಹಣ ಮರುಪಾವತಿಯಲ್ಲಿ ತೊಂದರೆಯಾದರೆ ಅದಕ್ಕೆ ಸಿಜಿಟಿಎಂಎಸ್‌ಇ ಸಂಸ್ಥೆಯ ಮೂಲಕ ಸರ್ಕಾರವೇ ಗ್ಯಾರಂಟಿ ನೀಡಲಿದೆ.
- ಅಗ್ಗದ ಮತ್ತು ತ್ವರಿತ ಹಣಕಾಸು ಸೌಲಭ್ಯವನ್ನು ಉತ್ತೇಜಿಸಲು ಜಿಇಎಂ ಪೋರ್ಟಲ್‌ಅನ್ನು ಟಿಆರ್‌ಇಡಿಎಸ್ ಜೊತೆಗೆ ಸಂಯೋಜಿಸಲಾಗುತ್ತದೆ.
- ಎಂಎಸ್‌ಎಂಇಗಳು ಪಡೆಯಬೇಕಾದ ಹಣದ ದಾಖಲೆಗಳನ್ನು ಹೂಡಿಕೆ ಮಾಡಬಹುದಾದ ಬಾಂಡ್‌ಗಳಂತೆ ಪರಿವರ್ತಿಸಿ ಮಾರುಕಟ್ಟೆಯಲ್ಲಿ ಚಲಾವಣೆಗೆ ತರುವುದು. ಇದರಿಂದ ಹಣದ ಹರಿವು ಹೆಚ್ಚುತ್ತದೆ.
- ಟಿಆರ್‌ಇಡಿಎಸ್ ಮೂಲಕ ಎಂಎಸ್‌ಎಂಇಗಳಿಗೆ ₹7 ಲಕ್ಷ ಕೋಟಿಗಳಿಗೂ ಹೆಚ್ಚು ಹಣ ಲಭ್ಯವಾಗಲಿದೆ.

## ಅಂಕಿಗಳಲ್ಲಿ ಅನುದಾನ ಮತ್ತು ಸಾಲ



### ಗೃಹ ವ್ಯವಹಾರಗಳು (ಕೋಟಿಗಳಲ್ಲಿ)

| ವರ್ಷ | ಮೊತ್ತ | |
|---|---|---|
| 2025-26 | ₹2,33,211 | ಬಜೆಟ್ ಅಂದಾಜು |
| 2025-26 | ₹2,41,485 | ಪರಿಷ್ಕೃತ ಅಂದಾಜು |
| 2026-27 | ₹2,55,234 | ಬಜೆಟ್ ಅಂದಾಜು |

### ವಿದೇಶಾಂಗ ವ್ಯವಹಾರಗಳ ಇಲಾಖೆ (ಕೋಟಿಗಳಲ್ಲಿ)

| ವರ್ಷ | ಮೊತ್ತ | |
|---|---|---|
| 2025-26 | ₹20,517 | ಬಜೆಟ್ ಅಂದಾಜು |
| 2025-26 | ₹21,743 | ಪರಿಷ್ಕೃತ ಅಂದಾಜು |
| 2026-27 | ₹22,119 | ಬಜೆಟ್ ಅಂದಾಜು |

### ಸಾಲದ ಬಡ್ಡಿ ಪಾವತಿಗೆ ಸಿಂಹಪಾಲು (ಲಕ್ಷ ಕೋಟಿಗಳಲ್ಲಿ)

ಕೇಂದ್ರ ಸರ್ಕಾರ ಮಾಡಲಿರುವ ಒಟ್ಟಾರೆ ವೆಚ್ಚದಲ್ಲಿ ಮಾಡಿರುವ ಸಾಲಕ್ಕೆ ಬಡ್ಡಿ ಪಾವತಿಸಲು ದೊಡ್ಡ ಮೊತ್ತ ವ್ಯಯಿಸಲಿದೆ. ಒಂದು ರೂಪಾಯಿ ಲೆಕ್ಕಾಚಾರದಲ್ಲಿ 20 ಪೈಸೆಯನ್ನು ಬಡ್ಡಿ ಪಾವತಿಗೆ ಮೀಸಲಿಡಲಾಗಿದೆ.

| ವರ್ಷ | | ಮೊತ್ತ |
|---|---|---|
| 2025-26 | ಬಜೆಟ್ ಅಂದಾಜು | ₹12.76 |
| 2025-26 | ಪರಿಷ್ಕೃತ ಅಂದಾಜು | ₹12.74 |
| 2026-27 | ಬಜೆಟ್ ಅಂದಾಜು | ₹14.04 |

### ಎಷ್ಟು ಸಾಲ? (ಲಕ್ಷ ಕೋಟಿಗಳಲ್ಲಿ)

| ವರ್ಷ | | ಮೊತ್ತ |
|---|---|---|
| 2025-26 | ಬಜೆಟ್ ಅಂದಾಜು | ₹15.69 |
| 2025-26 | ಪರಿಷ್ಕೃತ ಅಂದಾಜು | ₹15.58 |
| 2026-27 | ಬಜೆಟ್ ಅಂದಾಜು | ₹16.96 |

Publication Date 02/02/2026

Presented by

# ಹಸ್ತಪ್ರತಿ ಡಿಜಿಟಲೀಕರಣ; ಆರ್ಥಿಕ ಕೊರತೆ

• ಗೋವರ್ಧನ ಎಸ್.ಎನ್.

ಹುಬ್ಬಳ್ಳಿ: ಪ್ರಾಚೀನ ಹಸ್ತಪ್ರತಿಗಳ ಡಿಜಿಟಲೀಕರಣಕ್ಕಾಗಿ, 'ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಹಾಗೂ ಡಿಜಿಟಲೀಕರಣ ಮಸೂದೆ–2025'ಕ್ಕೆ ಈಚೆಗೆ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ. ಆದರೆ, ತಾಳೆಗರಿಗಳಲ್ಲಿ ಇರುವ ವಚನ ಸಾಹಿತ್ಯವು ನಾಶವಾಗದಂತೆ, ಅದನ್ನು ಡಿಜಿಟಲೀಕರಣಗೊಳಿಸಿ ಶಾಶ್ವತವಾಗಿ ಕಾಪಾಡುವ ಕಾರ್ಯಕ್ಕೆ ಹಣಕಾಸಿನ ಕೊರತೆ ಉಂಟಾಗಿದೆ.

ಇ–ಸಾಹಿತ್ಯ ದಾಖಲೀಕರಣ, ಸಂಶೋಧನಾ ಕೇಂದ್ರದ ಮುಖ್ಯಸ್ಥ ಅಶೋಕ ದೊಮ್ಮಲೂರು ಅವರು ತಮ್ಮ ತಂಡದೊಂದಿಗೆ ಸ್ವಯಂಪ್ರೇರಿತವಾಗಿ, ಸ್ವಂತ ಹಣ ಹಾಗೂ ಇತರರ ನೆರವಿನೊಂದಿಗೆ ಈವರೆಗೆ 50 ಲಕ್ಷ ಹಸ್ತಪ್ರತಿಗಳನ್ನು ಡಿಜಿಟಲೀಕರಣ ಮಾಡಿದ್ದಾರೆ. ವಿವಿಧೆಡೆ ಕೋಟ್ಯಂತರ ಹಸ್ತ-ಪ್ರತಿಗಳಿದ್ದು, ಆರ್ಥಿಕ ತೊಂದರೆಯಿಂದ ಅವುಗಳ ಡಿಜಿಟಲೀಕರಣಕ್ಕೆ ತೊಡಕಾಗಿದೆ.

'ಹುಬ್ಬಳ್ಳಿಯ ಮೂರುಸಾವಿರ ಮಠ, ಗದುಗಿನ ತೋಂಟದಾರ್ಯ ಮಠ, ಬೆಳಗಾವಿಯ ನಾಗಲೂರು ರುದ್ರಾಕ್ಷಿ ಮಠ, ಚಿತ್ರದುರ್ಗದ ಸಿರಿಗೆರೆ ಮಠ, ತುಮಕೂರಿನ ಸಿದ್ಧಗಂಗಾಮಠ ಸೇರಿ ಧಾರವಾಡ, ಗುಲಬರ್ಗಾ, ಶಿವಮೊಗ್ಗ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿಗ-ಳನ್ನು ಉಚಿತವಾಗಿ ಡಿಜಿಟಲೀಕರಣ ಮಾಡಲಾಗಿದೆ. ಬೆಂಗಳೂರು ವಿಶ್ವವಿದ್ಯಾ ಲಯ, ಕೆಳದಿ ವಸ್ತುಸಂಗ್ರಹಾಲಯ-ದಲ್ಲಿನ ತಾಳೆಗರಿಗಳ ಡಿಜಿಟಲೀಕರಣ ಮಾಡಬೇಕಿದೆ. ದಿನಕ್ಕೆ 15,000 ಪ್ರತಿಗಳನ್ನು ಸ್ಕ್ಯಾನ್ ಮಾಡಲಾಗು-ತ್ತಿದ್ದು, ತಿಂಗಳಿಗೆ ಕನಿಷ್ಠ ₹4.50 ಲಕ್ಷ ಖರ್ಚಾಗುತ್ತಿದೆ' ಎಂದು ಕೇಂದ್ರದ ಅಶೋಕ ದೊಮ್ಮಲೂರು ಹೇಳಿದರು.

'ನನ್ನದೇ ಖಾಸಗಿ ಕಂಪನಿ ಇರುವುದರಿಂದ, ಅದರಿಂದ ಬರುವ ಹಣದಲ್ಲಿ ₹1.50 ಲಕ್ಷವನ್ನು ಈ ಕಾರ್ಯಕ್ಕೆ ವಿನಿಯೋಗಿಸುತ್ತಿರುವೆ. 6 ತಿಂಗಳಿನಿಂದ ದೆಹಲಿಯ ಇಂಥು ನೆಟ್‌ವರ್ಕ್ ಸಂಸ್ಥೆಯಿಂದ ಭಾಗಶಃ ನೆರವು ಸಿಗುತ್ತಿದೆ. ಸರ್ಕಾರದಿಂದಾಗ-ಲೀ, ಮಠಗಳಿಂದಾಗಲೀ ನೆರವು ಸಿಕ್ಕಿಲ್ಲ' ಎಂದರು.

'ಇಲ್ಲಿಯವರೆಗೆ ಆಗಿರುವುದು ವಚನಗಳ ಸಂಗ್ರಹವಷ್ಟೇ, ಪರಿಷ್ಕರಣೆ ಅಲ್ಲವೆಂದು ಫ.ಗು.ಹಳಕಟ್ಟಿ, ಎಂ.ಎಂ. ಕಲಬುರ್ಗಿ ಅವರೂ ಹೇಳಿದ್ದಾರೆ. ವಚನ ಸಾಹಿತ್ಯ ಅಧಿಕೃತವಾಗಬೇಕಾದರೆ, ತಾಳೆ-ಗರಿಗಳಲ್ಲಿನ ಹಸ್ತಪ್ರತಿಗಳ ಡಿಜಿಟಲೀಕರಣ ಹಾಗೂ ಸಮಗ್ರ ಅಧ್ಯಯನ ಅವಶ್ಯವಿದೆ. ಇದಕ್ಕಾಗಿ ನಾನು, ತಂಡದೊಂದಿಗೆ ಶ್ರಮಿ-ಸುತ್ತಿರುವೆ. ಸೀಮಿತ ಆರ್ಥಿಕ ಸಂಪನ್ಮೂ-ಲದಲ್ಲೇ 2013ರಿಂದ ಡಿಜಿಟಲೀಕರಣ ಪ್ರಕ್ರಿಯೆ ನಿರಂತರವಾಗಿ ಜರುಗುತ್ತಿದೆ. ಹೆಚ್ಚಿನ ನೆರವು ಸಿಕ್ಕರೆ ವಚನ ಸಾಹಿತ್ಯಕ್ಕೆ ಹೊಸ ಆಯಾಮ ಸಿಗಬಹುದು' ಎಂದು ಹೇಳಿದರು.

### 'ಸೂಕ್ತ ಸಂಗ್ರಹಕ್ಕೂ ಖರ್ಚು'

'ವಿಶ್ವವಿದ್ಯಾಲಯಗಳಲ್ಲೂ ನಿಧಿ ಇಲ್ಲದ ಕಾರಣ ನಮಗೆ ನೆರವು ಸಿಗುತ್ತಿಲ್ಲ. ತಂಡದಲ್ಲಿರುವ 15 ಜನರಿಗೆ ತಿಂಗಳಿಗೆ ₹15,000 ವೇತನ, ಶಾಸನ ತಜ್ಞರು, ಹಸ್ತಪ್ರತಿ ತಜ್ಞರು, ಲಿಪಿ ಓದುವವರು, ಪರಿಷ್ಕರಣೆ ಮಾಡುವವರಿಗೆ ಗೌರವಧನ, ಊಟ–ವಸತಿ ವ್ಯವಸ್ಥೆ ಮಾಡಿಕೊಡಬೇಕು. ಬಹುತೇಕ ಕಡೆ ಹಸ್ತಪ್ರತಿಗಳನ್ನು ಸರಿಯಾಗಿ ಸಂಗ್ರಹಿಸದ ಕಾರಣ ತಾಳೆಗರಿಗಳು ಹಾಳಾಗಿವೆ. ಅವನ್ನು ಫಮಿಗೇಷನ್ ಚೇಂಬರ್‌ನಲ್ಲಿಟ್ಟು, ಲೆಮನ್ ಗ್ರಾಸ್ ಲೇಪನ ಮಾಡಿ, ನಂತರ ಅಧ್ಯಯನ ಮಾಡಬೇಕಿದೆ. ಹಾಳಾಗದಂತೆ ಹೊಸಬಟ್ಟೆಯಲ್ಲಿ ಸುತ್ತಿ ಕೊಡುತ್ತೇವೆ. ಇದಕ್ಕೆಲ್ಲ ಹೆಚ್ಚು ಖರ್ಚಾಗುತ್ತದೆ' ಎಂದು ಅಶೋಕ ದೊಮ್ಮಲೂರು ವಿವರಿಸಿದರು.



ಮಂಡ್ಯ ಜಿಲ್ಲೆಯ ಮೇಲುಕೋಟೆಯ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಕೇಂದ್ರದಲ್ಲಿ ತಾಡೋಲೆ ಹಸ್ತಪ್ರತಿಗಳನ್ನು ಡಿಜಿಟಲೀಕರಣ ಮಾಡಲು ಸಿದ್ಧಗೊಳಿಸಲಾಯಿತು

**ಸದ್ಯ ದೊರೆತ ಹಸ್ತಪ್ರತಿಗಳು 200–300 ವರ್ಷಗಳಷ್ಟು ಹಳೆಯವು. ಮೂಲ ಹಸ್ತಪ್ರತಿಗಳ ಹುಡುಕಾಟದಲ್ಲಿದ್ದೇವೆ. ಅದಕ್ಕಾಗಿ ಜೈನರ ಬಸದಿಗಳಲ್ಲಿ ಸಂಶೋಧನೆ ನಡೆಯುತ್ತಿದೆ**

**ಅಶೋಕ ದೊಮ್ಮಲೂರು,** ಮುಖ್ಯಸ್ಥ, ಇ–ಸಾಹಿತ್ಯ ದಾಖಲೀಕರಣ, ಸಂಶೋಧನಾ ಕೇಂದ್ರ

# ಕಾರ್ಲೋಸ್ ಅಲ್ಕರಾಜ್ ಮುಡಿಗೆ ಕಿರೀಟ

## ಕಿರಿಯ ವಯಸ್ಸಿನಲ್ಲಿ 'ಕ್ಯಾರೀರ್ ಗ್ರ್ಯಾನ್‌ಸ್ಲಾಮ್' ಸಾಧನೆ: ಜೊಕೊಗೆ ನಿರಾಸೆ

ಮೆಲ್ಬರ್ನ್ (ಎಎಫ್‌ಪಿ): ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರ ಸವಾಲನ್ನು ಬದಿಗೊತ್ತಿದ ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ತಮ್ಮ ಮೊದಲ ಆಸ್ಟ್ರೇಲಿಯಾ ಓಪನ್ ಕಿರೀಟ ಮುಡಿಗೇರಿಸಿಕೊಂಡರು. ಇದರೊಂದಿಗೆ ಓಪನ್ ಯುಗದಲ್ಲಿ 'ಕ್ಯಾರೀರ್ ಗ್ರ್ಯಾನ್‌ಸ್ಲಾಮ್' ಸಾಧನೆ ಮಾಡಿದ ಅತಿ ಕಿರಿಯ ವಯಸ್ಸಿನ ಆಟಗಾರನೆಂಬ ಹೆಗ್ಗಳಿಕೆಯೂ ಅವರದಾಯಿತು.

ವಿಂಬಲ್ಡನ್, ಅಮೆರಿಕ ಓಪನ್ ಮತ್ತು ಫ್ರೆಂಚ್ ಓಪನ್‌ಗಳಲ್ಲಿ ತಲಾ ಎರಡು ಬಾರಿ ಚಾಂಪಿಯನ್ ಆಗಿದ್ದ ಅಲ್ಕರಾಜ್ ಅವರಿಗೆ ಇದು ಏಳನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯಾಗಿದೆ. 22ನೇ ವರ್ಷದಲ್ಲಿ ನಾಲ್ಕೂ ಗ್ರ್ಯಾನ್‌ಸ್ಲಾಮ್‌ಗಳನ್ನು ಜಯಿಸುವ ಮೂಲಕ ತಮ್ಮದೇ ದೇಶದ ರಫೆಲ್ ನಡಾಲ್ (24ನೇ ವಯಸ್ಸಿನಲ್ಲಿ) ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು. ವಿಶೇಷವೆಂದರೆ ಈ ಸಾಧನೆಗೆ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರೊಂದಿಗೆ ನಡಾಲ್ ಕೂಡ ಸಾಕ್ಷಿಯಾದರು.

ರಾಡ್ ಲೇವರ್ ಅರೇನಾದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಸ್ಪೇನ್‌ನ ಅಲ್ಕರಾಜ್ 2-6, 6-2, 6-3, 7-5ರಿಂದ ತಮಗಿಂತ 16 ವರ್ಷ ಹಿರಿಯ ಆಟಗಾರನನ್ನು ಹಿಮ್ಮೆಟ್ಟಿಸಿದರು. ಈ ಸೋಲಿನೊಂದಿಗೆ, ದಾಖಲೆಯ 25ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆಲ್ಲುವ ಜೊಕೊವಿಚ್ ಕನಸು ಮತ್ತೆ ಭಗ್ನಗೊಂಡಿತು.

'ಪ್ರತಿ ವರ್ಷ ಮೆಲ್ಬರ್ನ್‌ಗೆ ಬರುವುದು ನನಗೆ ಗೌರವದ ಸಂಗತಿ. ಈಗ ಕೆಲಸ ಮುಗಿದಿದೆ. ನಾಲ್ಕರಲ್ಲಿ ನಾಲ್ಕು ಪೂರ್ಣಗೊಂಡಿದೆ. ಕಠಿಣ ಸಂದರ್ಭದಲ್ಲಿ ನನ್ನನ್ನು ಪ್ರೋತ್ಸಾಹಿಸಿದ ಎಲ್ಲರಿಗೂ ಧನ್ಯವಾದಗಳು' ಎಂದು ಪಂದ್ಯದ ಬಳಿಕ ಅಲ್ಕರಾಜ್ ಪ್ರತಿಕ್ರಿಯಿಸಿದರು. ಜೊಕೊವಿಚ್ ಅವರನ್ನು ಕೊಂಡಾಡಿದ ಅವರು 'ಟೆನಿಸ್ ಆಟಗಾರರಿಗೆ



ಆಸ್ಟ್ರೇಲಿಯಾ ಓಪನ್ ಸಿಂಗಲ್ಸ್ ಪ್ರಶಸ್ತಿ ಗೆದ್ದ ಕಾರ್ಲೋಸ್ ಅಲ್ಕರಾಜ್ (ಎಡ) ರನ್ನರ್‌ಅಪ್ ನೊವಾಕ್ ಜೊಕೊವಿಚ್ ಎಎಫ್‌ಪಿ ಚಿತ್ರ

**'ಕ್ಯಾರೀರ್ ಗ್ರ್ಯಾನ್‌ಸ್ಲಾಮ್' ಸಾಧಿಸಿದ ಕಿರಿಯ ಆಟಗಾರರು** (ಓಪನ್ ಯುಗ)

| ಆಟಗಾರ | ದೇಶ | ಪ್ರಾಯ | ವರ್ಷ |
|---|---|---|---|
| ಕಾರ್ಲೋಸ್ ಅಲ್ಕರಾಜ್ | ಸ್ಪೇನ್ | 22 ವರ್ಷ, 272 ದಿನ | 2026 |
| ರಫೆಲ್ ನಡಾಲ್ | ಸ್ಪೇನ್ | 24 ವರ್ಷ 102 ದಿನ | 2010 |
| ರೋಜರ್ ಫೆಡರರ್ | ಸ್ವಿಟ್ಜರ್ಲೆಂಡ್ | 27 ವರ್ಷ 303 ದಿನ | 2009 |
| ನೊವಾಕ್ ಜೊಕೊವಿಚ್ | ಸರ್ಬಿಯಾ | 29 ವರ್ಷ 15 ದಿನ | 2016 |
| ಆ್ಯಂಡ್ರೆ ಅಗಾಸಿ | ಅಮೆರಿಕ | 29 ವರ್ಷ 68 ದಿನ | 1999 |

ಮಾತ್ರವಲ್ಲದೆ ಪ್ರಪಂಚದಾದ್ಯಂತ ಇರುವ ಕ್ರೀಡಾಪಟುಗಳಿಗೆ ಅವರು ಸ್ಫೂರ್ತಿ' ಎಂದು ಹೇಳಿದರು.

ಮೆಲ್ಬರ್ನ್ ಪಾರ್ಕ್‌ನ ಫೈನಲ್‌ನಲ್ಲಿ ಜೊಕೊವಿಚ್ ಅವರಿಗೆ ಇದು ಮೊದಲ ಸೋಲಾಗಿತ್ತು. ಈ ಹಿಂದೆ ದಾಖಲೆಯ 10 ಫೈನಲ್‌ನಲ್ಲಿಯೂ ಜಯ ಗಳಿಸಿದ್ದರು. 24 ಗ್ರ್ಯಾನ್‌ಸ್ಲಾಮ್‌ಗಳೊಂದಿಗೆ ಆಸ್ಟ್ರೇಲಿಯಾದ ಮಾರ್ಗರೇಟ್ ಕೋರ್ಟ್ ಅವರ ದಾಖಲೆಯನ್ನು ಹಂಚಿಕೊಂಡಿರುವ ಜೊಕೊವಿಚ್ ಇಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿ ಚಾರಿತ್ರಿಕ ದಾಖಲೆ ನಿರ್ಮಿಸುವ ಛಲದಲ್ಲಿದ್ದರು.

ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಟ್ರೋಫಿಯನ್ನು ಗೆದ್ದ ಅತ್ಯಂತ ಹಿರಿಯ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾಗಲು ಶ್ರಮಿಸುತ್ತಿರುವ ಜೊಕೊವಿಚ್, 2023ರಲ್ಲಿ ಕೊನೆಯ ಬಾರಿ ಅಮೆರಿಕ ಓಪನ್ ಗೆದ್ದಿದ್ದರು. ಅಂದಿನಿಂದ ಅಲ್ಕರಾಜ್ ಮತ್ತು ಇಟಲಿಯ ಯಾನಿಕ್ ಸಿನ್ನರ್ ಪಾರಮ್ಯ ಮೆರೆಯುತ್ತಿದ್ದಾರೆ.

'ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಾನು ಮತ್ತೆ ಗ್ರ್ಯಾನ್‌ಸ್ಲಾಮ್‌ನ ಸಮಾರೋಪ ಸಮಾರಂಭದಲ್ಲಿ ನಿಲ್ಲುತ್ತೇನೆ ಎಂದು ಭಾವಿಸಿರಲಿಲ್ಲ. ಆದ್ದರಿಂದ ಕಳೆದ ಎರಡು ವಾರಗಳಲ್ಲಿ

**ಅಲ್ಕರಾಜ್ ಗೆದ್ದ ಏಳು ಗ್ರ್ಯಾನ್‌ಸ್ಲಾಮ್‌ಗಳು**

| | |
|---|---|
| ಅಮೆರಿಕ ಓಪನ್ | 2022, 2025 |
| ವಿಂಬಲ್ಡನ್ | 2023, 2024 |
| ಫ್ರೆಂಚ್ ಓಪನ್ | 2024, 2025 |
| ಆಸ್ಟ್ರೇಲಿಯಾ ಓಪನ್ | 2026 |

**₹26 ಕೋಟಿ**
ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರಿಗೆ ಸಿಕ್ಕ ನಗದು ಬಹುಮಾನ

**₹14 ಕೋಟಿ**
ರನ್ನರ್ ಅಪ್ ನೊವಾಕ್ ಜೊಕೊವಿಚ್ ಅವರಿಗೆ ಸಿಕ್ಕ ನಗದು ಬಹುಮಾನ

ನನ್ನನ್ನು ಬೆಂಬಲಿಸಿದ ನಿಮಗೆ ಕೃತಜ್ಞನಾಗಿದ್ದೇನೆ' ಎಂದು ಜೊಕೊವಿಚ್ ಅಭಿಮಾನಿಗಳನ್ನು ಉದ್ದೇಶಿಸಿ ಹೇಳಿದರು. ಇದೇ ವೇಳೆ ಮೆಲ್ಬರ್ನ್ ಪಾರ್ಕ್‌ನಲ್ಲಿ ಇದು ಅವರ ಕೊನೆಯ ಟೂರ್ನಿಯಾಗಿರಬಹುದು ಎಂದು ಸುಳಿವು ನೀಡಿದರು. 'ನಾಳೆ ಏನಾಗುತ್ತದೆಯೋ ದೇವರೇ ಬಲ್ಲ' ಎಂದರು.

ಸ್ಟ್ಯಾಂಡ್‌ನಲ್ಲಿದ್ದ ನಡಾಲ್ ಅವರನ್ನು ಉದ್ದೇಶಿಸಿ, 'ಇಲ್ಲಿ ಸ್ಪ್ಯಾನಿಷ್ ದಂತಕಥೆಗಳು ತುಂಬಾ ಇವೆ. ಇಂದು ನಾನು ಇಬ್ಬರು ಸ್ಪೇನ್ ದಿಗ್ಗಜರ ವಿರುದ್ಧ ಒಬ್ಬನೇ ಸೆಣಸಿದೆ ಎಂದು ಅನಿಸುತ್ತದೆ. ಇದು ನ್ಯಾಯಯುತವೇ' ಎಂದು ಜೊಕೊ ಹಾಸ್ಯ ಚಟಾಕಿ ಹಾರಿಸಿದರು.

ನಾಲ್ಕನೇ ಶ್ರೇಯಾಂಕದ ಜೊಕೊವಿಚ್ ಅವರು ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ವಿರುದ್ಧ; ಅಲ್ಕರಾಜ್ ಅವರು ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ವಿರುದ್ಧ ತಮ್ಮ ಸೆಮಿಫೈನಲ್‌ಗಳಲ್ಲಿ ಐದು ದೀರ್ಘ ಸೆಟ್‌ಗಳಲ್ಲಿ ಹೋರಾಡಿ ಗೆದ್ದಿದ್ದರು. ಅಲ್ಕರಾಜ್ ಇಲ್ಲಿ ಇದೇ ಮೊದಲ ಬಾರಿ ಕ್ವಾರ್ಟರ್ ಫೈನಲ್ ಹಂತವನ್ನು ದಾಟಿ ಬಂದಿದ್ದರು.

Publication Date
02/02/2026

Presented by ಪ್ರಜಾವಾಣಿ

# ಕ್ರೀಡಾ ಸಾಮಗ್ರಿ ತಯಾರಿಕೆಗೆ ಬೆಂಬಲ

ಕೇಂದ್ರ ಬಜೆಟ್ 20206-27

ನವದೆಹಲಿ (ಪಿಟಿಐ): ಕ್ರೀಡಾ ಸಾಮಗ್ರಿಗಳ ತಯಾರಿಕಾ ವಲಯಕ್ಕೆ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು, ₹500 ಕೋಟಿ ಅನುದಾನ ನಿಗದಿಪಡಿಸ ಲಾಗಿದೆ. ಅಲ್ಲದೆ, ಮುಂದಿನ 10 ವರ್ಷಗಳಲ್ಲಿ ಕ್ರೀಡಾ ವಲಯದ ಸರ್ವತೋಮುಖ ಅಭಿವೃದ್ಧಿಗಾಗಿ 'ಖೇಲೊ ಇಂಡಿಯಾ ಮಿಷನ್' ಯೋಜನೆಯನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ಕ್ರೀಡಾ ಸಲಕರಣೆಗಳ ತಯಾರಿಕೆ, ಅವುಗಳ ಉತ್ಪಾದನೆಗೆ ಸಂಬಂಧಿಸಿದ ಸಂಶೋಧನೆ ಹಾಗೂ ಆವಿಷ್ಕಾರಗಳನ್ನು ಬೆಂಬಲಿಸಲು ಕೇಂದ್ರ ಸರ್ಕಾರವು ಇದೇ ಮೊದಲ ಬಾರಿಗೆ ಈ ಬಗ್ಗೆ ಯೋಜನೆ ರೂಪಿಸಿದೆ. ಈ ಯೋಜನೆಯು ಕ್ರೀಡಾ ಸಾಮಗ್ರಿ ತಯಾರಿಸುವ ನವೋದ್ಯಮ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಲಿದೆ ಎನ್ನಲಾಗಿದೆ.

## ಖೇಲೊ ಇಂಡಿಯಾ ಮಿಷನ್

ಮುಂದಿನ ಒಂದು ದಶಕದಲ್ಲಿ ದೇಶದಲ್ಲಿ ಕ್ರೀಡಾ ತರಬೇತಿ ಕೇಂದ್ರಗಳ ಉನ್ನತೀಕರಣ ಹಾಗೂ ಕೋಚಿಂಗ್ ವ್ಯವಸ್ಥೆಯ ಸುಧಾರಣೆಗಾಗಿ 'ಖೇಲೊ ಇಂಡಿಯಾ ಮಿಷನ್' ಆರಂಭಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ಗುಣಮಟ್ಟದ ತರಬೇತಿ ನೀಡಲು ಈ ಯೋಜನೆ ನೆರವು ನೀಡಲಿದೆ.

**ಖೇಲೊ ಇಂಡಿಯಾ ಮಿಷನ್‌ನ ಐದು ಕ್ರಮಗಳು:**

1. ತರಬೇತಿ ಕೇಂದ್ರಗಳ ಮೂಲಕ ಕ್ರೀಡಾ ಪ್ರತಿಭೆಗಳ ಅನ್ವೇಷಣೆ
2. ಕೋಚ್‌ಗಳು ಮತ್ತು ಸಹಾಯಕ ಸಿಬ್ಬಂದಿಗೆ ಕಾರ್ಯದಕ್ಷತೆಯ ತರಬೇತಿ
3. ಕ್ರೀಡಾ ವಿಜ್ಞಾನ ಮತ್ತು ತಂತ್ರಜ್ಞಾನದ ಸಮನ್ವಯ
4. ಕ್ರೀಡಾ ಸಂಸ್ಕೃತಿ ಪ್ರೋತ್ಸಾಹಿಸಲು ಸ್ಪರ್ಧೆಗಳು ಹಾಗೂ ಲೀಗ್‌ಗಳ ಆಯೋಜನೆ
5. ಕೂಟಗಳ ಆಯೋಜನೆ, ತರಬೇತಿಗಾಗಿ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿ

ಕ್ರೀಡಾ ಸಚಿವಾಲಯಕ್ಕೆ ಒಟ್ಟಾರೆ ₹4,479.88 ಕೋಟಿಯನ್ನು ಹಂಚಲಾಗಿದೆ. ಕಳೆದ ಬಾರಿಯ ಬಜೆಟ್‌ನಲ್ಲಿ ₹3,346.54 ಕೋಟಿಯನ್ನು ಹಂಚಿಕೆ ಮಾಡಲಾಗಿತ್ತು.

**ಕ್ರೀಡಾಪಟುಗಳ ಪ್ರೋತ್ಸಾಹಧನ ಹೆಚ್ಚಳ:** ಕ್ರೀಡಾಪಟುಗಳಿಗೆ ನೀಡಲಾಗುವ ಪ್ರೋತ್ಸಾಹ ಧನವನ್ನು ₹28 ಕೋಟಿಯಿಂದ ₹40 ಕೋಟಿಗೆ ಹೆಚ್ಚಿಸಲಾಗಿದೆ. ಖೇಲೊ ಇಂಡಿಯಾ ಯೋಜನೆಗೆ ₹924.35 ಕೋಟಿ ನಿಗದಿಪಡಿಸಲಾಗಿದೆ. ಕಾಮನ್‌ವೆಲ್ತ್ ಕೂಟಕ್ಕೆ ನೀಡಲಾಗುವ ನೆರವನ್ನು ₹28.05 ಕೋಟಿಯಿಂದ ₹50 ಕೋಟಿಗೆ ಏರಿಕೆ ಮಾಡಲಾಗಿದೆ.

Publication Date
02/02/2026

Presented by ಪ್ರಜಾವಾಣಿ

## ಥಾಯ್ಲೆಂಡ್ ಮಾಸ್ಟರ್ಸ್ ಗೆದ್ದ ದೇವಿಕಾ

ಬ್ಯಾಂಕಾಕ್ (ಪಿಟಿಐ): ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ್ತಿ ದೇವಿಕಾ ಸಿಹಾಗ್ ಅವರು ಭಾನುವಾರ ಥಾಯ್ಲೆಂಡ್ ಮಾಸ್ಟರ್ಸ್ ಫೈನಲ್‌ನಲ್ಲಿ ಜಯಿಸುವ ಮೂಲಕ ಚೊಚ್ಚಲ ಬಿಡಬ್ಲ್ಯೂಎಫ್ ಸೂಪರ್ 300 ಕಿರೀಟ ಮುಡಿಗೇರಿಸಿಕೊಂಡರು.



ದೇವಿಕಾ ಸಿಹಾಗ್

ಹರಿಯಾಣದ ದೇವಿಕಾ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ 21-8, 6-3ರಲ್ಲಿ ಮುನ್ನಡೆಯಲ್ಲಿದ್ದಾಗ ಮಲೇಷ್ಯಾದ ಗೋ ಜಿನ್ ವೀ ಅವರು ಮಂಡಿರಜ್ಜು ಗಾಯದಿಂದಾಗಿ ಸ್ಪರ್ಧೆಯಿಂದ ಹಿಂದೆ ಸರಿದರು. ಇದರೊಂದಿಗೆ 20 ವರ್ಷದ ದೇವಿಕಾ ವೃತ್ತಿಜೀವನದ ಪ್ರತಿಷ್ಠಿತ ಪ್ರಶಸ್ತಿಗೆ ಮುತ್ತಿಕ್ಕಿ, ₹17.19 ಲಕ್ಷ ಬಹುಮಾನ ಗೆದ್ದುಕೊಂಡರು. ಈ ಟೂರ್ನಿ ಒಟ್ಟು ₹2.29 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿತ್ತು.

ಪ್ರಸ್ತುತ ವಿಶ್ವ ರ‍್ಯಾಂಕಿಂಗ್‌ನಲ್ಲಿ 63ನೇ ಸ್ಥಾನದಲ್ಲಿರುವ ದೇವಿಕಾ ಅವರು ಬೆಂಗಳೂರಿನ ಪಡುಕೋಣೆ – ದ್ರಾವಿಡ್ ಶ್ರೇಷ್ಠತಾ ಕೇಂದ್ರದಲ್ಲಿ ಕೋಚ್ ಉಮೇಂದ್ರ ರಾಣಾ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. 2025ರಲ್ಲಿ ಮಲೇಷ್ಯಾ ಇಂಟರ್‌ನ್ಯಾಷನಲ್‌ನಲ್ಲಿ ತನ್ನ ಚೊಚ್ಚಲ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಗೆದ್ದಿದ್ದ ದೇವಿಕಾ, ಅದೇ ವರ್ಷ ಜಾಗತಿಕ ವಿಶ್ವ-ವಿದ್ಯಾಲಯ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದ ಭಾರತ ಮಿಶ್ರ ತಂಡದ ಭಾಗವಾಗಿದ್ದರು.

ದೇವಿಕಾ ಅವರು ಕಳೆದ ಋತುವಿನಲ್ಲಿ ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 100 ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದರು.

## ಆದಂಪುರ ವಿಮಾನ ನಿಲ್ದಾಣಕ್ಕೆ ರವಿದಾಸ್ ಹೆಸರು

ಜಲಂಧರ್ (ಪಂಜಾಬ್): ಆದಂಪುರ ವಿಮಾನ ನಿಲ್ದಾಣದ ಹೆಸರನ್ನು 'ಶ್ರೀ ಗುರು ರವಿದಾಸ್ ಮಹಾರಾಜ್ ಜಿ ವಿಮಾನ ನಿಲ್ದಾಣ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಮರುನಾಮಕರಣ ಮಾಡಿದರು.

ಲುಧಿಯಾನದ ಹಲ್ವಾರಾ ವಿಮಾನ ನಿಲ್ದಾಣದಲ್ಲಿನ ಟರ್ಮಿನಲ್ ಕಟ್ಟಡವನ್ನು ವರ್ಚುವಲ್ ಆಗಿ ಅವರು ಉದ್ಘಾಟಿಸಿದರು.

ಸಂಸತ್ತಿನಲ್ಲಿ ಕೇಂದ್ರ ಬಜೆಟ್ ಮಂಡನೆಯಾದ ಬಳಿಕ ಪ್ರಧಾನಿ ದೆಹಲಿಯಿಂದ ಮಧ್ಯಾಹ್ನ 3.45ರ ಸುಮಾರಿಗೆ ಆದಂಪುರ ವಿಮಾನ ನಿಲ್ದಾಣ ತಲುಪಿದರು.

ಗುರು ರವಿದಾಸ್ ಅವರ 649ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಮೋದಿ ಅವರು ಡೇರಾ ಸಚ್‌ಖಂಡ ಬಲ್ಲಾನ್‌ಗೆ ಭೇಟಿ ನೀಡಿದರು.

## ❖ 25 ವರ್ಷದಲ್ಲಿ ರೈತರಿಗೆ ₹111 ಲಕ್ಷ ಕೋಟಿ ನಷ್ಟ: ಕೃಷಿ ಸುಧಾರಣಾ ಸಮಿತಿ ಅಧ್ಯಕ್ಷ ದೇವಿಂದರ್ ಶರ್ಮಾ

**ಸಂದರ್ಭ: ಅಧ್ಯಯನದ ಪ್ರಕಾರ 25 ವರ್ಷದಲ್ಲಿ (2000-2025ರ ಅವಧಿ) ದೇಶದ ರೈತರಿಗೆ ₹111 ಲಕ್ಷ ಕೋಟಿ ನಷ್ಟವಾಗಿದೆ. ಭಾರತ ಮಾತ್ರವಲ್ಲದೇ ವಿದೇಶಗಳಲ್ಲೂ ಕೃಷಿ ಬಿಕ್ಕಟ್ಟಿನಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕೃಷಿ ಸುಧಾರಣಾ ಸಮಿತಿ ಅಧ್ಯಕ್ಷ ದೇವಿಂದರ್ ಶರ್ಮಾ ಹೇಳಿದರು.**

- ರೈತರ ಆತ್ಮಹತ್ಯೆಗಳ ತಡೆ ಸಮಿತಿ ನಗರದ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಸೋಮವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ರೈತರ ಆತ್ಮಹತ್ಯೆ ತಡೆಯುವ ಕುರಿತು ಚರ್ಚೆ ನಡೆಸಿ ಕೃಷಿ ತಂತ್ರಜ್ಞರ, ರೈತ ನಾಯಕರ ಸಲಹೆ ಪಡೆಯಲಾಯಿತು.
- 2000-2016ರ ಅವಧಿಯಲ್ಲಿ ₹45 ಲಕ್ಷ ಕೋಟಿ ರೈತರಿಗೆ ನಷ್ಟವಾಗಿತ್ತು. ಇದಕ್ಕೆ ಹಲವು ಕಾರಣಗಳಿವೆ. ಈ ವಿಷಯದ ಬಗ್ಗೆ ಸಂಸತ್, ವಿಧಾನ ಮಂಡಲ, ಕೃಷಿ ವಿಶ್ವ-ವಿದ್ಯಾಲಯ, ಶಿಕ್ಷಣ ಸಂಸ್ಥೆಗಳು ಹಾಗೂ ಮಾಧ್ಯಮಗಳಲ್ಲೂ ಚರ್ಚೆ ನಡೆಯಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.
- ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಶೇ 3.4ರಷ್ಟು ಅನುದಾನ ನೀಡಲಾಗಿದೆ. ಕರ್ನಾಟಕದ ನೀತಿ ನಿರೂಪಕರು ಸಹ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಬೇಕು ಎಂದು ಸಲಹೆ ನೀಡಿದರು.
- ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, 'ರಾಜ್ಯ ಬಜೆಟ್ ಪೂರ್ವಭಾವಿ ಸಭೆಗೆ ಕೃಷಿ ತಜ್ಞರನ್ನು ಆಹ್ವಾನಿಸಿ, ಕೃಷಿ ಕ್ಷೇತ್ರಕ್ಕೆ ಅಗತ್ಯವಾದ ಬೇಡಿಕೆಗಳನ್ನು ಮುಖ್ಯಮಂತ್ರಿ ಬಳಿ ಪ್ರಸ್ತಾಪಿಸಲು ಅವಕಾಶ ಕಲ್ಪಿಸಲಾ ಗುವುದು. ಪ್ರತಿಷ್ಠೆಗಾಗಿ ಬಡವರು, ರೈತರು ಇತ್ತೀಚಿನ ದಿನಗಳಲ್ಲಿ ಸಾಲ ಮಾಡಿ ಮಕ್ಕಳ ಅದ್ದೂರಿಯಾಗಿ ಮದುವೆಯನ್ನು ಮಾಡುತ್ತಿದ್ದಾರೆ.ಮದ್ಯ ಮಾರಾಟದಿಂದಲೂ ತೊಂದರೆ ಉಂಟಾಗುತ್ತಿದ್ದು, ಸರ್ಕಾರಕ್ಕೆ ₹46 ಸಾವಿರ ಕೋಟಿ ಆದಾಯ ಬರುತ್ತದೆ ಎಂದು ಬೇರೆಯವರ ಬದುಕನ್ನು ಹಾಳು ಮಾಡುವುದು ಸರಿಯಲ್ಲ' ಎಂದರು.
- ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ರೈತ ನಾಯಕ ಕೆ.ಟಿ. ಗಂಗಾಧರ್, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಅಶೋಕ್ ದಳವಾಯಿ. ಕೃಷಿ ತಂತ್ರಜ್ಞರ ಸಂಸ್ಥೆ ಅಧ್ಯಕ್ಷ ಡಾ.ಎ.ಬಿ. ಪಾಟೀಲ, ರಾಜ್ಯ ಕೃಷಿ ಮಾರಾಟ ಮಂಡಳಿಯ ಮಾಜಿ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ ಹುಂಬರವಾಡಿ, ನಿವೃತ್ತ ಕೃಷಿ ಅಧಿಕಾರಿ ಬಿ.ಎಚ್.ಪಿಂಜಾರ್ ಹಾಜರಿದ್ದರು.

## ❖ ಟ್ರಂಪ್ ಸುಂಕ ಶೇ18ಕ್ಕೆ ಕಡಿತ

**ಸಂದರ್ಭ: 'ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಅಂತಿಮಗೊಂಡಿದೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಘೋಷಿಸಿದ್ದಾರೆ.**

- 'ಭಾರತವು ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಲು ಮತ್ತು ವೆನೆಜುವೆಲಾದಿಂದ ಹೆಚ್ಚಿನ ತೈಲ ಖರೀದಿಸಲು ಒಪ್ಪಿಕೊಂಡಿದೆ. ಅದಕ್ಕೆ ಪ್ರತಿಯಾಗಿ ಅಮೆರಿಕವು ಪ್ರತಿಸುಂಕವನ್ನು ಪ್ರಸ್ತುತ ಶೇ 25ರಿಂದ ಶೇ 18ಕ್ಕೆ ಇಳಿಸಲಿದೆ' ಎಂದು ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. 'ಭಾರತವು ಅಮೆರಿಕದಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಶೂನ್ಯ ಸುಂಕ ವಿಧಿಸಲಿದೆ' ಎಂದೂ ಹೇಳಿಕೊಂಡಿದ್ದಾರೆ.
- ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾದ ನಂತರದಲ್ಲಿ, ಭಾರತದಿಂದ ಆಮದು ಆಗುವ ಸರಕುಗಳಿಗೆ ಶೇಕಡ 50ರಷ್ಟು ಸುಂಕ ವಿಧಿಸಿದ್ದಾರೆ. ಈ ಪೈಕಿ 25ರಷ್ಟು 'ಪ್ರತಿಸುಂಕ'ದ ರೀತಿಯಲ್ಲಿದೆ. ಇನ್ನುಳಿದ ಶೇ 25ರಷ್ಟು ಸುಂಕವನ್ನು, ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿದೆ ಎಂಬ ಕಾರಣಕ್ಕೆ ಹೇರಲಾಗಿದೆ.

Dr Rajkumar IAS/KAS Academy

- 'ಭಾರತವು ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿದರೆ ಹಾಗೂ ಅಮೆರಿಕದ ಸರಕುಗಳಿಗೆ ಶೂನ್ಯ ಸುಂಕ ವಿಧಿಸಿದರೆ ಭಾರತದ ಸರಕುಗಳ ಮೇಲಿನ ಸುಂಕವನ್ನು ಪ್ರಸ್ತುತ ಶೇ 50ರಿಂದ ಶೇ 18ಕ್ಕೆ ಇಳಿಸಲಾಗುವುದು' ಎಂದು ಶ್ವೇತಭವನದ ತಿಳಿಸಿದ್ದಾರೆ.
- ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಜತೆ ದೂರವಾಣಿ ಮೂಲಕ ಸಂಭಾಷಣೆ ನಡೆಸಿದ್ದು, ಅದರ ಬೆನ್ನಲ್ಲೇ ಈ ಮಹತ್ವದ ಘೋಷಣೆ ಮಾಡಿದ್ದಾರೆ.
- 'ಪ್ರಧಾನಿ ಮೋದಿ ಅವರೊಂದಿಗಿನ ಸ್ನೇಹ ಮತ್ತು ಗೌರವದಿಂದ ಹಾಗೂ ಅವರ ಕೋರಿಕೆಯಂತೆ, ತಕ್ಷಣವೇ ಜಾರಿಗೆ ಬರುವಂತೆ ನಾನು ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಮ್ಮತಿಸಿದ್ದೇನೆ' ಎಂದು ಹೇಳಿದ್ದಾರೆ.
- ಅದರ ಬೆನ್ನಲ್ಲೇ ಪ್ರಧಾನಿ ಮೋದಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು, 'ಭಾರತದಲ್ಲಿ ತಯಾರಾದ ಉತ್ಪನ್ನಗಳಿಗೆ ಅಮೆರಿಕ ವಿಧಿಸುತ್ತಿದ್ದ ತೆರಿಗೆ ಈಗ ಶೇ 18ಕ್ಕೆ ಇಳಿಕೆಯಾಗಿರುವುದು ಸಂತಸ ಉಂಟುಮಾಡಿದೆ' ಎಂದು ಹೇಳಿದ್ದಾರೆ.
- 'ಈ ಮಹತ್ವದ ಘೋಷಣೆಗಾಗಿ ದೇಶದ 140 ಕೋಟಿ ಜನರ ಪರವಾಗಿ ಅಧ್ಯಕ್ಷ ಟ್ರಂಪ್ ಅವರಿಗೆ ಧನ್ಯವಾದಗಳು' ಎಂದಿದ್ದಾರೆ. ಆದರೆ ಪ್ರಧಾನಿ ಅವರು ತಮ್ಮ ಪೋಸ್ಟನಲ್ಲಿ ವ್ಯಾಪಾರ ಒಪ್ಪಂದದ ಬಗ್ಗೆಯಾವುದೇಉಲ್ಲೇಖ ಮಾಡಿಲ್ಲ.
- ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ವಾಷಿಂಗ್ಟನ್‌ಗೆ ಮೂರು ದಿನಗಳ ಭೇಟಿಯನ್ನು ಪ್ರಾರಂಭಿಸಿದ ದಿನದಂದೇ ಈ ಬೆಳವಣಿಗೆ ನಡೆದಿದೆ.

## ❖ ದಲೈಲಾಮಾಗೆ ಗ್ರಾಮಿ ಪ್ರಶಸ್ತಿ

**ಸಂದರ್ಭ: ಟಿಬೆಟ್‌ನ ಬೌದ್ಧರ ಅಧ್ಯಾತ್ಮಿಕ ಗುರು ದಲೈ ಲಾಮಾ ಅವರು 'ಗ್ರಾಮಿ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.**

- ಅಡಿಯೊ ಪುಸ್ತಕ, ನಿರೂಪಣೆ ಹಾಗೂ ಕಥೆ ಹೇಳುವಿಕೆ, ಸಂಗೀತ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿ ಎಂದು . 'ಗ್ರಾಮಿ'ಯನ್ನು ಗುರುತಿಸಲಾಗಿದೆ.
- ಲಾಸ್ ಏಂಜಲೀಸ್‌ನಲ್ಲಿ ನಡೆದ ಗ್ರಾಮಿ ಪ್ರಶಸ್ತಿ ಸಮಾರಂಭದಲ್ಲಿ 'ಮೆಡಿಟೇಷನ್: ದಿ ರಿಫ್ಲೆಕ್ಷನ್ ಆಫ್ ಹಿಸ್ ಹೋಲಿನೆಸ್ ದಿ ದಲೈ ಲಾಮಾ' ಎಂಬ ಆಡಿಯೂ ಬುಕ್‌ಗಾಗಿ ಪ್ರಶಸ್ತಿ ಘೋಷಣೆ ಮಾಡಲಾಯಿತು.
- ಪ್ರಶಸ್ತಿಗೆ ಅರ್ಹರಾಗಿರುವುದಕ್ಕೆ ಕೃತಜ್ಞತೆ ಸಲ್ಲಿಸಿರುವ ದಲೈ ಲಾಮಾ, 'ಇದು ವೈಯಕ್ತಿಕ ಸಾಧನೆಯಲ್ಲ, ಜಾಗತಿಕ ಹೊಣೆಗಾರಿಕೆ ಹಾಗೂ ಸಹಾನುಭೂತಿಗೆ ಸಂದ ಮನ್ನಣೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
- 'ಈ ಪ್ರಶಸ್ತಿಯನ್ನು ವಿನಮ್ರವಾಗಿ ಸ್ವೀಕರಿಸುತ್ತೇನೆ. ಶಾಂತಿ, ಸಹಾನುಭೂತಿ, ಪರಿಸರ ಬಗ್ಗೆ ಕಾಳಜಿ, ಮಾನವೀಯತೆಯ ಏಕತೆ ಮತ್ತು ಎಂಟು ಶತಕೋಟಿ ಜನರ ಯೋಗಕ್ಷೇಮ ಅತ್ಯಗತ್ಯ ಎಂದು ನಾನು ನಂಬಿಕೊಂಡಿದ್ದೇನೆ. ಈ ಸಂದೇಶವನ್ನು ಇನ್ನಷ್ಟು ಪಸರಿಸಲು ಗ್ರಾಮಿ ಪ್ರಶಸ್ತಿ ಪ್ರೇರಣೆಯಾಗಲಿದೆ' ಎಂದು ಹೇಳಿದ್ದಾರೆ.
- 1959ರಲ್ಲಿ ಚೀನಾ ಸೇನೆಯ ಅತಿಕ್ರಮಣದಿಂದ ಜೀವಭಯಕ್ಕೆ ಒಳಗಾಗಿ ಭಾರತಕ್ಕೆ ಬಂದು ಆಶ್ರಯ ಪಡೆದಿದ್ದಾರೆ.
- ಚೀನಾ ಆಕ್ಷೇಪ (ಬೀಜಿಂಗ್ ವರದಿ): ದಲೈ ಲಾಮಾ ಅವರಿಗೆ ಗ್ರಾಮಿ ಪ್ರಶಸ್ತಿ ನೀಡಿದ್ದನ್ನು ಚೀನಾ ಖಂಡಿಸಿದೆ.

Dr. Rajkumar IAS/KAS Academy

## ❖ 'ಪಿನಾಕಿನಿ: ನ್ಯಾಯಮಂಡಳಿ ಸ್ಥಾಪಿಸಿ'

**ಸಂದರ್ಭ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದಗಳನ್ನು ಬಗೆಹರಿಸಲು ನ್ಯಾಯಮಂಡಳಿ ರಚಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ತೀರ್ಪು ನೀಡಿದೆ. ಇದ ರಿಂದಾಗಿ, ಮಾತುಕತೆ ಮೂಲಕವೇ ವಿವಾದ ಬಗೆಹರಿಸಲು ಮುಂದಾಗಿದ್ದ ಕರ್ನಾಟಕಕ್ಕೆ ಹಿನ್ನಡೆಯಾಗಿದೆ.**

- ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿ ತೀರ್ಪನ್ನು ಕಾಯ್ದಿರಿಸಿದ್ದ ನ್ಯಾಯ ಮೂರ್ತಿಗಳಾದ ವಿಕ್ರಮ್ನಾಥ್ ಹಾಗೂ ಎನ್.ವಿ.ಅಂಜಾರಿಯಾ ಅವರಿದ್ದ ಪೀಠವು, '1956ರ ಅಂತರರಾಜ್ಯ ನದಿ ನೀರು ವಿವಾದ ಕಾಯ್ದೆಯಡಿ ಕೇಂದ್ರ ಸರ್ಕಾರವು ಶಾಸನಬದ್ಧ ಕಾರ್ಯಗಳನ್ನು ನಡೆಸಲು ಯಾವುದೇ ಕಾನೂನು ಅಡಚಣೆ ಇಲ್ಲ' ಎಂದು ಸ್ಪಷ್ಟಪಡಿಸಿದೆ.
- ವಿವಾದ ಪರಿಹರಿಸಲು ನ್ಯಾಯ ಮಂಡಳಿ ರಚಿಸುವುದಕ್ಕೆ ಕೇಂದ್ರಕ್ಕೆ ಯಾವುದೇ ಅಡಚಣೆ ಇಲ್ಲ.
- ತಮಿಳುನಾಡು ತನ್ನ ದೂರನ್ನು ನ್ಯಾಯ ಮಂಡಳಿಯ ಮುಂದೆ ಸಲ್ಲಿಸಬೇಕು ಎಂದು ಪೀಠ ನಿರ್ದೇಶಿಸಿತು. 2018ರಲ್ಲಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಪೀಠ ವಿಲೇವಾರಿ ಮಾಡಿತು.
- ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸ-ಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ.
- ಈ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ಗೆ 2018ರ ಮೇ 18ರಂದು ಅರ್ಜಿ ಸಲ್ಲಿಸಿತ್ತು. ಜಲವಿವಾದ ನ್ಯಾಯಮಂಡಳಿ ಒತ್ತಾಯಿಸಿ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ 2019ರ ನವೆಂಬರ್ ತಿಂಗಳಲ್ಲಿ ಮನವಿ ಮಾಡಿತ್ತು.
- ಜಲಶಕ್ತಿ ಸಚಿವಾಲಯವು 2020ರಲ್ಲಿ ಸಂಧಾನ ಸಭೆ ನಡೆಸಿತ್ತು. ಆದರೆ, ರಾಜ್ಯ ಸರ್ಕಾರಗಳು ಒಮ್ಮತಕ್ಕೆ ಬಂದಿರಲಿಲ್ಲ. ಹೊಸದಾಗಿ ಸಂಧಾನ ನಡೆಸುವಂತೆ ಕರ್ನಾಟಕ ಸರ್ಕಾರವು ಕೇಂದ್ರವನ್ನು 2024ರ ಜೂನ್ ನಲ್ಲಿ ಒತ್ತಾಯಿಸಿತ್ತು.
- ಈ ನಡುವೆ, ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ, ಕೇಂದ್ರ ಜಲ ಆಯೋಗದ ಅಧ್ಯಕ್ಷರ ನೇತೃತ್ವದಲ್ಲಿ ಜಲಶಕ್ತಿ ಸಚಿವಾಲಯವು ಹೊಸ ಸಂಧಾನ ಸಮಿತಿ ರಚಿಸಿತ್ತು. ಈ ಸಮಿತಿಯು ಉಭಯ ರಾಜ್ಯಗಳ ನಡುವೆ ಒಂಬತ್ತು ಸಭೆಗಳನ್ನು ನಡೆಸಿತ್ತು.
- ಜಲ ವಿವಾದ ಬಗೆಹರಿಸಲು ನ್ಯಾಯಮಂಡಳಿ ರಚಿಸುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ಕರ್ನಾಟಕ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು. ಮಾತುಕತೆಯ ಮೂಲಕ ಈ ವಿವಾದವನ್ನು ಸೌಹಾರ್ದ-ಯುತವಾಗಿ ಬಗೆಹರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರವು ಜಲಶಕ್ತಿ ಸಚಿವಾಲಯಕ್ಕೆ ಪತ್ರ ಬರೆದಿತ್ತು.
- ಕರ್ನಾಟಕದ ಜಲಾನಯನ ಪ್ರದೇಶದಲ್ಲಿ ಒಟ್ಟು 11.77 ಟಿಎಂಸಿ ನೀರಿನಲ್ಲಿ 9.77 ಟಿಎಂಸಿ ನೀರನ್ನು ಬಳಸಲು ಯೋಜಿಸಲಾಗಿದೆ. ಇದರಲ್ಲಿ 2 ಟಿಎಂಸಿ ಮತ್ತು ವಾಡಿಕೆಗಿಂತ ಹೆಚ್ಚು ಮಳೆ ಬಂದಾಗ ದೊರೆಯುವ ಹೆಚ್ಚುವರಿ ನೀರು ತಮಿಳುನಾಡಿಗೆ ಉಳಿಯುತ್ತದೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿತ್ತು.

Dr. Rajkumar IAS/KAS Academy

# ಅತಿ ಹಿಂದುಳಿದ ಉತ್ತರ ಅಸಮತೋಲನ ತೀವ್ರ

**ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನದ ಬಗೆಗಿನ ಪ್ರೊ. ಎಂ.ಗೋವಿಂದ ರಾವ್ ವರದಿಯಲ್ಲಿ ಉಲ್ಲೇಖ; ಹಲವು ಕ್ರಮಗಳ ಶಿಫಾರಸು**

ಸುಮಾರು 24 ವರ್ಷಗಳ ಹಿಂದೆ ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನದ ಬಗ್ಗೆ ಡಿ.ಎಂ.ನಂಜುಂಡಪ್ಪ ಅವರ ನೇತೃತ್ವದ ಸಮಿತಿಯು ಅಧ್ಯಯನ ಮಾಡಿ ವರದಿ ನೀಡಿತ್ತು. ಮತ್ತೆ ಇಂತಹದ್ದೇ ಅಧ್ಯಯನ ನಡೆಸಿರುವ ಆರ್ಥಿಕ ತಜ್ಞ ಪ್ರೊ.ಗೋವಿಂದ ರಾವ್ ಅವರ ಅಧ್ಯಕ್ಷತೆಯ ಸಮಿತಿಯು, ರಾಜ್ಯ ಸರ್ಕಾರಕ್ಕೆ ಇದೀಗ ವರದಿ ಸಲ್ಲಿಸಿದೆ. ಹಿಂದುಳಿದಿರುವಿಕೆಯು ರಾಜ್ಯದ ಉತ್ತರ ಭಾಗದಲ್ಲಿಯೇ ಹೆಚ್ಚಾಗಿದೆ ಎಂದು ವರದಿ ಹೇಳಿದೆ. ಉತ್ತರ ಕರ್ನಾಟಕದ ಒಂದು ಜಿಲ್ಲೆಯನ್ನೂ ಅಭಿವೃದ್ಧಿ ಹೊಂದಿದ ಜಿಲ್ಲೆ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದಿರುವ ವರದಿಯು, ರಾಜ್ಯದ ಇತರೆ ತಾಲ್ಲೂಕುಗಳ ಹಿಂದುಳಿದ ಸ್ಥಿತಿಗತಿ, ಅಭಿವೃದ್ಧಿಯ ಚಿತ್ರಣವನ್ನೂ ಒಳಗೊಂಡಿದೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

**2024**-25ನೇ ಸಾಲಿನಲ್ಲಿ ಕರ್ನಾಟಕದ ತಲಾ ನಿವ್ವಳ ರಾಜ್ಯ ಆಂತರಿಕ ಉತ್ಪನ್ನದ ಮೌಲ್ಯವು (ಎನ್‌ಎಸ್‌ಡಿಪಿ) ₹3.81 ಲಕ್ಷ ಇದ್ದು, ಅತಿ ಹೆಚ್ಚು ತಲಾದಾಯ ಹೊಂದಿರುವ ದೇಶದ ದೊಡ್ಡ ರಾಜ್ಯಗಳಲ್ಲಿ ಎರಡನೇ ಸ್ಥಾನ ಪಡೆದಿದೆ. ಆದರೆ, 1960ರಲ್ಲಿ ಕಡಿಮೆ ಆದಾಯದ ರಾಜ್ಯಗಳಲ್ಲಿ ಸ್ಥಾನ ಪಡೆದಿದ್ದ ಕರ್ನಾಟಕವು ದೇಶದ ಸರಾಸರಿ ತಲಾ ಆದಾಯಕ್ಕಿಂತ ಕಡಿಮೆ ತಲಾ ಆದಾಯ ಹೊಂದಿತ್ತು. ಸೇವಾ ವಲಯದಲ್ಲಿನ ಪ್ರಗತಿಯಿಂದಾಗಿ ಅಭಿವೃದ್ಧಿಯಲ್ಲಿ ದಾಪುಗಾಲಿಡುವ ಮೂಲಕ ದೇಶದ ಜಿಡಿಪಿಯಲ್ಲಿ ತನ್ನ ಪಾಲನ್ನು ರಾಜ್ಯವು ಹೆಚ್ಚಿಸಿಕೊಂಡಿದೆ. ಆದರೆ, ಆರ್ಥಿಕ ಪ್ರಗತಿಯು ಸಾಮಾಜಿಕ ಅಭಿವೃದ್ಧಿಯಾಗಿ ರೂಪಾಂತರಗೊಂಡಿಲ್ಲ ಮತ್ತು ಅಭಿವೃದ್ಧಿಯು ಕೆಲವೇ ಜಿಲ್ಲೆಗಳಲ್ಲಿ ಕೇಂದ್ರೀಕರಿಸಿದ್ದು, ಉಳಿದ ಜಿಲ್ಲೆಗಳು ಅತ್ಯಂತ ಹಿಂದುಳಿದಿವೆ; ರಾಜ್ಯದಲ್ಲಿ ಆರ್ಥಿಕ ಅಸಮತೋಲನವು ವ್ಯಾಪಕವಾಗಿದೆ ಎಂದು ಆರ್ಥಿಕ ತಜ್ಞ ಪ್ರೊ.ಗೋವಿಂದ ರಾವ್ ನೇತೃತ್ವದ ಸಮಿತಿ ವರದಿ ಹೇಳಿದೆ.

ವರದಿಯಲ್ಲಿ ರಾಜ್ಯವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಲಾಗಿದೆ; ಬೆಂಗಳೂರು, ಮೈಸೂರು, ಕಲಬುರಗಿ, ಬೆಳಗಾವಿ. ರಾಜ್ಯದ ಎಲ್ಲ ತಾಲ್ಲೂಕುಗಳನ್ನು ಹಿಂದುಳಿದ, ಅತಿ ಹಿಂದುಳಿದ, ಅತಿ ಹೆಚ್ಚು ಹಿಂದುಳಿದ ಮತ್ತು ಅಭಿವೃದ್ಧಿ ಹೊಂದಿದ ಎಂದು ನಾಲ್ಕು ಭಾಗಗಳನ್ನಾಗಿ ವರ್ಗೀಕರಿಸಲಾಗಿದೆ. ನಾಲ್ಕು ವಿಭಾಗಗಳ ಪೈಕಿ ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿಯೇ ಹಿಂದುಳಿದಿರುವಿಕೆ ಹೆಚ್ಚಾಗಿದೆ, ಬಡತನ ತೀವ್ರವಾಗಿದೆ ಎಂದು ವರದಿ ಉಲ್ಲೇಖಿಸಿದೆ. ಆದಾಗ್ಯೂ, ಇತರೆ ವಲಯಗಳಲ್ಲಿನ ಹಿಂದುಳಿದಿರುವಿಕೆ ಬಗ್ಗೆಯೂ ವರದಿ ಪ್ರಸ್ತಾಪಿಸಿದೆ.

ಮೈಸೂರು, ಚಾಮರಾಜನಗರ, ಚಿಕ್ಕಬಳ್ಳಾಪುರ, ವಿಜಯನಗರ, ಯಾದಗಿರಿ, ಕಲಬುರಗಿ, ಬೀದರ್ ಮತ್ತು ರಾಮನಗರ ವ್ಯವಸಾಯ ಸಂಪನ್ಮೂಲಗಳು ಹೇರಳವಾಗಿರುವ ಜಿಲ್ಲೆಗಳಾಗಿವೆ. ಆದರೆ, ಇವುಗಳಲ್ಲಿ ಮೂಲಸೌಕರ್ಯದ ಕೊರತೆಯಿದ್ದು, ಸರ್ಕಾರ ಯೋಜನೆಗಳನ್ನು ರೂಪಿಸಬೇಕಾದ ಅಗತ್ಯ ಇದೆ. ನೀರು ಕೊಯ್ಲು, ಸಣ್ಣ ನೀರಾವರಿ, ಕೆರೆಗಳ ಪುನರುಜ್ಜೀವನ, ಶೈತ್ಯಾಗಾರ ವ್ಯವಸ್ಥೆ, ಭೌತಿಕ ಮತ್ತು ಇಂಟರ್ನೆಟ್ ಆಧಾರಿತ ಸಂಪರ್ಕ ವ್ಯವಸ್ಥೆ, ರೈತ ಉತ್ಪಾದನಾ ಸಂಸ್ಥೆಗಳನ್ನು ಮತ್ತು ಕೃಷಿ ವಿಸ್ತರಣೆಯ ಸೇವೆಗಳನ್ನು ಉತ್ತಮಗೊಳಿಸಬೇಕು ಎಂದು ವರದಿ ಸೂಚಿಸಿದೆ.

**ಹಲವು ಕ್ರಮಗಳ ಶಿಫಾರಸು:** ಸರ್ಕಾರದ 11 ಇಲಾಖೆಗಳಿಗೆ ಹೆಚ್ಚುವರಿ ಹಣ ಒದಗಿಸುವುದು, ಮುಖ್ಯಮಂತ್ರಿಗಳ ವಿವೇಚನಾ ಅನುದಾನವನ್ನು ಹೆಚ್ಚಿಸುವುದು, ಗುಣಮಟ್ಟದ ಶಿಕ್ಷಣ, ಕೌಶಲ ತರಬೇತಿ, ಆರೋಗ್ಯ ಸೇವೆಗಳ ಮೂಲಕ ಮಾನವ ಸಂಪನ್ಮೂಲವನ್ನು ಉತ್ತಮಪಡಿಸುವುದು, ಮುಂದಿನ ಐದು ವರ್ಷಗಳಲ್ಲಿ ₹30,000 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ವೃದ್ಧಿಸುವುದು, ಯೋಜನೆಗಳ ಜಾರಿಗೆ ಪೂರ್ವತಯಾರಿ ನಡೆಸುವುದು ಸೇರಿದಂತೆ ವರದಿಯು ಹಲವು ಶಿಫಾರಸುಗಳನ್ನು ಮಾಡಿದೆ.

ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಕರಾವಳಿ ಅಭಿವೃದ್ಧಿ ಮಂಡಳಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಗಳ ಕಾರ್ಯವೈಖರಿ ತೃಪ್ತಿಕರವಾಗಿಲ್ಲ ಎಂದಿರುವ ಸಮಿತಿಯು, ಅವುಗಳನ್ನು ವಿಸರ್ಜಿಸುವಂತೆ ಶಿಫಾರಸು ಮಾಡಿದೆ. ಅನುದಾನದ ಸಮರ್ಥ ಬಳಕೆಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಪುನರ್ ಸಂಘಟಿಸುವಂತೆ ಸೂಚಿಸಿದೆ.

Publication Date 03/02/2026




ಕಲಬುರಗಿ ಹೊರವಲಯದ ಕಪನೂರಿನ ಸಿದ್ಧಾರೂಢ ಕಾಲೊನಿಯ ನೋಟ ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

## ಪ್ರಮುಖ ಅಂಶಗಳು

1. ಉತ್ತರ ಕರ್ನಾಟಕದಲ್ಲಿ ಹಿಂದುಳಿದಿರುವಿಕೆಯು ವ್ಯಾಪಕವಾಗಿದ್ದು, ಅದನ್ನು ಪರಿಹರಿಸಲು ನಿರ್ದಿಷ್ಟ ನೀತಿ/ಯೋಜನೆಗಳ ಜಾರಿ ಅಗತ್ಯವಾಗಿದೆ
2. ಉತ್ತರ ಕರ್ನಾಟಕದಲ್ಲಿ, ಹೆಚ್ಚು ಹಿಂದುಳಿದ ಜಿಲ್ಲೆಗಳು ಬೆಳಗಾವಿ ವಿಭಾಗದಲ್ಲಿದ್ದರೆ, ಅತಿ ಹೆಚ್ಚು ಹಿಂದುಳಿದಜಿಲ್ಲೆಗಳುಕಲಬುರಗಿವಿಭಾಗದಲ್ಲಿವೆ
3. ಅತಿ ಹೆಚ್ಚು ಹಿಂದುಳಿದ ಜಿಲ್ಲೆಗಳು ಎಲ್ಲ ಮಾನ-ದಂಡಗಳಲ್ಲಿಯೂ ಹಿಂದುಳಿದಿವೆ. ಹೀಗಾಗಿ ಎಲ್ಲ ವಲಯಗಳನ್ನೂ ಆಧರಿಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು
4. ಹಿಂದುಳಿದ ಜಿಲ್ಲೆಗಳಲ್ಲಿ ಮೂಲಸೌಕರ್ಯ ಮತ್ತು ಸಂಪನ್ಮೂಲದ ಕೊರತೆ ಇದೆ (ಕೃಷಿ ಸಂಪನ್ಮೂಲ ಉತ್ತಮವಾಗಿರುವ ಜಿಲ್ಲೆಗಳನ್ನು ಹೊರತುಪಡಿಸಿ). ಕೃಷಿಯೇತರ ಆರ್ಥಿಕ ಮತ್ತು ಸಾಮಾಜಿಕ ಮೂಲ ಸೌಕರ್ಯ ಉತ್ತಮಪಡಿಸುವುದು ಅಭಿವೃದ್ಧಿಯ ಸಮತೋಲನ ಸಾಧಿಸಲು ಮುಖ್ಯ ಕ್ರಮವಾಗಿದೆ
5. ಕೃಷಿ ಸಂಪನ್ಮೂಲವು ಹೇರಳವಾಗಿರುವ ಜಿಲ್ಲೆಗಳಲ್ಲಿ ಕೈಗಾರಿಕೆ ಮತ್ತು ಸೇವಾ ವಲಯದ ಚಟುವಟಿಕೆಗಳು ತೀವ್ರಗತಿಯಲ್ಲಿ ನಡೆಯುತ್ತಿರುವ ಪರಿಣಾಮ, ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಆದಾಗ್ಯೂ, ಕೆಲವು ಜಿಲ್ಲೆಗಳಲ್ಲಿ ಇಂಥ ಬದಲಾವಣೆ ಆಗದೇ ಇರುವುದರಿಂದ ಅಲ್ಲಿ ಸಂಪನ್ಮೂಲ ಮತ್ತು ಮೂಲಸೌಕರ್ಯದ ಕೊರತೆ ಇದೆ
6. ಹೆಚ್ಚು ಹಿಂದುಳಿದ ಮತ್ತು ಅತಿ ಹೆಚ್ಚು ಹಿಂದುಳಿದ ಜಿಲ್ಲೆಗಳ ಹೆಚ್ಚಿನ ಭಾಗಗಳಲ್ಲಿ ಸಾಮಾಜಿಕ ವಲಯಕ್ಕೆ ಸಂಬಂಧಿಸಿದ ಸಂಪನ್ಮೂಲಗಳು ಮತ್ತು ಮೂಲಸೌಕರ್ಯದ ಕೊರತೆ ಕಂಡುಬಂದಿದೆ

| 175 (2002 ರಲ್ಲಿ ರಾಜ್ಯದಲ್ಲಿದ್ದ ತಾಲ್ಲೂಕುಗಳು) | ಡಿ.ಎಂ.ನಂಜುಂಡಪ್ಪ ವರದಿ | | ಗೋವಿಂದ ರಾವ್ ವರದಿ | 236 (ಪ್ರಸ್ತುತ ರಾಜ್ಯದಲ್ಲಿರುವ ತಾಲ್ಲೂಕುಗಳು) |
|---|---|---|---|---|
| | 39 | ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು | 59 | |
| | 40 | ಹೆಚ್ಚು ಹಿಂದುಳಿದ ತಾಲ್ಲೂಕುಗಳು | 59 | |
| | 35 | ಹಿಂದುಳಿದ ತಾಲ್ಲೂಕುಗಳು | 59 | |
| | 61 | ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು | 59 | |





### ವರದಿ ಹೇಳುವುದೇನು?

- ಅತಿ ಹೆಚ್ಚು ಹಿಂದುಳಿದ **59** ತಾಲ್ಲೂಕುಗಳಲ್ಲಿ **43** ಉತ್ತರ ಕರ್ನಾಟಕದಲ್ಲಿವೆ. **16** ದಕ್ಷಿಣ ಕರ್ನಾಟಕದಲ್ಲಿವೆ
- ಅಭಿವೃದ್ಧಿ ಹೊಂದಿದ **59** ತಾಲ್ಲೂಕುಗಳಲ್ಲಿ ಕೇವಲ **4** ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿವೆ
- ನಾಲ್ಕು ವಿಭಾಗಗಳ ಪೈಕಿ ಕಲಬುರಗಿ ವಿಭಾಗದಲ್ಲಿ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. **51**ರ ಪೈಕಿ **39** ತಾಲ್ಲೂಕುಗಳು ಅತಿ ಹೆಚ್ಚು ಹಿಂದುಳಿದವು. **9** ಹೆಚ್ಚು ಹಿಂದುಳಿದವು
- ಹೆಚ್ಚು ಹಿಂದುಳಿದ ವರ್ಗದಲ್ಲಿ ಬರುವ ತಾಲ್ಲೂಕುಗಳು ಬೆಳಗಾವಿ ವಿಭಾಗದಲ್ಲಿ ಜಾಸ್ತಿ ಇವೆ. ಒಟ್ಟು **72** ತಾಲ್ಲೂಕುಗಳ ಪೈಕಿ **20** ಅತಿ ಹೆಚ್ಚು ಹಿಂದುಳಿದಿವೆ. **34** ಹೆಚ್ಚು ಹಿಂದುಳಿದವು. **14** ತಾಲ್ಲೂಕುಗಳು ಹಿಂದುಳಿದ ವರ್ಗದಲ್ಲಿದ್ದು, ನಾಲ್ಕು ತಾಲ್ಲೂಕುಗಳು ಅಭಿವೃದ್ಧಿ ಹೊಂದಿವೆ
- ದಕ್ಷಿಣ ಕರ್ನಾಟಕದಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳ ಸಂಖ್ಯೆ ಹೆಚ್ಚಿದೆ. ಅಭಿವೃದ್ಧಿ ಹೊಂದಿದ **59** ತಾಲ್ಲೂಕುಗಳ ಪೈಕಿ **55** ತಾಲ್ಲೂಕುಗಳು ಇಲ್ಲಿವೆ. ಈ ಪೈಕಿ ಮೈಸೂರು ವಿಭಾಗದಲ್ಲಿ **35** ತಾಲ್ಲೂಕುಗಳಿದ್ದರೆ, ಬೆಂಗಳೂರು ವಿಭಾಗದಲ್ಲಿ **20** ಇವೆ
- ನಾಲ್ಕು ವಿಭಾಗಗಳ ಪೈಕಿ ಮೈಸೂರು ವಿಭಾಗವು ಅಭಿವೃದ್ಧಿಯಲ್ಲಿ ಉತ್ತಮ ಸಾಧನೆ ತೋರಿದೆ. ಅಲ್ಲಿ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳಿಲ್ಲ. ಹೆಚ್ಚು ಹಿಂದುಳಿದ **4**, ಹಿಂದುಳಿದ ತಾಲ್ಲೂಕುಗಳು **20** ಇವೆ
- ಬೆಂಗಳೂರು ವಿಭಾಗದಲ್ಲಿ **12** ಅತಿ ಹೆಚ್ಚು ಹಿಂದುಳಿದ, ಎಂಟು ಹೆಚ್ಚು ಹಿಂದುಳಿದ, **23** ಹಿಂದುಳಿದ ತಾಲ್ಲೂಕುಗಳಿವೆ

## ನಂಜುಂಡಪ್ಪ ವರದಿ ಈಗ ಅನ್ವಯವಾದರೆ...

ಡಿ.ಎಂ.ನಂಜುಂಡಪ್ಪ ಸಮಿತಿಯು ಪ್ರಾದೇಶಿಕ ಅಸಮತೋಲನದ ಅಧ್ಯಯನ ನಡೆಸುವಾಗ ರಾಜ್ಯದಲ್ಲಿ 175 ತಾಲ್ಲೂಕುಗಳಿದ್ದವು. ಕೃಷಿ, ಕೈಗಾರಿಕೆ, ವ್ಯಾಪಾರ ಮತ್ತು ಹಣಕಾಸು, ಆರ್ಥಿಕ ಮೂಲಸೌಕರ್ಯ, ಸಾಮಾಜಿಕ ಮೂಲಸೌಕರ್ಯ ಮತ್ತು ಭೌಗೋಳಿಕ ಗುಣಲಕ್ಷಣಗಳು ಈ ಐದು ಮಾನದಂಡಗಳ ಆಧಾರದಲ್ಲಿ ಸಮಿತಿಯು ಸಮಗ್ರ ಸಂಯೋಜಿತ ಅಭಿವೃದ್ಧಿ ಸೂಚ್ಯಂಕ (ಸಿಸಿಡಿಐ-ಕಾಂಪ್ರಿಹೆನ್ಸಿವ್ ಕಾಂಪಸಿಟ್ ಡೆವೆಲಪ್‌ಮೆಂಟ್ ಇಂಡೆಕ್ಸ್) ಲೆಕ್ಕ ಹಾಕಿ, ಸೂಚ್ಯಂಕಗಳ ಅಂಕಗಳ ಆಧಾರದಲ್ಲಿ ತಾಲ್ಲೂಕುಗಳ ಹಿಂದುಳಿದಿರುವಿಕೆಯನ್ನು ಲೆಕ್ಕಹಾಕಿತ್ತು.

ಆ ಲೆಕ್ಕಾಚಾರದಲ್ಲಿ ಕೆಲವು ಕೊರತೆಗಳಿವೆ ಎಂದು ಗೋವಿಂದರಾವ್ ಸಮಿತಿ ಹೇಳಿದೆ.

ನಂಜುಂಡಪ್ಪ ಸಮಿತಿ ಅನುಸರಿಸಿದ ವರ್ಗೀಕರಣ ವಿಧಾನ ಮತ್ತು ಮರುಲೆಕ್ಕ ಹಾಕಿದ ಸಿಸಿಡಿಐ ಅನ್ನು ಗೋವಿಂದರಾವ್ ಸಮಿತಿಯು ಈಗಿನ 236 ತಾಲ್ಲೂಕುಗಳಿಗೆ ಅನ್ವಯಿಸಿದೆ. ಅದರ ಪ್ರಕಾರ, 93 ತಾಲ್ಲೂಕುಗಳು ಅತಿ ಹೆಚ್ಚು ಹಿಂದುಳಿದಿದ್ದರೆ, 36 ಹೆಚ್ಚು ಹಿಂದುಳಿದಿವೆ. 43 ಮತ್ತು 64 ತಾಲ್ಲೂಕುಗಳು ಕ್ರಮವಾಗಿ ಹಿಂದುಳಿದ ಮತ್ತು ಅಭಿವೃದ್ಧಿ ಹೊಂದಿದ ವರ್ಗದಲ್ಲಿ ಬರುತ್ತವೆ.

**ಅದರ ಪ್ರಕಾರ:**

- 2001-02ಕ್ಕೆ ಹೋಲಿಸಿದರೆ ಶೇ 65ರಷ್ಟಿದ್ದ ಹಿಂದುಳಿದ ತಾಲ್ಲೂಕುಗಳ ಪ್ರಮಾಣ 2022-23ಕ್ಕೆ ಶೇ 72.8ಕ್ಕೆ ಹೆಚ್ಚಾಗಿದೆ
- ಶೇ 60ರಷ್ಟು ಹಿಂದುಳಿದ ತಾಲ್ಲೂಕುಗಳು ಉತ್ತರ ಕರ್ನಾಟದಲ್ಲಿವೆ
- ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಕಲಬುರಗಿ ವಿಭಾಗದಲ್ಲಿವೆ (ಶೇ 42). ಬೆಳಗಾವಿಯಲ್ಲಿ ಶೇ 34ರಷ್ಟು ತಾಲ್ಲೂಕುಗಳಿವೆ
- ಹೆಚ್ಚು ಹಿಂದುಳಿದ ತಾಲ್ಲೂಕುಗಳ ಪ್ರಮಾಣ ಬೆಳಗಾವಿ ವಿಭಾಗದಲ್ಲಿದೆ (ಶೇ 33.7). ನಂತರ ಕಲಬುರಗಿ ವಿಭಾಗದಲ್ಲಿದೆ (ಶೇ 26.1)
- ಹೊಸದಾಗಿ ರಚನೆಯಾದ 61 ತಾಲ್ಲೂಕುಗಳಲ್ಲಿ 51 ತಾಲ್ಲೂಕು ಅತಿ ಹೆಚ್ಚು ಹಿಂದುಳಿದ ವರ್ಗದಲ್ಲಿ ಬರುತ್ತವೆ. 2 ಹೆಚ್ಚು ಹಿಂದುಳಿದ, 5 ಹಿಂದುಳಿದ ಮತ್ತು ಮೂರು ಅಭಿವೃದ್ಧಿ ಹೊಂದಿದ ವರ್ಗಗಳಲ್ಲಿ ಬರುತ್ತವೆ

### ಮಾಪನಕ್ಕೆ ಭಿನ್ನ ವಿಧಾನ

ನಂಜುಂಡಪ್ಪ ಸಮಿತಿ ಅನುಸರಿಸಿದ್ದಕ್ಕಿಂತ ಕೊಂಚ ಭಿನ್ನವಾದ ವಿಧಾನ ಮತ್ತು ಮಾನದಂಡಗಳನ್ನು ಗೋವಿಂದ ರಾವ್ ಸಮಿತಿ ಅಳವಡಿಸಿಕೊಂಡು ತಾಲ್ಲೂಕುಗಳ ಅಭಿವೃದ್ಧಿ ಮತ್ತು ಹಿಂದುಳಿದಿರುವಿಕೆಯನ್ನು ಅಳೆದಿದೆ.

ಸಂಪನ್ಮೂಲ/ಮೂಲಸೌಕರ್ಯ ಮಾತ್ರವಲ್ಲದೆ ತಲಾ ಆದಾಯ, ಆರೋಗ್ಯ (ಐದು ವರ್ಷದ ಕೆಳಗಿನ ಮಕ್ಕಳ ಮರಣ ಪ್ರಮಾಣ ಮತ್ತು 15-49 ವಯೋಮಾನದ ಮಹಿಳೆಯರಲ್ಲಿ ರಕ್ತಹೀನತೆ ಪ್ರಮಾಣ) ಮತ್ತು ಶಿಕ್ಷಣಗಳನ್ನೂ (ಸಾಕ್ಷರತೆ, ಲಿಂಗವಾರು ವ್ಯತ್ಯಾಸ) ಮಾನದಂಡವಾಗಿ ಪರಿಗಣಿಸಿದೆ.

ಜೀವನ ಮಟ್ಟ, ಆರೋಗ್ಯಕ್ಷೇತ್ರ ಮತ್ತು ಶಿಕ್ಷಣ ಈ ಮೂರು ವಿಷಯಗಳಿಗೂ ಪ್ರತ್ಯೇಕ ಫಲಿತಾಂಶ ಅಂಕಗಳನ್ನು (ಔಟ್‌ಕಮ್ ಸ್ಕೋರ್) ಲೆಕ್ಕಹಾಕಿದೆ. ನಂತರ ಮೂರು ಅಂಕಗಳನ್ನೂ ಪರಿಗಣಿಸಿ ಸಂಯೋಜಿತ ಫಲಿತಾಂಶ ಅಂಕಗಳನ್ನು (ಕಾಂಪಸಿಟ್ ಔಟ್‌ಕಮ್ ಸ್ಕೋರ್) ಲೆಕ್ಕಹಾಕಿದೆ. ಹಿಂದುಳಿದಿರುವಿಕೆಯ ತೀವ್ರತೆಯನ್ನು ಗುರುತಿಸಲು ಸಮಿತಿಯು 59 ತಾಲ್ಲೂಕುಗಳನ್ನೊಳಗೊಂಡ ನಾಲ್ಕು ಸಮನಾದ ವಿಭಾಗಗಳನ್ನು ಮಾಡಿದೆ.

ಅತ್ಯಂತ ಕಡಿಮೆ ಸಂಯೋಜಿತ ಸೂಚ್ಯಂಕ ಪಡೆದ 59 ತಾಲ್ಲೂಕುಗಳನ್ನು ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು ಎಂದು ಪರಿಗಣಿಸಿದೆ. ಅತಿ ಹೆಚ್ಚು ಸೂಚ್ಯಂಕ ಹೊಂದಿದ 59 ತಾಲ್ಲೂಕುಗಳನ್ನು ಅಭಿವೃದ್ಧಿಹೊಂದಿದ ತಾಲ್ಲೂಕುಗಳು ಎಂದು ಗುರುತಿಸಿದೆ. ಅದೇ ರೀತಿ ಇದೇ ಸೂಚ್ಯಂಕದ ಆಧಾರದಲ್ಲಿ ತಲಾ 59 ಹೆಚ್ಚು ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳನ್ನಾಗಿ ಸಮಿತಿ ಪಟ್ಟಿ ಮಾಡಿದೆ.

ಇದೇ ರೀತಿಯಲ್ಲಿ ಸಂಪನ್ಮೂಲ/ಮೂಲಸೌಕರ್ಯ ಮಾನದಂಡದ ಆಧಾರದಲ್ಲೂ ಅಂಕಗಳನ್ನು ಲೆಕ್ಕಹಾಕಲಾಗಿದೆ.

ಈ ಮಾನದಂಡದ ಅಡಿಯಲ್ಲಿ ಮೊದಲನೇ ಶ್ರೇಣಿ, ಎರಡನೇ ಶ್ರೇಣಿ ಮತ್ತು ಮೂರನೇ ಶ್ರೇಣಿಯ ಮೂಲಸೌಕರ್ಯಗಳು, ಆರ್ಥಿಕ ಮತ್ತು ಸಾಮಾಜಿಕ ಮೂಲಸೌಕರ್ಯಗಳನ್ನೂ ಪರಿಗಣಿಸಿ ಅಂಕಗಳನ್ನು ಲೆಕ್ಕಹಾಕಲಾಗಿದೆ.

## ❖ ಗುಡಿಬಂಡೆ ಗುಡ್ಡಗಳಲ್ಲಿ ಚಿನ್ನದ ನಿಕ್ಷೇಪ?

**ಸಂದರ್ಭ: ಜಿಲ್ಲೆಯ ಗುಡಿಬಂಡೆ, ಬಾಗೇಪಲ್ಲಿ ತಾಲ್ಲೂಕುಗಳ ಬೆಟ್ಟ ಗುಡ್ಡಗಳಲ್ಲಿ ಚಿನ್ನದ ನಿಕ್ಷೇಪಗಳಿಗಾಗಿ ಮೂರು ದಿನಗಳಿಂದ ವೈಮಾನಿಕ ಸಮೀಕ್ಷೆ ನಡೆಸಲಾಗುತ್ತಿದೆ.**

- ಗುಡಿಬಂಡೆ ತಾಲ್ಲೂಕು ಬೀಚಗಾನಹಳ್ಳಿಯನ್ನು ಕೇಂದ್ರವಾಗಿಸಿಕೊಂಡು ಕೇಂದ್ರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ (ಜಿಎಸ್‌ಐ) ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹೆಲಿಕಾಪ್ಟರ್ ಮೂಲಕ ಸಮೀಕ್ಷೆ ನಡೆಸುತ್ತಿದ್ದಾರೆ.
- ಬಾಗೇಪಲ್ಲಿಯಿಂದ 60 ಕಿ.ಮೀ ದೂರದಲ್ಲಿ, ನೆರೆಯ ಆಂಧ್ರದ ಕದರಿ ಬಳಿ ಚಿನ್ನದ ನಿಕ್ಷೇಪಗಳು ಪತ್ತೆಯಾಗಿವೆ. ಹಾಗಾಗಿ ಇಲ್ಲಿಯೂ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.
- ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಜಿಎಸ್‌ಐ ತಂಡ ಸಮೀಕ್ಷೆ ಪೂರ್ಣಗೊಳಿಸಿ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಪ್ರವೇಶಿಸಿದೆ. ಮೇ 31ರವರೆಗೆ ಜಿಲ್ಲೆಯಲ್ಲಿ ಈ ವೈಮಾನಿಕ ಸಮೀಕ್ಷೆ ನಡೆಯಲಿದೆ. ರೇಡಾರ್ ಸ್ಕ್ಯಾನರ್ ಬಳಸಿ ಸಮೀಕ್ಷೆ ನಡೆಯುತ್ತಿದೆ.
- ಗುಡಿಬಂಡೆ ತಾಲ್ಲೂಕಿನ ತಿರುಮಣಿ ಬಳಿ ಆದರ್ಶ ಶಾಲೆ ಆವರಣದಲ್ಲಿ ಹೆಲಿಪ್ಯಾಡ್ ನಿರ್ಮಿಸಲಾಗಿದೆ. ನಿತ್ಯ ಆರು ತಾಸು ವೈಮಾನಿನ ಸಮೀಕ್ಷೆ ನಡೆಸಲಾಗುತ್ತಿದೆ. ಇಬ್ಬರು ಪೈಲೆಟ್ ಸೇರಿದಂತೆ 15 ಸಿಬ್ಬಂದಿ ತಂಡ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದೆ.

- 2019-20ರಲ್ಲಿ ಕೇಂದ್ರ ಗಣಿ ಮತ್ತು ಭೂ ವಿಜ್ಞಾನ ಸಂಸ್ಥೆ ಇಲ್ಲಿ ಚಿನ್ನ, ಅಲ್ಯುಮಿನಿಯಂ, ತಾಮ್ರ ಸೇರಿದಂತೆ ಕೆಲವು ಖನಿಜ ನಿಕ್ಷೇಪಗಳ ಸರ್ವೆ ನಡೆಸಿತ್ತು. ಅದರ ಮುಂದುವರಿದ ಭಾಗವಾಗಿ ಈಗ ಆಳವಾದ ಮತ್ತು ವೈಜ್ಞಾನಿಕ ರೀತಿಯಲ್ಲಿ ಸರ್ವೆ ನಡೆಯುತ್ತಿದೆ' ಎಂದು ಜಿಲ್ಲಾಧಿಕಾರಿ ಜಿ.ಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.


## ❖ ಸ್ಕ್ವಾಷ್: ಅನಾಹತ್ ಸಿಂಗ್ ಚಾಂಪಿಯನ್

- ಭಾರತದ ಉದಯೋನ್ಮುಖ ತಾರೆ ಅನಾಹತ್ ಸಿಂಗ್ ಅವರು ವಾಷಿಂಗ್ಟನ್‌ನಲ್ಲಿ ಮುಕ್ತಾಯಗೊಂಡ ಸ್ಕ್ವಾಷ್ ಆನ್ ಫೈರ್ ಓಪನ್ ಟೂರ್ನಿಯ ಕಿರೀಟ ತಮ್ಮದಾಗಿಸಿಕೊಂಡರು.



ಪ್ರಶಸ್ತಿಯೊಂದಿಗೆ ಅನಾಹತ್ ಸಿಂಗ್

IAS/KAS Academy



## ❖ ಕೃಷಿ, ಹೈನುಗಾರಿಕೆ ರಕ್ಷಣೆಗೆ ಬದ್ಧ'



### 'ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ಕುರಿತ ಮಾಹಿತಿ ಇನ್ನಷ್ಟೇ ಬಹಿರಂಗ ಆಗಬೇಕಿದೆ'

ನವದೆಹಲಿ (ಪಿಟಿಐ): ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದ ಅಂತಿಮಗೊಳ್ಳುತ್ತಿದ್ದು, ಕೃಷಿ ಮತ್ತು ಹೈನುಗಾರಿಕೆ ವಲಯಗಳ ಹಿತಾಸಕ್ತಿಯನ್ನು ಒಪ್ಪಂದದ ಪರಿಣಾಮದಿಂದ ರಕ್ಷಿಸಲಾಗಿದೆ ಎಂದು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಸ್ಪಷ್ಟಪಡಿಸಿದರು.

ಪೀಯೂಷ್ ಗೋಯಲ್

ಭಾರತದಿಂದ ಆಮದಾಗುವ ಸರಕುಗಳ ಮೇಲಿನ ಸುಂಕ ಶೇಕಡ 50ರಷ್ಟು ಇದ್ದಿದ್ದನ್ನು ಶೇ 18ಕ್ಕೆ ಇಳಿಕೆ ಮಾಡಲಾಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಘೋಷಿಸಿದ ನಂತರದಲ್ಲಿ ಗೋಯಲ್ ಪತ್ರಿಕಾಗೋಷ್ಠಿ ನಡೆಸಿದರು. ಅಮೆರಿಕ ಮತ್ತು ಭಾರತ ಜಂಟಿ ಹೇಳಿಕೆಯೊಂದನ್ನು ಶೀಘ್ರವೇ ಹೊರಡಿಸಲಿವೆ, ಅದು ಒಪ್ಪಂದದ ವಿವರಗಳನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದರು.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಚೌಕಟ್ಟೊಂದನ್ನು ಎರಡೂ ದೇಶಗಳು ಅಂತಿಮಗೊಳಿಸಿವೆ.

ವ್ಯಾಪಾರ ಒಪ್ಪಂದವು ದೇಶದ ಜನರಿಗೆ ಭಾರಿ ಅವಕಾಶಗಳನ್ನು ಒದಗಿಸಲಿದೆ ಎಂದು ಗೋಯಲ್ ಭರವಸೆ ನೀಡಿದರು. 'ಒಪ್ಪಂದವು ಸೂಕ್ಷ್ಮ ವಲಯಗಳ ಹಿತವನ್ನು ರಕ್ಷಿಸಲಿದೆ, ಕೃಷಿ ಹಾಗೂ ಹೈನುಗಾರಿಕೆ ವಲಯಗಳ ಹಿತವನ್ನು ಪೂರ್ಣವಾಗಿ ಕಾಯಲಿದೆ' ಎಂದು ಹೇಳಿದರು.

ಭಾರತದಲ್ಲಿ ಕಾರ್ಮಿಕರ ಭಾಗೀದಾರಿಕೆಯು ಹೆಚ್ಚಿನ ಪ್ರಮಾಣದಲ್ಲಿ ಅಗತ್ಯವಿರುವ ಜವಳಿ, ಪ್ಲಾಸ್ಟಿಕ್, ಉಡುಪು, ಮನೆಗಳ ಅಲಂಕಾರದಲ್ಲಿ ಬಳಸುವ ಉತ್ಪನ್ನಗಳು, ಚರ್ಮೋದ್ಯಮ ಮತ್ತು ಪಾದರಕ್ಷೆ, ಹವಳ ಮತ್ತು ಆಭರಣ, ಸಾವಯವ ರಾಸಾಯನಿಕಗಳು, ರಬ್ಬರ್ ಉತ್ಪನ್ನಗಳು, ಯಂತ್ರೋಪಕರಣಗಳು, ವಿಮಾನ ತಯಾರಿಕೆ ವಲಯಗಳಿಗೆ ಒಪ್ಪಂದವು ದೊಡ್ಡ ಅವಕಾಶಗಳ ಬಾಗಿಲು ತೆರೆಯಲಿದೆ ಎಂದರು.

ಈ ವಲಯದ ಬಹುತೇಕ ಉತ್ಪನ್ನಗಳಿಗೆ ಅಮೆರಿಕ ಈಗ ವಿಧಿಸುತ್ತಿರುವ ಆಮದು ಸುಂಕ ಶೇ 50ರಷ್ಟು ಇದ್ದು, ಅದು ಶೇ 18ಕ್ಕೆ ಇಳಿಕೆ ಆಗಲಿದೆ.

ಒಪ್ಪಂದವು ಭಾರತದ ಬೆಳವಣಿಗೆಗೆ ಶಕ್ತಿ ನೀಡಲು ಅಗತ್ಯವಿರುವ ವಿಶ್ವದರ್ಜೆಯ ತಂತ್ರಜ್ಞಾನವನ್ನು ಪಡೆಯಲು ಕೂಡ ಅವಕಾಶ ಮಾಡಿಕೊಡಲಿದೆ ಎಂದು ಹೇಳಿದರು. ಭಾರತವು ಅಮೆರಿಕದ ಜೊತೆ ಬಹಳ ಉತ್ತಮವಾದ ಒಪ್ಪಂದ ಮಾಡಿಕೊಳ್ಳುತ್ತಿದೆ, ಇದು ಭಾರತದ ಜೊತೆ ಸ್ಪರ್ಧೆಯಲ್ಲಿರುವ ಇತರ ದೇಶಗಳು ಮಾಡಿಕೊಂಡಿರುವ ಒಪ್ಪಂದಕ್ಕಿಂತ ಉತ್ತಮವಾಗಿದೆ ಎಂದರು.

ಅಮೆರಿಕದ ಜೊತೆಗಿನ ಒಪ್ಪಂದದ ಕುರಿತಾಗಿ ಹೆಚ್ಚಿನ ಮಾಹಿತಿ ನೀಡದ ಗೋಯಲ್ ಅವರು, 'ಒಪ್ಪಂದವು ಅಂತಿಮ ಹಂತದಲ್ಲಿದೆ' ಎಂದು ತಿಳಿಸಿದರು.

**ಭಾರತ ಹಾಗೂ ಅಮೆರಿಕ ನಡುವಿನ ವ್ಯಾಪಾರ ಒಪ್ಪಂದವು ಬಹುದೊಡ್ಡ ನಿರ್ಧಾರವಾಗಿದೆ. ದೇಶದ ಪ್ರತಿಯೊಬ್ಬರಿಗೂ ಅನುಕೂಲವಾಗಲಿದೆ**
**ನರೇಂದ್ರ ಮೋದಿ,** ಪ್ರಧಾನಿ

**ಒಪ್ಪಂದದ ಬಗ್ಗೆ ಟ್ರಂಪ್ ಮಾಹಿತಿ ನೀಡಿದ್ದಾರೆ. ಅಮೆರಿಕ ಅಧ್ಯಕ್ಷರ ಓಲೈಕೆಗಾಗಿ ಪ್ರಧಾನಿ ಮೋದಿ ಅವರು ಸಂಪೂರ್ಣವಾಗಿ ಶರಣಾಗಿದ್ದಾರೆ**
**ಜೈರಾಮ್ ರಮೇಶ್,** ಕಾಂಗ್ರೆಸ್ ನಾಯಕ

### ಅಮೆರಿಕಕ್ಕೆ ಯಾವ ಬಗೆಯ ವಿನಾಯಿತಿ?

ಬೇರೆ ದೇಶಗಳೊಂದಿಗೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದಗಳಲ್ಲಿ ಯಾವ ಬಗೆಯಲ್ಲಿ ವಿನಾಯಿತಿಗಳನ್ನು ನೀಡಲಾಗಿದೆಯೋ ಅದೇ ಬಗೆಯಲ್ಲಿ ಅಮೆರಿಕದ ಉತ್ಪನ್ನಗಳಿಗೂ ವಿವಿಧ ವಲಯಗಳಲ್ಲಿ ಸುಂಕ ವಿನಾಯಿತಿ ನೀಡಲು ಭಾರತ ಒಪ್ಪಿದೆ ಎಂದು ಗೊತ್ತಾಗಿದೆ. ಭಾರತವು ತನ್ನ ಹೈನುಗಾರಿಕೆ, ಅಕ್ಕಿ, ಗೋಧಿ, ಮಾಂಸ, ಕೋಳಿ ಮಾಂಸ ಹಾಗೂ ಮೊಟ್ಟೆ, ಧಾನ್ಯಗಳು, ಕುಲಾಂತರಿ ಆಹಾರ ಉತ್ಪನ್ನಗಳು, ಜೋಳ ವಲಯವನ್ನು ವ್ಯಾಪಾರ ಒಪ್ಪಂದದ ವ್ಯಾಪ್ತಿಯಿಂದ ಯಾವಾಗಲೂ ಹೊರಕ್ಕೆ ಇರಿಸಿದೆ ಎನ್ನಲಾಗಿದೆ.

### ಅಮೆರಿಕದಿಂದ ಖರೀದಿ

ಅಮೆರಿಕದಿಂದ 500 ಬಿಲಿಯನ್ ಡಾಲರ್ (₹45 ಲಕ್ಷ ಕೋಟಿ) ಮೊತ್ತದ ಇಂಧನ, ತಂತ್ರಜ್ಞಾನ, ಕೃಷಿ ಉತ್ಪನ್ನಗಳು, ಕಲ್ಲಿದ್ದಲು ಖರೀದಿಸಲು ಭಾರತ ಒಪ್ಪಿದೆ ಎಂದು ಡೊನಾಲ್ಡ್ ಟ್ರಂಪ್ ಅವರು ಹೇಳಿರುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮೂಲವೊಂದು, 'ಇಷ್ಟು ದೊಡ್ಡ ಮೊತ್ತದ ಖರೀದಿಯು ಐದು ವರ್ಷಗಳಲ್ಲಿ ನಡೆಯಲಿದೆ, ವಿಮಾನ ಮತ್ತು ಅದರ ಬಿಡಿಭಾಗಗಳ ಖರೀದಿಯೂ ಇದರಲ್ಲಿ ಸೇರಿದೆ' ಎಂದು ತಿಳಿಸಿದೆ.

'ದತ್ತಾಂಶ ಕೇಂದ್ರಗಳಿಗಾಗಿಯೇ ನಮಗೆ ಪ್ರತಿವರ್ಷ 20 ಬಿಲಿಯನ್ ಡಾಲರ್‌ನಷ್ಟು (₹1.80 ಲಕ್ಷ ಕೋಟಿ) ಮೌಲ್ಯದ ಸರಕುಗಳು ಬೇಕು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

### 'ಭಾರತಕ್ಕೆ ಕೃಷಿ ಉತ್ಪನ್ನ ರಫ್ತು ಹೆಚ್ಚಳ'

ನ್ಯೂಯಾರ್ಕ್ (ಪಿಟಿಐ): ದ್ವಿಪಕ್ಷೀಯ ವ್ಯಾಪಾರ ಒಪ್ಪಂದದಿಂದ ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಬಹುದು. ಈ ಒಪ್ಪಂದವು ರಷ್ಯಾದ ಆಕ್ರಮಣವನ್ನು ಎದುರಿಸಲು ಸಹ ನೆರವಾಗುತ್ತದೆ ಎಂದು ಅಮೆರಿಕದ ಹಿರಿಯ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

### ಭಾರತದಿಂದ ಯಾವುದೇ ಸಂದೇಶವಿಲ್ಲ: ರಷ್ಯಾ

ಮಾಸ್ಕೊ (ಪಿಟಿಐ): ಕಚ್ಚಾ ತೈಲ ಖರೀದಿ ಸ್ಥಗಿತಗೊಳಿಸುವ ಕುರಿತು ಭಾರತದಿಂದ ಯಾವುದೇ ರೀತಿಯ ಸಂದೇಶ ಸ್ವೀಕರಿಸಿಲ್ಲ ಎಂದು ರಷ್ಯಾ ಸ್ಪಷ್ಟಪಡಿಸಿದೆ.

ರಷ್ಯಾ ಸರ್ಕಾರದ ವಕ್ತಾರ ದಿಮಿಟ್ರಿ ಪೆಸ್ಕೋವ್ ಸ್ಪಷ್ಟನೆ ನೀಡಿದ್ದು, 'ಈ ವಿಚಾರವಾಗಿ ಭಾರತದಿಂದ ಇದುವರೆಗೂ ಅಧಿಕೃತ ಹೇಳಿಕೆ ಹೊರಬಿದ್ದಿರುವ ಕುರಿತು ನಮಗೆ ತಿಳಿದಿಲ್ಲ' ಎಂದು ವಿವರಿಸಿದ್ದಾರೆ.

'ಸಾಧ್ಯವಿರುವ ಎಲ್ಲ ರೀತಿಯಲ್ಲೂ ಭಾರತದ ಜೊತೆಗಿನ ಸಂಬಂಧವನ್ನು ಮುಂದುವರಿಸಲು ರಷ್ಯಾ ನಿರ್ಧರಿಸಿದೆ' ಎಂದು ಪೆಸ್ಕೋವ್ ಹೇಳಿದ್ದಾರೆ ಎಂದು ರಷ್ಯಾದ ಮಾಧ್ಯಮಗಳು ವರದಿ ಮಾಡಿವೆ.

'ಕಚ್ಚಾ ತೈಲ ಖರೀದಿ ಒಪ್ಪಂದಗಳನ್ನು ರದ್ದುಗೊಳಿಸುವ ಕುರಿತು ಭಾರತದ ತೈಲ ಸಂಸ್ಕರಣಾ ಕೇಂದ್ರಗಳಿಂದ ಯಾವುದೇ ಮಾಹಿತಿ ಬಂದಿಲ್ಲ' ಎಂದು ರಷ್ಯಾದ ಇಂಧನ ಸಚಿವಾಲಯವು ತಿಳಿಸಿರುವುದಾಗಿ ಮೂಲಗಳು ತಿಳಿಸಿವೆ.

ಭಾರತವು ತನ್ನ ಬೇಡಿಕೆಯ ಶೇಕಡ 88ರಷ್ಟು ಕಚ್ಚಾತೈಲವನ್ನು ವಿದೇಶದಿಂದಲೇ ಖರೀದಿಸುತ್ತಿದೆ. 2022ರಲ್ಲಿ ಉಕ್ರೇನ್ ಮೇಲೆ ಯುದ್ಧ ಆರಂಭಗೊಂಡ ನಂತರ ರಷ್ಯಾದಿಂದ ಕಚ್ಚಾತೈಲ ಖರೀದಿಸುತ್ತಿದ್ದ ವಿಶ್ವದ ಮೂರನೇ ಅತೀ ದೊಡ್ಡ ರಾಷ್ಟ್ರವಾಗಿ ಭಾರತ ಹೊರಹೊಮ್ಮಿತ್ತು.

ಇನ್ನಷ್ಟು ಸುದ್ದಿಗಳು 10

- ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿರುವ ಕಾರಣಕ್ಕೆ ಭಾರತದ ಸರಕುಗಳ ಮೇಲೆ ವಿಧಿಸಿರುವ ಶೇ 25ರಷ್ಟು ಹೆಚ್ಚುವರಿ ಸುಂಕವನ್ನು ಕೈಬಿಡಲು ಅಮೆರಿಕ ಒಪ್ಪಿದೆ ಎಂದು ಮೂಲಗಳು ಹೇಳಿವೆ. ಅಲ್ಲದೆ, ಪ್ರತಿಸುಂಕದ ರೂಪದಲ್ಲಿ ವಿಧಿಸಿದ್ದ ಶೇ 25ರಷ್ಟು ಸುಂಕವನ್ನು ಶೇ 18ಕ್ಕೆ ತಗ್ಗಿಸಲು ಒಪ್ಪಿದೆ ಎಂದು ಗೊತ್ತಾಗಿದೆ.
- 'ಹೀಗಾಗಿ ಭಾರತದ ಸರಕುಗಳ ಮೇಲಿನ ಸುಂಕದ ಒಟ್ಟು ಪ್ರಮಾಣ ಶೇ 18ರಷ್ಟಾಗಲಿದೆ' ಎಂದು ಮೂಲವೊಂದು ಮಾಹಿತಿ ನೀಡಿದೆ.
- ಚರ್ಮದ ಉತ್ಪನ್ನಗಳು ಮತ್ತು ಪಾದರಕ್ಷೆ, ಸಿಗಡಿ ಸೇರಿದಂತೆ ವಿವಿಧ ಸಮುದ್ರ ಉತ್ಪನ್ನಗಳು, ರಾಸಾಯನಿಕ, ಪ್ಲಾಸ್ಟಿಕ್, ರಬ್ಬರ್, ಗೃಹ ಅಲಂಕಾರ ಉತ್ಪನ್ನಗಳು ಹಾಗೂ ನೆಲಹಾಸುಗಳು, ಯಂತ್ರೋಪಕರಣಗಳು, ಆಯ್ದ ಕೃಷಿ ಉತ್ಪನ್ನಗಳು ಅಮೆರಿಕದ ಮಾರುಕಟ್ಟೆಯನ್ನು ಶೇ 18ರಷ್ಟು ಸುಂಕದೊಂದಿಗೆ ಪ್ರವೇಶಿಸಬಹುದು.
- 'ಈ ಉತ್ಪನ್ನಗಳು ನಮ್ಮ ಪ್ರತಿಸ್ಪರ್ಧಿ ದೇಶಗಳ ಉತ್ಪನ್ನಗಳಿಗಿಂತ ಕಡಿಮೆ ಸುಂಕದೊಂದಿಗೆ ಅಮೆರಿಕದ ಮಾರುಕಟ್ಟೆ ಪ್ರವೇಶಿಸುತ್ತವೆ. ಇದರಿಂದಾಗಿ ತಿರುಪೂರು (ಉಡುಪು), ಸೂರತ್‌ನಂತಹ (ಹವಳ ಮತ್ತು ಆಭರಣ) ಕ್ಲಸ್ಟರ್‌ಗಳು ಮತ್ತೆ ಲಾಭ ಮಾಡಿಕೊಳ್ಳಬಹುದು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಸುಂಕ ಕಡಿತ ಸ್ವಾಗತ: ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಸುಂಕ ವನ್ನು ಶೇ 18ಕ್ಕೆ

ಇಳಿಸುವ ಅಮೆರಿಕದ ನಿರ್ಧಾರವನ್ನು ಸಾಗರ ಆಹಾರೋತ್ಪನ್ನ ಮತ್ತು ಅಕ್ಕಿ ರಫ್ತುದಾರರು ಸ್ವಾಗತಿಸಿದ್ದಾರೆ.

- 'ಈಗ ಸುಂಕ ಇಳಿಕೆಯಿಂದಾಗಿ ಸಾಗರ ಆಹಾರೋತ್ಪನ್ನಗಳ ರಫ್ತು ಚೇತರಿಸಿಕೊಳ್ಳುವ ನಿರೀಕ್ಷೆಯಿದೆ' ಎಂದು ಭಾರತೀಯ ಸಾಗರ ಆಹಾರೋತ್ಪನ್ನ ರಫ್ತುದಾರರ ಸಂಘ (ಎಸ್‌ಇಎಐ) ತಿಳಿಸಿದೆ.

## ❖ ವಿದೇಶಿಗರ ಅಕ್ರಮ ವಾಸ: ಸರ್ಕಾರದ ಲೋಪ

**ಸಂದರ್ಭ: 'ಮಾನ್ಯತೆ ಹೊಂದಿದ ವೀಸಾ, ಪಾಸ್‌ಪೋರ್ಟ್ ಇಲ್ಲದೆ ಅಕ್ರಮವಾಗಿ ನೆಲಸಿರುವ ವಿದೇಶಿಯರಿಂದ ದೇಶದ ಭದ್ರತೆಗೆ ಅಪಾಯ ಕಾದಿದೆ' ಎಂದು ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.**

- 'ನಮ್ಮನ್ನು ಅಕ್ರಮವಾಗಿ ಬಂಧನ ದಲ್ಲಿ ಇರಿಸಲಾಗಿದ್ದು ಬಿಡುಗಡೆ ಮಾಡಲು ನಿರ್ದೇಶಿಸಬೇಕು' ಎಂದು 4ನೇ ಕೋರಿ ನೈಜೀರಿಯಾದ (ಸದ್ಯ ಕೋಗಿಲು ಲೇ ಔಟ್ ವಿಳಾಸ) ಇಮೆಕಾ ಜೇಮ್ಸ್ ಐವೊಬಾ ಅಲಿಯಾಸ್ ಆಸ್ಟಿನ್ ನೊಸೊ ಐವೊಬಾ ಹಾಗೂ ವುಡೆರಿಕ್ ಫಿಡೆಲಿಸ್ ಎಂಬ ಇಬ್ಬರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.
- 'ಕೇಂದ್ರದ ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿ (ಎಫ್‌ಆರ್ ಆರ್‌ಒ) ಕಚೇರಿಯಲ್ಲಿ ನೋಂದಣಿ ಮಾಡಿಸದೆ ಬೆಂಗಳೂರು ಮಹಾನಗರ ದಲ್ಲಿ ವಿದೇಶಗಳ ಹಲವು ಪ್ರಜೆಗಳು ಠಿಕಾಣಿ ಹೂಡಿದ್ದಾರೆ ಎಂದರೆ ಹೇಗೆ? ಇಂತಹುದನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರ ಕರ್ತವ್ಯ ಲೋಪ ಎಸಗಿ ದಂತಲ್ಲವೇ' ಎಂದು ಪ್ರಶ್ನಿಸಿತು.



## 22ನೇ ವಿಧಿಯ ಪರಾಮರ್ಶೆ

'ಸುಪ್ರಿಂ ಕೋರ್ಟ್ ಗಮನಿಸಿರುವಂತೆ ಅರ್ಜಿದಾರರು, ಭಾರತದ ಸಂವಿಧಾನದ 22ನೇ ವಿಧಿಯ ಅಡಿಯಲ್ಲಿ ರಕ್ಷಣೆ ಪಡೆಯಲು ಅರ್ಹರು ಹೌದೇ ಅಲ್ಲವೇ ಎಂಬುದು ಜಿಜ್ಞಾಸೆಯ ಸಂಗತಿಯಾಗಿದ್ದು ಈ ಕುರಿತಾಗಿ ನ್ಯಾಯಾಲಯ ಸೂಕ್ತ ಉತ್ತರ ನೀಡುವ ಅಗತ್ಯವಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. 'ಯಾವುದೇ ವಿದೇಶಿ ವ್ಯಕ್ತಿಯು ಮಾನ್ಯತೆ ಹೊಂದಿದ ವೀಸಾ ಇಲ್ಲದೆ ಅಥವಾ ಎಫ್‌ಆರ್‌ಆರ್‌ಒ ಕಚೇರಿಯಲ್ಲಿ ನೋಂದಾಯಿಸದೆ ಅವಧಿ ಮೀರಿ ತಂಗಿದ್ದರೆ ಮತ್ತು ಕ್ರಿಮಿನಲ್ ಮೊಕದ್ದಮೆಗಳಲ್ಲಿ ದಾಖಲಾಗಿರುವ ವಿದೇಶಿ ಪ್ರಜೆಗಳು ಸಂವಿಧಾನದ 22ನೇ ವಿಧಿಯ ಅಡಿಯಲ್ಲಿ ಬಂಧನಕ್ಕೆ ಸಂಬಂಧಿಸಿದಂತೆ ರಕ್ಷಣೆ ಪಡೆಯಬಹುದೇ ಎಂಬುದನ್ನು ಪರಾಮರ್ಶಿಸಿ ಸೂಕ್ತ ಆದೇಶ ಹೊರಡಿಸಲಾಗುವುದು' ಎಂದು ತಿಳಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 5ಕ್ಕೆ ಮುಂದೂಡಿತು.

### 22ನೇ ವಿಧಿ ಏನನ್ನು ಹೇಳುತ್ತದೆ?

ಭಾರತೀಯ ಸಂವಿಧಾನದ 22ನೇ ವಿಧಿಯು ಬಂಧನ ಮತ್ತು ಬಂಧನವನ್ನು ತಡೆಗಟ್ಟುವ ಸಂದರ್ಭಗಳಲ್ಲಿ ವ್ಯಕ್ತಿಗಳಿಗೆ ರಕ್ಷಣೆ ನೀಡುತ್ತದೆ. ಇದು ಬಂಧನದ ಕಾರಣಗಳನ್ನು ತಿಳಿಯುವ ಹಕ್ಕು, ವಕೀಲರನ್ನು ನೇಮಿಸಿಕೊಳ್ಳುವ ಹಕ್ಕು (22(1)) ಮತ್ತು 24 ಗಂಟೆಗಳ ಒಳಗಾಗಿ ಬಂಧಿಸಿದ ವ್ಯಕ್ತಿಯನ್ನು ಸ್ಥಳೀಯ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸುವ ಹಕ್ಕನ್ನು (22(2)) ಖಾತರಿಪಡಿಸುತ್ತದೆ. ಇದು ಶೋಷಣೆಯ ವಿರುದ್ಧದ ಹಕ್ಕಿನ ಭಾಗವೂ ಆಗಿದೆ.

- 'ಬೆಂಗಳೂರಿನಲ್ಲಿ ಅವಧಿ ಮೀರಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಲು ಕೈಗೊಂಡಿರುವ ಅಗತ್ಯ ಕ್ರಮಗಳನ್ನು ಮುಂದಿನ ವಿಚಾರಣೆಯಲ್ಲಿ ತಿಳಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು.
- ನ್ಯಾಯಾಲಯದ ನಿರ್ದೇಶನದಂತೆ ಪ್ರಕರಣದಲ್ಲಿ ಸೇರ್ಪಡೆಯಾಗಿರುವ ಎಫ್‌ಆರ್‌ಆರ್‌ಒ ಪರ ಹಾಜರಾಗಿದ್ದ. ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್, 'ಅರ್ಜಿದಾರರು 2015ರಲ್ಲಿ ಭಾರತಕ್ಕೆ ವ್ಯಾಪಾರ ವೀಸಾ ದಲ್ಲಿ ಬಂದಿದ್ದಾರೆ ಮತ್ತು ವಿಭಿನ್ನ ವೀಸಾಗಳಲ್ಲಿ ಉಳಿದುಕೊಂಡಿದ್ದಾರೆ. ಇಮೆಕಾ ಜೇಮ್, Soogu ಹಾಕಿಕೊಂಡು ಮತ್ತೊಬ್ಬರ ಹೆಸರಿನಲ್ಲಿ ಅನುಮತಿ ಸಲಾದ ವೀಸಾ ಹೊಂದಿ ಗಡುವನ್ನು ಮೀರಿ ನಗರದಲ್ಲಿ ಉಳಿದು ಕೊಂಡಿದ್ದಾರೆ' ಎಂದು ನ್ಯಾಯಪೀಠಕ್ಕೆ ವಿವರ ಸಲ್ಲಿಸಿದರು.
- ಅಷ್ಟಕ್ಕೂ, 'ಅರ್ಜಿದಾರರ ವಿರುದ್ಧ ಈಗಾಗಲೇ ಮಾದಕ ದ್ರವ್ಯ ನಿಗ್ರಹ ಕಾಯ್ದೆ-1985ರ (ಎನ್‌ಡಿಪಿಎಸ್) ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಇಬ್ಬರ ವಿರುದ್ಧ 400 ಗ್ರಾಂ ಎಂಡಿಎಂಎ ಮತ್ತು ಕೊಕೇನ್ ಮಾರಾಟ ಮಾಡಿದ ಆರೋಪವಿದೆ. ಆದರೆ, ಅವರು ಭಾರತದ ಸಂವಿಧಾನದ ಅಡಿಯಲ್ಲಿ

ನೈಜೀರಿಯನ ಪ್ರಜೆಗಳಾಗಿ ನಮ್ಮ ಹಕ್ಕನ್ನು ಉಲ್ಲಂಘಿಸಿ ಲಾಗಿದೆ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ' ಎಂದರು.

- 'ಅರ್ಜಿದಾರರು ಮಾತ್ರವಲ್ಲದೆ ಇನ್ನೂ ಬಹಳ ಮಂದಿ ವಿದೇಶಿಯರು ಅಧಿಕೃತ ವೀಸಾ ಇಲ್ಲದೆ ನಗರದಲ್ಲಿ ಉಳಿದುಕೊಂ ಡಿದ್ದಾರೆ ಮತ್ತು ತನಿಖೆಗೆ ಅಗತ್ಯವಿರುವ ಅವಧಿಯನ್ನು ಮೀರಿದ್ದಾರೆ. ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ನಿಯಮಗಳ ಪ್ರಕಾರ, ದೇಶದೊಳಗೆ ಪ್ರವೇಶಿಸುವ ವಿದೇಶಿ ಪ್ರಜೆ 14 ದಿನಗಳ ಒಳಗಾಗಿ ಎಫ್‌ಆರ್‌ಆರ್‌ಒ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಆದರೆ, ಈ ಅರ್ಜಿದಾರರು ಇವತ್ತಿಗೂ ತಮ್ಮ ನ್ನು ಕಚೇರಿಯಲ್ಲಿ ನೋಂದಣಿ ಮಾಡಿಸಿ ಕೊಂಡಿಲ್ಲ. ಎಫ್‌ಆರ್‌ಆರ್‌ಒ ನೋಂದಣಿ ಇಲ್ಲದೆ ನಗರದಲ್ಲಿ ಉಳಿದುಕೊಂಡಿರುವ ಈ ವಿದೇಶಿ ಪ್ರಜೆಗಳನ್ನು ನಿಭಾಯಿಸುವಲ್ಲಿ ರಾಜ್ಯದ ಕಡೆಯಿಂದಲೂ ಕರ್ತವ್ಯ ಲೋಪವಾಗಿದೆ' ಎಂದರು.

## ❖ ವಾಟ್ಸ್‌ಆ್ಯಪ್‌ಗೆ 'ಸುಪ್ರೀಂ' ತರಾಟೆ

**ಸಂದರ್ಭ: ದತ್ತಾಂಶ ಹಂಚಿಕೊಳ್ಳು- ವಿಕೆಯ ಹೆಸರಿನಲ್ಲಿ ಭಾರತದ ಖಾಸಗಿತನದ ಹಕ್ಕಿನೊಂದಿಗೆ ಆಟವಾಡಲು ಅವಕಾಶ ಕೊಡುವುದಿಲ್ಲ ಎಂದು ಮೆಟಾ ಪ್ಲಾಟ್‌ಫಾರ್ಮ್ಸ್ ಮತ್ತು ವಾಟ್ಸ್ ಅಪ್ ಅನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.**

- ಖಾಸಗಿತನ ರಕ್ಷಣೆಗೆ ಸಂಬಂಧಿಸಿ ಭಾರತೀಯ ಸ್ಪರ್ಧಾತ್ಮಕ ಆಯೋಗವು (ಸಿಸಿಐ) ವಿಧಿಸಿದ್ದ ₹213.14 ಕೋಟಿ ದಂಡದ ಆದೇಶವನ್ನು ಪ್ರಶ್ನಿಸಿ ಮೆಟಾ ಪ್ಲಾಟ್‌ಫಾರ್ಮ್ಸ್ ಮತ್ತು ವಾಟ್ ಆ್ಯಪ್ ಸಲ್ಲಿಸಿದ್ದ ಮೇಲ್ಮನವಿಯನ್ನು ಕೋರ್ಟ್ ವಿಚಾರಣೆ ನಡೆಸಿತು.
- ವಾಟ್ಸ್ ಆ್ಯಪ್ ಮತ್ತು ಅದರ ಮಾತೃಸಂಸ್ಥೆ ಮೆಟಾ, ತಮ್ಮ ಖಾಸಗಿತನ ನೀತಿಯನ್ನು ರೂಪಿಸಿಕೊಳ್ಳುವ ವಿಧಾನವನ್ನು ಭಾರತದ ಮುಖ್ಯನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯ ಬಾಗ್ಚಿ ಮತ್ತು ವಿಪಿಲ್ ಎಂ. ಪಾಂಚೋಲಿ ಅವರಿದ್ದ ಪೀಠವು ಪ್ರಶ್ನಿಸಿದೆ. ಗ್ರಾಹಕರೊಂದಿಗೆ ಮಾಡಿಕೊಂಡ ಅಸಮಾನ ಒಪ್ಪಂದಗಳ ಆಧಾರದಲ್ಲಿ ಅವರ ದತ್ತಾಂಶಗಳನ್ನು ಎಂದು ಪೀಠವು ಹೇಳಿದೆ. ಈ ಕುರಿತು ಫೆಬ್ರುವರಿ 9ರಂದು ಮಧ್ಯಂತರ ತೀರ್ಪು ಪ್ರಕಟಿಸುವುದಾಗಿ ತಿಳಿಸಿದೆ. ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಯನ್ನು ಪ್ರತಿವಾದಿಯನ್ನಾಗಿ ಮಾಡಬೇಕು ಎಂದುಸುಪ್ರೀಂಕೋರ್ಟ್ ತನ್ನ ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ಹೇಳಿದೆ.
- ಜಾಹೀರಾತಿಗೆ ಸಂಬಂಧಿಸಿದಂತೆ ಸೀಮಿತ ದತ್ತಾಂಶ ಹಂಚಿಕೆಗೆ ಮಾತ್ರ ಅವಕಾಶ ಕೊಟ್ಟು, ಪ್ರಾಬಲ್ಯದ ದುರ್ಬಳಕ ಮಾಡಲಾಗುತ್ತಿದೆ ಎಂಬ CCI ಅಭಿಪ್ರಾಯವನ್ನು ಎತ್ತಿಹಿಡಿದ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ ಆದೇಶವನ್ನೂ ಮೆಟಾ ಮತ್ತು ವಾಟ್ ಅಪ್ ಪ್ರಶ್ನಿಸಿವೆ.
- ಈ ಎರಡೂ ಸಂಸ್ಥೆಗಳು ಈದೇಶದ ಸಂವಿಧಾನವನ್ನು ಅಣಕ ಮಾಡಿವೆ' ಮತ್ತು ಈ ಸಂಸ್ಥೆಗಳ ನಡವಳಿಕೆಯು 'ಖಾಸಗಿ ಮಾಹಿತಿಯನ್ನು ಸಭ್ಯವಾಗಿ ಕದಿಯುವಂತೆ ಇದೆ' ಎಂದು ಪೀಠವು ಅಭಿಪ್ರಾಯಪಟ್ಟಿದೆ.
- ಗ್ರಾಹಕರ ಸಂಪೂರ್ಣವಾಗಿ ವಾಣಿಜ್ಯ ದತ್ತಾಂಶಗಳನ್ನು ಉದ್ದೇಶಕ್ಕಾಗಿ ಬಳಸಿಕೊಂಡಾಗ, ಭಾರತದ ಕಾನೂನಿನ ಅಡಿಯಲ್ಲಿ ಶ್ರದ್ಧೆಯಿಂದ ಸಂರಕ್ಷಿಸಿಕೊಂಡ ಬಂದಿರುವ ಖಾಸಗಿತನದ ಹಕ್ಕುಗಳ ಉಲ್ಲಂಘನೆಯಾಗುವ ಗಂಭೀರ ಅಪಾಯ ಉಂಟಾಗಿದೆ ಎಂದು ನ್ಯಾಯಾಲಯ ಹೇಳಿದೆ.
- ದಂಡದ ಹಣವನ್ನು ಠೇವಣಿ ಇರಿಸಲಾಗಿದೆ ಎಂದು ಮೆಟಾ ಪರ ಹಿರಿಯ ವಕೀಲ ಮುಕುಲ್ ರೋಹಟಗಿ ಮತ್ತು ವಾಟ್ಸ್‌ಆ್ಯಪ್ ಪರ ಹಿರಿ ವಕೀಲ ಅಖಿಲ್ ಸಿಬಲ್ ಪೀಠಕ್ಕೆ ತಿಳಿಸಿದರು.
- ಈ ಪ್ಲಾಟ್‌ಫಾರ್ಮ್‌ಗಳ ಖಾಸಗಿತನ ನೀತಿಯ ಕುರಿತು ಪೀಠವು ಮತ್ತೆ ತನ್ನ ಕಳವಳ ವ್ಯಕ್ತಪಡಿಸಿತು.
- 2021ರ ಖಾಸಗಿತನ ನೀತಿಯನ್ನು ಒಪ್ಪಿಕೊಳ್ಳದ ಯಾವುದೇ ಬಳಕೆದಾರ ವಾಟ್ಸ್‌ಆ್ಯಪ್ ಬಳಸುವುದನ್ನು ನಿಷೇಧಿಸುವುದಿಲ್ಲ ಎಂದು ಸಂವಿಧಾನ ಪೀಠಕ್ಕೆ ಭರವಸೆ ನೀಡಲಾಗಿದೆ ಎಂಬ ವಿಚಾರವನ್ನು ರೋಹಟಗಿ ಅವರು ಪೀಠದ ಗಮನಕ್ಕೆ ತಂದರು.

Dr. Rajkumar IAS/KAS Academy

- ಮೆಟಾದೊಂದಿಗೆ ಆಗಲಿ ಅಥವಾ ಇತರ ಯಾರೊಂದಿಗೆ ಆಗಲಿ, ಒಂದೇ ಒಂದು ಮಾಹಿತಿ ಹಂಚಿಕೊಳ್ಳುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ನಾವು ಕಟ್ಟುನಿಟ್ಟಿನ ಆದೇಶವನ್ನು ನೀಡಲಿದ್ದೇವೆ ಮತ್ತು ಅದನ್ನು ಅನುಸರಿಸದೇ ಇದ್ದರೆ ಒಂದೇ ಸೆಕೆಂಡ್‌ನಲ್ಲಿ ನಿಮ್ಮನ್ನು ಅಚೆಗೆ ದಬ್ಬುತ್ತೇವೆ ಎಂದು ಪೀಠ ಹೇಳಿದೆ.
- ಈ ಮಾರುಕಟ್ಟೆಯಲ್ಲಿ ನಿಮ್ಮ ಸಂಪೂರ್ಣ ಏಕಸ್ವಾಮ್ಯ ಇರುವುದರಿಂದ ಜನರಿಗೆ ಬೇರೆ ಯಾವ ಆಯ್ಕೆಗಳಿವೆ. ನಾವು ನಿಮಗೆ ಅಯ್ಕೆಯೊಂದನ್ನು ನೀಡುತ್ತೇವೆ ಎಂದರೆ, ಆ ಆಯ್ಕೆಯೇ ಒಂದು ಒಪ್ಪಂದದ ಹಾಗೆ- ನಿಮ್ಮ ದತ್ತಾಂಶವನ್ನು ನಾವು ಮಾರುತ್ತೇವೆ ಅಥವಾ ವಾಟ್ಸ್‌ಆ್ಯಪ್‌ನಿಂದ ನೀವು ಹೊರನಡೆಯಿರಿ ಎಂದು ಅದರ ಅರ್ಥ. ನಾವು ಅದಕ್ಕೆ ಏಕೆ ಅವಕಾಶ ಕೊಡಬೇಕು ಎಂದು ಪೀಠವು ಪ್ರಶ್ನಿಸಿದೆ.

## ❖ ವಿರಳ ಭೂಭಾಗಗಳ 'ಸೆರೆ'ಗೆ ನೆರವಾಗುವ 'ಕೃತಕಬುದ್ಧಿ'

• ಸುಧೀರ್ ಎಚ್.ಎಸ್.

**ಭೂಮಿಯ** ಮೇಲ್ಮೈಯನ್ನು ಆಕಾಶದಿಂದ ವೀಕ್ಷಿಸುವ ಉಪಗ್ರಹಗಳು ನಮಗೆ ನಿರಂತರವಾಗಿ ದತ್ತಾಂಶಗಳನ್ನು ನೀಡುತ್ತಲೇ ಇರುತ್ತವೆ. ಆದರೆ, ಈ ಉಪಗ್ರಹಗಳು ಕಳುಹಿಸುವ ಚಿತ್ರಗಳನ್ನು ವಿಶ್ಲೇಷಿಸುವಾಗ ಒಂದು ದೊಡ್ಡ ಸವಾಲು ಎದುರಾಗುತ್ತದೆ. ಉಪಗ್ರಹದ ಕಣ್ಣಿಗೆ ವಿಶಾಲವಾಗಿ ಹರಡಿರುವ ಕೃಷಿಭೂಮಿಗಳು ಸುಲಭವಾಗಿ ಕಾಣಿಸುತ್ತವೆಯೇ ಹೊರತು, ಸಣ್ಣ ನದಿಗಳು, ದಟ್ಟ ಅರಣ್ಯದ ನಡುವಿನ ಅಪರೂಪದ ಮರಗಳು ಅಥವಾ ಸಣ್ಣ ಜನವಸತಿ ಪ್ರದೇಶಗಳು ಹೆಚ್ಚಾಗಿ ಪತ್ತೆಯಾಗುವುದೇ ಇಲ್ಲ.

ಈ ಸಮಸ್ಯೆಯನ್ನು ಹೋಗಲಾಡಿಸಲು ಇದೀಗ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ, ISRO) ಹೈದರಾಬಾದ್‌ನಲ್ಲಿರುವ ರಾಷ್ಟ್ರೀಯ ದೂರಸಂವೇದಿ ಕೇಂದ್ರ ಮತ್ತು ದೆಹಲಿಯ ಜಿಜಿಎಸ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಸಂಶೋಧಕರು ಕೈಜೋಡಿಸಿ 'MO-DGAN' ಎಂಬ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ (AI) ಮಾದರಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಸಂಶೋಧನೆಯು ಪರಿಸರ ಸಂರಕ್ಷಣೆ ಮತ್ತು ನಗರಾಭಿವೃದ್ಧಿ ಯೋಜನೆಗಳಲ್ಲಿ ಹೊಸ ಕ್ರಾಂತಿಯನ್ನೇ ಸೃಷ್ಟಿಸುವ ಮುನ್ಸೂಚನೆಯನ್ನು ನೀಡಿದೆ.

ಉಪಗ್ರಹ ನಕ್ಷೆಗಳಲ್ಲಿ ಎದುರಾಗುವ ಈ ಸಮಸ್ಯೆಯನ್ನು ವಿಜ್ಞಾನಿಗಳು 'ಕ್ಲಾಸ್ ಇಂಬ್ಯಾಲೆನ್ಸ್' ಅಥವಾ 'ವರ್ಗ ಅಸಮತೋಲನ' ಎಂದು ಕರೆಯುತ್ತಾರೆ. ಉದಾಹರಣೆಗೆ, ಯುರೋಪಿನ ಸ್ಯಾಟಲೈಟ್ ದತ್ತಾಂಶ-ಗಳನ್ನು ಗಮನಿಸಿದರೆ ಅಲ್ಲಿ ಕೃಷಿಭೂಮಿಯ ಚಿತ್ರಗಳೇ ಹೆಚ್ಚಾಗಿರುತ್ತವೆ. ಕೃತಕ ಬುದ್ಧಿಮತ್ತೆಗೆ ತರಬೇತಿ ನೀಡುವಾಗ ಹೆಚ್ಚಿನ ಸಂಖ್ಯೆಯಲ್ಲಿರುವ ಇಂತಹ ಕೃಷಿಭೂಮಿಯ ಚಿತ್ರಗಳನ್ನೇ ಬಳಸುವುದರಿಂದ, ಆ ತಂತ್ರಜ್ಞಾನವು ಕೇವಲ ಕೃಷಿ ಭೂಮಿಯನ್ನು ಗುರುತಿಸುವುದರ-ಲ್ಲಿ ಮಾತ್ರ ನಿಪುಣವಾಗುತ್ತದೆ. ಇದು ಅಪರೂಪದ ಭೂಭಾಗಗಳನ್ನು ಕೇವಲ ಕೃಷಿಭೂಮಿ ಎಂದು ತಪ್ಪಾಗಿ ಗುರುತಿಸಬಹುದು ಅಥವಾ ಸಂಪೂರ್ಣವಾಗಿ ನಿರ್ಲಕ್ಷಿ-ಸಬಹುದು.



ನಮ್ಮ ಕರ್ನಾಟಕದ ಸಂದರ್ಭದಲ್ಲಿ ನೋಡುವುದಾದರೆ, ಪಶ್ಚಿಮ ಘಟ್ಟಗಳ ದಟ್ಟ ಅರಣ್ಯದ ನಡುವೆ ಇರುವ ಸಣ್ಣ ತೊರೆಗಳು ಅಥವಾ ಅಭಿವೃದ್ಧಿ ಹೊಂದುತ್ತಿರುವ ಬೆಂಗಳೂರಿನ ಹೊರವಲಯದ ಸಣ್ಣ ಜನವಸತಿ ಪ್ರದೇಶಗಳನ್ನು ನಿಖರವಾಗಿ ಗುರುತಿಸುವುದು ಇಂದಿನ ಸವಾಲಾಗಿದೆ. ಇಂತಹ ಸಂದರ್ಭಗಳಲ್ಲಿ ಈ ಹೊಸ ಎ.ಐ. ತಂತ್ರಜ್ಞಾನವು ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದು.

ಈ ಸಂಶೋಧಕರು ಅಭಿವೃದ್ಧಿಪಡಿಸಿರುವ MO-DGAN ಮಾದರಿಯು 'ಜನರೇಟಿವ್ ಅಡ್ವರ್ಸೇರಿಯಲ್ ನೆಟ್‌ವರ್ಕ್ಸ್' (GANs) ಎಂಬ ತಂತ್ರಜ್ಞಾನದ ಮೇಲೆ ಆಧಾರಿತವಾಗಿದೆ. ಇದನ್ನು ಸರಳವಾಗಿ ಹೇಳುವುದಾದರೆ, ಇದು ಒಬ್ಬ ಕಳ್ಳ ಮತ್ತು ಒಬ್ಬ ಪೊಲೀಸನ ನಡುವಿನ ಬುದ್ಧಿವಂತಿಕೆಯ ಆಟದಂತಿದೆ. ಇಲ್ಲಿ ಜನರೇಟರ್ ಎಂಬ ಸಿಸ್ಟಮ್ ಒಬ್ಬ ನಕಲಿ ಚಿತ್ರಗಳನ್ನು ತಯಾರಿಸುವ ಕಲಾವಿದನಂತೆ ಕೆಲಸ ಮಾಡುತ್ತದೆ. ಅದು ನಿಜವಾದ ಉಪಗ್ರಹ ಚಿತ್ರಗಳಂತೆಯೇ ಕಾಣುವ ಕೃತಕ ಚಿತ್ರಗಳನ್ನು ಸೃಷ್ಟಿಸುತ್ತದೆ. ಮತ್ತೊಂದೆಡೆ, ಡಿಸ್ಕ್ರಿಮಿನೇಟರ್ ಎಂಬ ಸಿಸ್ಟಮ್ ಒಬ್ಬ ಪತ್ತೇದಾರನಂತೆ ಕೆಲಸ ಮಾಡಿ, ಆ ಚಿತ್ರವು ಅಸಲಿಯೇ ಅಥವಾ ನಕಲಿಯೇ ಎಂದು ಪತ್ತೆಹಚ್ಚುತ್ತದೆ. ಈ ಇಬ್ಬರ ನಡುವಿನ ಸ್ಪರ್ಧೆಯು ಸೆಕೆಂಡಿಗೆ ಲಕ್ಷಾಂತರ ಬಾರಿ ನಡೆಯುತ್ತದೆ. ಅಂತಿಮವಾಗಿ, ಜನರೇಟರ್ ಎಷ್ಟೊಂದು ಪರಿಣತಿಯನ್ನು ಪಡೆಯುತ್ತದೆ ಎಂದರೆ ಅದು ಸೃಷ್ಟಿಸುವ ಚಿತ್ರಗಳು ಅಸಲಿ ಉಪಗ್ರಹ ಚಿತ್ರಗಳಿಗಿಂತ ಕಿಂಚಿತ್ತೂ ಭಿನ್ನವಾಗಿರುವುದಿಲ್ಲ. ಹೀಗೆ ಸೃಷ್ಟಿಯಾದ ಕೃತಕ ಚಿತ್ರಗಳನ್ನು ಬಳಸಿ ಎ.ಐ. ಮಾದರಿಗೆ ತರಬೇತಿ ನೀಡಿದಾಗ, ಅದು ಅಪರೂಪದ ಭೂಭಾಗಗಳನ್ನೂ ನಿಖರವಾಗಿ ಗುರುತಿಸಲು ಕಲಿಯುತ್ತದೆ.

ಸಂಶೋಧನೆಯ ಮುಂದಿನ ಹಂತವಾಗಿ, ವಿಜ್ಞಾನಿಗಳು ಈ ವ್ಯವಸ್ಥೆಗೆ 'ವೇರಿಯೇಶನಲ್ ಆಟೋಎನ್‌ಕೋಡರ್' (VAE) ಎಂಬ ಮತ್ತೊಂದು ತಾಂತ್ರಿಕತೆಯನ್ನು ಸೇರಿಸಿದ್ದಾರೆ. ಹಳೆಯ ಮಾದರಿಗಳಲ್ಲಿ ಎ.ಐ. ಒಂದೇ ರೀತಿಯ ಚಿತ್ರಗಳನ್ನು ಪುನರಾವರ್ತಿತವಾಗಿ ಸೃಷ್ಟಿಸುವ 'ಮೋಡ್ ಕೊಲ್ಯಾಪ್ಸ್' ಎಂಬ ಸಮಸ್ಯೆಯನ್ನು ಎದುರಿಸುತ್ತಿತ್ತು. ಆದರೆ VAE ತಂತ್ರಜ್ಞಾನವು ಎ.ಐ.ಗೆ ಹೆಚ್ಚಿನ ವೈವಿಧ್ಯಮಯ ಚಿತ್ರಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ. ಇದರ ಜೊತೆಗೆ ಈ ಹೊಸ ಮಾದರಿಯು ಏಕಕಾಲದಲ್ಲಿ ಹಲವಾರು ರೀತಿಯ ಅಪರೂಪದ ಭೂಭಾಗಗಳನ್ನು (ಉದಾಹರಣೆಗೆ ನದಿಗಳು ಮತ್ತು ದಟ್ಟ ಕಾಡುಗಳು) ಗುರುತಿಸುವ ಸಾಮರ್ಥ್ಯವನ್ನು ಹೊಂದಿದೆ, ಇದು ಹಳೆಯ ಮಾದರಿಗಳಲ್ಲಿ ಸಾಧ್ಯವಿರಲಿಲ್ಲ. ಶ್ವೇತಾ ಶರ್ಮಾ ಮತ್ತು ಅಂಜನಾ ಗೋಸೈನ್ ಅವರ ನೇತೃತ್ವದ ಈ ಸಂಶೋಧನಾ ತಂಡವು ವಿವಿಧ ಮಾದರಿಗಳನ್ನು ಪರೀಕ್ಷಿಸಿ, 'ResNet101' ಎಂಬ ಸಿಸ್ಟಮ್ ಈ ಕೆಲಸಕ್ಕೆ ಅತ್ಯಂತ ಸೂಕ್ತವಾದುದು ಎಂದು ಕಂಡುಕೊಂಡಿದೆ.

ಈ ತಂತ್ರಜ್ಞಾನದ ಅನ್ವಯಿಕೆಗಳು ಆಧುನಿಕ ಸಮಾಜಕ್ಕೆ ಅತ್ಯಂತ ಅಗತ್ಯವಾಗಿವೆ. ನಗರಯೋಜಕರು ಬೆಂಗಳೂರಿನಂತಹ ವೇಗವಾಗಿ ಬೆಳೆಯುತ್ತಿರುವ ನಗರಗಳ ವಿಸ್ತರಣೆಯನ್ನು ವೈಜ್ಞಾನಿಕವಾಗಿ ನಿರ್ವಹಿಸಲು ಈ ನಿಖರವಾದ ನಕ್ಷೆಗಳನ್ನು ಬಳಸಬಹುದು. ಪರಿಸರವಾದಿಗಳು ಅಳಿವಿನ ಅಂಚಿನಲ್ಲಿರುವ ಜೌಗು ಪ್ರದೇಶಗಳು ಅಥವಾ ಕಾಡುಗಳನ್ನು ಪತ್ತೆಹಚ್ಚಲು ಮತ್ತು ಅವುಗಳನ್ನು ರಕ್ಷಿಸಲು ಇದು ಸಹಕಾರಿ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಈ ತಂತ್ರಜ್ಞಾನವು ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಉದಾಹರಣೆಗೆ, ಭೀಕರ ಪ್ರವಾಹ ಬಂದಾಗ, ಉಪಗ್ರಹ ಚಿತ್ರಗಳಲ್ಲಿ ಕಾಣಿಸುವ ನೀರು ಹಳೆಯ ನದಿಯದ್ದೇ ಅಥವಾ ಹೊಸದಾಗಿ ಪ್ರವಾಹಕ್ಕೆ ತುತ್ತಾದ ಜನವಸತಿ ಪ್ರದೇಶದ್ದೇ ಎಂಬುದನ್ನು ನಿಖರವಾಗಿ ತಿಳಿಯುವುದು ಬಹಳ ಮುಖ್ಯ. ಈ ಎ.ಐ. ಮಾದರಿಯು ಅಂತಹ ವ್ಯತ್ಯಾಸಗಳನ್ನು ಕ್ಷಣಾಂತರದಲ್ಲಿ ಗುರುತಿಸಿ ರಕ್ಷಣಾ ಕಾರ್ಯಗಳಿಗೆ ನೆರವಾಗಬಲ್ಲದು.

ಆದಾಗ್ಯೂ, ಈ ತಂತ್ರಜ್ಞಾನವು ಇನ್ನೂ ಕೆಲವು ಸವಾಲುಗಳನ್ನು ಎದುರಿಸುತ್ತಿದೆ. ಪ್ರಸ್ತುತ ಇದನ್ನು ಮಾನವನ ಕಣ್ಣಿಗೆ ಕಾಣಿಸುವ ಸಾಮಾನ್ಯ ಬಣ್ಣಗಳ (RGB) ಚಿತ್ರಗಳ ಮೇಲೆ ಪರೀಕ್ಷಿಸಲಾಗಿದೆ. ಆದರೆ ಉಪಗ್ರಹಗಳು ಮಣ್ಣಿನ ಗುಣಲಕ್ಷಣ ಅಥವಾ ಎಲೆಯ ಆರೋಗ್ಯವನ್ನು ತಿಳಿಸುವ ಅತಿನೇರಳೆ ಅಥವಾ ಅತಿಗೆಂಪು ಕಿರಣಗಳಂತಹ ಅದೃಶ್ಯ ಬೆಳಕಿನ ದತ್ತಾಂಶಗಳನ್ನೂ ಸಂಗ್ರಹಿಸುತ್ತವೆ. ಇಂತಹ ಕ್ಲಿಷ್ಟಕರ ಮತ್ತು ಬೃಹತ್ ದತ್ತಾಂಶಗಳಿಗೆ ಈ ಎ.ಐ. ಮಾದರಿಯನ್ನು ಅಳವಡಿಸಲು ಇನ್ನು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಅಲ್ಲದೆ, ಈ ವ್ಯವಸ್ಥೆಯು ತನ್ನ ಕಲ್ಪನಾ ಪ್ರಕ್ರಿಯೆಯನ್ನು ಆರಂಭಿಸಲು ಕನಿಷ್ಠ ಕೆಲವು ನೈಜ ಚಿತ್ರಗಳನ್ನಾದರೂ ಅವಲಂಬಿಸಿರುತ್ತದೆ. ಏನೇ ಆದರೂ, ವಿಜ್ಞಾನಿಗಳ ಈ ಸಾಧನೆಯು ನಮ್ಮ ಭೂಮಿಯನ್ನು ಮತ್ತಷ್ಟು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಮತ್ತು ಸಂರಕ್ಷಿಸಲು ನಮಗೊಂದು ಡಿಜಿಟಲ್ ಕನ್ನಡಿಗೆ ನಾಂದಿ ಹಾಡಿದೆ.

## ಎಜಿ ನೀಡಿದ 14 ಪುಟಗಳ ವಿವರಣೆ ಸಹಿತ ಮಸೂದೆಯನ್ನು ಅಂಕಿತಕ್ಕೆ ಕಳುಹಿಸಿದ ರಾಜ್ಯ ಸರ್ಕಾರ

● ರಾಜೇಶ್ ರೈ ಚಟ್ಲ

**ಬೆಂಗಳೂರು:** ಪರಿಶಿಷ್ಟ ಜಾತಿಯೊಳಗೆ ಒಳ ಮೀಸಲಾತಿ ಕಲ್ಪಿಸಲು ರೂಪಿಸಿದ್ದ ಮಸೂದೆ ಕುರಿತು ರಾಜ್ಯಪಾಲರು ಎತ್ತಿದ್ದ ಪ್ರಶ್ನೆಗಳಿಗೆ ವಿವರವಾದ ಸ್ಪಷ್ಟೀಕರಣ ಕೊಟ್ಟಿರುವ ಸರ್ಕಾರ, ಅಂಕಿತಕ್ಕಾಗಿ ಮತ್ತೆ ಮಸೂದೆಯನ್ನು ಲೋಕಭವನಕ್ಕೆ ಕಳುಹಿಸಿದೆ.



ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಿ ಒಳ ಮೀಸಲಾತಿ ಕಲ್ಪಿಸಲು ಹೊರಡಿಸಿದ್ದ ಆದೇಶಕ್ಕೆ ಕಾನೂನು ಬಲ ನೀಡುವ ಉದ್ದೇಶದಿಂದ 'ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ಮಸೂದೆ-2025' ಅನ್ನು ಸರ್ಕಾರ ರೂಪಿಸಿತ್ತು. ಬೆಳಗಾವಿಯಲ್ಲಿ ಈಚೆಗೆ ನಡೆದ ಅಧಿವೇಶನದಲ್ಲಿ ಅನುಮೋದನೆ ಗೊಂಡಿದ್ದ ಈ ಮಸೂದೆಯನ್ನು ಅಂಕಿತಕ್ಕಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಕಳುಹಿಸಲಾಗಿತ್ತು. ಆದರೆ, ಅವರು ಕೆಲವು ಸ್ಪಷ್ಟನೆಗಳನ್ನು ಕೇಳಿ ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದರು.



ಥಾವರಚಂದ್ ಗೆಹಲೋತ್

'ಅಡ್ವೊಕೇಟ್ ಜನರಲ್ (ಎಜಿ) ಶಶಿ ಕಿರಣ್ ಶೆಟ್ಟಿ ಅವರು 14 ಪುಟಗಳ ಸ್ಪಷ್ಟನೆಯನ್ನು ಸಿದ್ಧಪಡಿಸಿದ್ದು, ಅದನ್ನು ಮಸೂದೆಯ ಜೊತೆಗೆ ರಾಜ್ಯಪಾಲರಿಗೆ ಕಳುಹಿಸಲಾಗಿದೆ' ಎಂದು ಸರ್ಕಾರದ ಮೂಲಗಳು ತಿಳಿಸಿವೆ.

**ಎಜಿ ವಿವರಣೆಯಲ್ಲಿ ಏನಿದೆ?:** 'ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಹೆಚ್ಚಿಸಲು ಸಂಸತ್ತಿನ ಅನುಮೋದನೆಯ ಅಗತ್ಯದ ಬಗ್ಗೆ ರಾಜ್ಯಪಾಲರು ಕಳವಳ ವ್ಯಕ್ತಪಡಿಸಿದ್ದರು. ಅಸ್ತಿತ್ವದಲ್ಲಿರುವ ಮೀಸಲಾತಿ ಚೌಕಟ್ಟಿನೊಳಗೆ ಮಸೂದೆ ರೂಪಿಸಲಾಗಿದೆ. ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 17ಕ್ಕೆ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7ಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ರೂಪಿಸಿದ್ದ 'ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಕಾಯ್ದೆ-2022'ಕ್ಕೆ ರಾಷ್ಟ್ರಪತಿ, ಸಂಸತ್ತಿನ ಒಪ್ಪಿಗೆ ಅಥವಾ ರಾಷ್ಟ್ರಪತಿಯ ಯಾವುದೇ ಆಕ್ಷೇಪಣೆ ಇಲ್ಲದೆ ರಾಜ್ಯಪಾಲರೇ ಅಂಕಿತ ಹಾಕಿದ್ದಾರೆ. ಈ ಕಾಯ್ದೆಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರೂ, ಕಾಯ್ದೆಯು ಸಂವಿಧಾನಬಾಹಿರವೆಂದು ಹೈಕೋರ್ಟ್ ರದ್ದುಪಡಿಸಿಲ್ಲ. ಹೀಗಾಗಿ, ಪರಿಶಿಷ್ಟ ಜಾತಿಗೆ ಶೇ 17 ಮೀಸಲಾತಿ ನೀಡಲಾಗುತ್ತಿದ್ದು, ಈ ಜಾತಿಗಳಲ್ಲಿ ಸಮಾನತೆ ತರುವ ಉದ್ದೇಶದಿಂದ ಈ ಮೀಸಲಾತಿಯನ್ನು ಸರ್ಕಾರವು ಮರು ವರ್ಗೀಕರಣ ಮಾಡಿದೆ. ಇದಕ್ಕೆ ವಿಧಾನ ಮಂಡಲವೂ ಅನುಮೋದನೆ ನೀಡಿದೆ' ಎಂದು ಎಜಿ ವಿವರಿಸಿದ್ದಾರೆ.

'ಮೀಸಲಾತಿ ಶೇಕಡಾವಾರು ಪ್ರಮಾಣ ನಿರ್ಧರಿಸುವ ಅಧಿಕಾರಕ್ಕಿಂತ ಉಪ-ವರ್ಗೀಕರಣದ ಅಧಿಕಾರವು ಭಿನ್ನವಾಗಿದೆ. ಪಂಜಾಬ್ ಸರ್ಕಾರ ಹಾಗೂ ದೇವಿಂದರ್ ಸಿಂಗ್ ನಡುವಿನ ಪ್ರಕರಣದ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಸಂವಿಧಾನದ ವಿಧಿ 14, 15(4), ಮತ್ತು 16 (4)ರ ಅಡಿ ಒಳ ಮೀಸಲಾತಿ ಜಾರಿಗೊಳಿಸುವ ರಾಜ್ಯದ ಅಧಿಕಾರವನ್ನು ಎತ್ತಿಹಿಡಿದಿದೆ. ರಾಜ್ಯ ಅಥವಾ ಕೇಂದ್ರ ಸರ್ಕಾರ ಅಂಗೀಕರಿಸಿದ ಯಾವುದೇ ಶಾಸನ ಜಾರಿಗೊಂಡ ಬಳಿಕ ನ್ಯಾಯಾಂಗದ ಪರಿಶೀಲನೆಗೆ ಒಳಪಟ್ಟಿರುತ್ತದೆ. ಆದ್ದರಿಂದ, ಶಾಸಕಾಂಗದ ಕ್ರಮವನ್ನು ಲೆಕ್ಕಿಸದೆ ನ್ಯಾಯಾಂಗ ಮೇಲ್ವಿಚಾರಣಾ ಕಾರ್ಯವಿಧಾನವು ಹಾಗೆಯೇ ಉಳಿದಿದೆ. ಆದಾಗ್ಯೂ, ನ್ಯಾಯಾಂಗ ಪರಿಶೀಲನೆಯ ನಿರೀಕ್ಷೆಯು ರಾಜ್ಯದ ಶಾಸಕಾಂಗ ಸಾಮರ್ಥ್ಯವನ್ನು ಕಸಿದುಕೊಳ್ಳುವುದಿಲ್ಲ. ನ್ಯಾಯಾಂಗ ಪರಿಶೀಲನೆಯ ಪರಿಹಾರವು ಒಂದು ರಕ್ಷಣೆಯಾಗಿದೆ ಮತ್ತು ಶಾಸಕಾಂಗ ಪ್ರಕ್ರಿಯೆಗೆ ಅಡ್ಡಿಯಲ್ಲ' ಎಂದೂ ಅವರು ಹೇಳಿದ್ದಾರೆ.

ಈ ಮಸೂದೆಗೆ ಸಂಬಂಧಿಸಿದಂತೆ ಅಖಿಲ ಕರ್ನಾಟಕ ಬಂಜಾರ, ಬೋವಿ, ಕೊರಚ, ಕೊರಮ ಸಮಾಜಗಳ ಕಲ್ಯಾಣ ಸಂಘ ಮತ್ತು ಇತರ ಕೆಲವು ಸಂಘಟನೆಗಳು ಎತ್ತಿದ 14 ಆಕ್ಷೇಪಣೆಗಳಿಗೆ ರಾಜ್ಯಪಾಲರು ಸರ್ಕಾರದಿಂದ ಸ್ಪಷ್ಟೀಕರಣ ಕೋರಿದ್ದರು. ಈ ಎಲ್ಲ ಆಕ್ಷೇಪಣೆಗಳನ್ನು ಉಲ್ಲೇಖಿಸಿ, ಪ್ರತಿಯೊಂದಕ್ಕೂ ವಿವರವಾದ ಸ್ಪಷ್ಟೀಕರಣವನ್ನೂ ಎಜಿ ನೀಡಿದ್ದಾರೆ.

### ಪ್ರಮುಖ ಸ್ಪಷ್ಟೀಕರಣಗಳೇನು?

- ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ ಕೆಲವು ಜಾತಿಗಳ ಪ್ರಾತಿನಿಧ್ಯದ ಕೊರತೆ ಮನಗಂಡು, ಸುಪ್ರೀಂಕೋರ್ಟ್‌ನ ತೀರ್ಪಿನಂತೆ ಮರು ವರ್ಗೀಕರಣ ಮಾಡಲಾಗಿದೆ
- ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಏಕ ಸದಸ್ಯ ಆಯೋಗವು ಪರಿಶಿಷ್ಟ ಜಾತಿಗಳ ಸಮೀಕ್ಷೆಯಡಿ ಸಂಗ್ರಹಿಸಲಾದ ದತ್ತಾಂಶಗಳನ್ನು ಪರಿಶೀಲಿಸಿ, ತಜ್ಞರ ನೆರವು ಪಡೆದು ವರದಿ ಸಲ್ಲಿಸಿದೆ. ವರದಿಯು ಯಾವುದೇ ಒಂದು ಸಮುದಾಯದ ವಿರುದ್ಧವಾಗಿಲ್ಲ
- ಆಯೋಗದ ವರದಿಯ ಕುರಿತು ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ಚರ್ಚಿಸಿ, ವರದಿಯಲ್ಲಿನ ಕೆಲವು ಗೊಂದಲಗಳನ್ನು ಪರಿಹರಿಸಲು ನಿರ್ಧರಿಸಿತು. ಸಂಪುಟವು ತನ್ನದೇ ವಿವೇಚನೆಯಿಂದ 101 ಪರಿಶಿಷ್ಟ ಜಾತಿಗಳ ಹಿತಾಸಕ್ತಿ ಗಮನದಲ್ಲಿಟ್ಟು ಮೂರು ಗುಂಪುಗಳಾಗಿ ವರ್ಗೀಕರಿಸಿ, ಮೀಸಲಾತಿ ಹಂಚಿಕೆಯ, ನ್ಯಾಯಯುತ ನಿರ್ಧಾರ ತೆಗೆದುಕೊಂಡಿದೆ
- ಸಂಪುಟದ ನಿರ್ಧಾರದಂತೆ ಎ, ಬಿ, ಸಿ ಗುಂಪುಗಳಿಗೆ ರೋಸ್ಟರ್ ಬಿಂದು ನಿಗದಿಪಡಿಸಲಾಗಿದೆ. 100 ಬಿಂದುಗಳ ರೋಸ್ಟರ್‌ನಲ್ಲಿ ಎಲ್ಲಾ ಸಮುದಾಯಗಳಿಗೆ ಅವಕಾಶ ನೀಡಲಾಗಿದ್ದು, ಯಾವುದೇ ಜಾತಿ, ಗುಂಪನ್ನು ಹೊರಗಿಟ್ಟಿಲ್ಲ
- 'ಸಿ' ಗುಂಪಿನಲ್ಲಿರುವ 59 ಸಮುದಾಯಗಳಿಗೆ ಸರಿಯಾದ ಪ್ರಾತಿನಿಧ್ಯವನ್ನು ಖಚಿತಪಡಿಸಲು ಒಳ ಮೀಸಲಾತಿಯಲ್ಲಿ ಒಳ ಮೀಸಲು ನೀಡಲಾಗಿದೆ. ಅಲ್ಲದೆ, ಈ 59 ಜಾತಿಗಳ ಅಡಿಯಲ್ಲಿ ಯಾವುದೇ ಅರ್ಹ ಅಭ್ಯರ್ಥಿ ಲಭ್ಯ ಇಲ್ಲದಿದ್ದರೆ ಅಂತಹ ಹುದ್ದೆಗಳು ಅಥವಾ ಸ್ಥಾನಗಳನ್ನು ಗುಂಪು 'ಸಿ' ಯಲ್ಲಿರುವ ಇತರ 4 ಜಾತಿಗಳಿಂದ ಭರ್ತಿ ಮಾಡಬೇಕೆಂದು ಮಸೂದೆಯಲ್ಲಿದೆ

Publication Date
04/02/2026

Presented by ಪ್ರಜಾವಾಣಿ

# 24 ಅಂಶಗಳ ಪಟ್ಟಿಸಹಿತ ಸರ್ಕಾರಕ್ಕೆ ಮಸೂದೆ ವಾಪಸ್

# ದ್ವೇಷ ಭಾಷಣ ತಡೆ: ಕಾಯ್ದಿರಿಸಿದ ರಾಜ್ಯಪಾಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾಂವಿಧಾನಿಕವಾಗಿ ಸಂರಕ್ಷಿತ ಪ್ರಜಾಪ್ರಭುತ್ವದ ಚರ್ಚೆಯ ಮೇಲೆ ತೀವ್ರ ನಕಾರಾತ್ಮಕ ಪರಿಣಾಮ ಉಂಟು ಮಾಡುವ ಸಾಧ್ಯತೆಯೂ ಸೇರಿದಂತೆ ಹಲವು ಕಾರಣಗಳನ್ನು ಉಲ್ಲೇಖಿಸಿ, ದ್ವೇಷ ಭಾಷಣ ತಡೆ ಮಸೂದೆಗೆ ಅಂಕಿತ ಹಾಕದ ರಾಜ್ಯಪಾಲರು, ಮಸೂದೆಯನ್ನು ರಾಷ್ಟ್ರಪತಿಯ ವಿವೇಚನೆಗೆ ಕಾಯ್ದಿರಿಸಿ ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ.



ಥಾವರಚಂದ್ ಗೆಹ್ಲೋತ್

'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ -2025' ಕ್ಕೆ ಅಂಕಿತ ಹಾಕುವಂತೆ ಕೋರಿ, ರಾಜ್ಯ ಸರ್ಕಾರ ಮಸೂದೆಯನ್ನು ಲೋಕಭವನಕ್ಕೆ ಕಳುಹಿಸಿತ್ತು.

'25ಕ್ಕೂ ಅಂಶಗಳನ್ನು ಪಟ್ಟಿ ಮಾಡಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ತಮ್ಮ ಅಭಿಪ್ರಾಯಗಳ ಸಹಿತ ಮಸೂದೆಯನ್ನು ವಾಪಸ್ ಮಾಡಿದ್ದಾರೆ. ಕಾನೂನು ಇಲಾಖೆಯ ಪರಿಶೀಲನೆಯ ಬಳಿಕ ರಾಷ್ಟ್ರಪತಿಗೆ ಕಳುಹಿಸುವ ಬಗ್ಗೆ ಸರ್ಕಾರ ನಿರ್ಧರಿಸಲಿದೆ' ಎಂದು ಸರ್ಕಾರದ ಮೂಲಗಳು ತಿಳಿಸಿವೆ.

### ದ್ವೇಷ ಭಾಷಣ ವ್ಯಾಖ್ಯಾನಕ್ಕೆ ಆಕ್ಷೇಪ

'ಮಸೂದೆಯಲ್ಲಿ ದ್ವೇಷ ಭಾಷಣದ ವ್ಯಾಖ್ಯಾನದಲ್ಲಿ ಪೂರ್ವಗ್ರಹದಿಂದ ಧರ್ಮ, ಜಾತಿ, ಜನಾಂಗ, ಲಿಂಗ, ಜನ್ಮಸ್ಥಳ ಅಥವಾ ಅಂಗವಿಕಲತೆಗೆ ಸಂಬಂಧಿಸಿದಂತೆ ವ್ಯಕ್ತಿ ಅಥವಾ ಗುಂಪಿನ ವಿರುದ್ಧ ಹಾನಿ ಅಥವಾ ಸಾಮರಸ್ಯಕ್ಕೆ ಧಕ್ಕೆ ತರುವ ಅಭಿವ್ಯಕ್ತಿಯನ್ನು ದ್ವೇಷ ಭಾಷಣ ಎಂದು ವ್ಯಾಖ್ಯಾನಿಸಲಾಗಿದೆ. ದ್ವೇಷ ಭಾಷಣ ಮಾಡಿದ ವ್ಯಕ್ತಿಯು ಯಾವುದೇ ಸಂಸ್ಥೆಯ ಜವಾಬ್ದಾರಿಯುತ ಸ್ಥಾನದಲ್ಲಿದ್ದರೆ ಅವನ ಹೇಳಿಕೆ ಆಧರಿಸಿ ಇಡೀ ಸಂಸ್ಥೆಯನ್ನು ಹೊಣೆ ಮಾಡುವ ಅಂಶವೂ ಮಸೂದೆಯಲ್ಲಿದೆ' ಎಂದೂ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ಗಳು ನೀಡಿರುವ ತೀರ್ಪುಗಳನ್ನು ಉಲ್ಲೇಖಿಸಿ ರಾಜ್ಯಪಾಲರು ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ.


'ಮಸೂದೆಯಲ್ಲಿ ದ್ವೇಷ ಭಾಷಣದ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಮಸೂದೆ ರೂಪಿಸುವ ಮೊದಲು ಸಮಾಜದ, ಸಾರ್ವಜನಿಕರ ಜೊತೆ ಚರ್ಚೆ ನಡೆಸಿಲ್ಲ. ಯಾವುದೇ ಇಲಾಖೆಯ ಜೊತೆ ಚರ್ಚೆ ನಡೆಸಿರುವುದೂ ಕಂಡುಬಂದಿಲ್ಲ. ವಿಧಾನಸಭೆಯಲ್ಲೂ ಚರ್ಚೆ ನಡೆದಿಲ್ಲ. ಅಲ್ಲದೆ, ಈ ಮಸೂದೆಗೆ ಒಪ್ಪಿಗೆ ನೀಡದಂತೆ 40ಕ್ಕೂ ಹೆಚ್ಚು ಮನವಿಗಳು ಬಂದಿವೆ' ಎಂದೂ ರಾಜ್ಯಪಾಲರು ಉಲ್ಲೇಖಿಸಿದ್ದಾರೆ.

'ದ್ವೇಷ ಭಾಷಣ ಎಂದು ಗುರುತಿಸಲು ಈಗಾಗಲೇ ಭಾರತೀಯ ದಂಡ ಸಂಹಿತೆಯಲ್ಲಿ ಹಲವು ಸೆಕ್ಷನ್‌ಗಳಿವೆ. ಆದರೆ, ಈ ಮಸೂದೆಯಲ್ಲಿ ಅವುಗಳಲ್ಲಿನ ಶಿಕ್ಷೆ ಮತ್ತು ದಂಡವನ್ನು ಸರ್ಕಾರ ವಿಸ್ತರಿಸಿದೆ. ದ್ವೇಷ ಭಾಷಣ ನಿಯಂತ್ರಿಸಲು ಇಂಟರ್‌ನೆಟ್ ಮೇಲೆ ನಿಯಂತ್ರಣ ಹೊಂದುವ ಅಧಿಕಾರ ಪಡೆಯಲು ಸರ್ಕಾರಕ್ಕೆ ಈ ಮಸೂದೆ ಅವಕಾಶ ಕಲ್ಪಿಸಲಿದೆ' ಎಂದು ಅವರು ಹೇಳಿದ್ದಾರೆ.

'ಮಸೂದೆಯಲ್ಲಿ ಪೊಲೀಸ್ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಈ ಅಪರಾಧಗಳು ವ್ಯಕ್ತಿಗಳಿಗೆ ಮಾತ್ರವಲ್ಲದೆ ಸಂಸ್ಥೆಗಳಿಗೂ ಅನ್ವಯಿಸುತ್ತವೆ ಮತ್ತು ಯಾವುದೇ ನೋಂದಾಯಿತ, ನೋಂದಾಯಿತ-ವಲ್ಲದ ಸಂಸ್ಥೆಯು ಆಯೋಜಿಸುವ ರ‍್ಯಾಲಿ ಅಥವಾ ಕಾರ್ಯಕ್ರಮದಲ್ಲಿ ಅಂತಹ ಅಪರಾಧ ನಡೆದರೆ, ಅಂತಹ ಸಂಸ್ಥೆಗಳ ನಾಯಕರಿಗೂ ಶಿಕ್ಷೆಯಾಗುತ್ತದೆ. ಆದ್ದರಿಂದ, ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಈ ಕಾಯ್ದೆಯನ್ನು ದುರುಪಯೋಗಪಡಿಸಿಕೊಳ್ಳಬಹುದೆಂಬ ಆತಂಕವಿದೆ' ಎಂದೂ ಉಲ್ಲೇಖಿಸಿದ್ದಾರೆ.

Publication Date
04/02/2026

Presented by ಪ್ರಜಾವಾಣಿ



ಭಾರತ ಮತ್ತು ಅಮೆರಿಕದ ನಡುವೆ ಸುಂಕ ಇಳಿಕೆಯ ಒಪ್ಪಂದ

# ಹಲವು ಅನುಕೂಲ ಹೆಚ್ಚಿದ ಕುತೂಹಲ

ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳ ಮೇಲಿನ ಸುಂಕವನ್ನು ಶೇ 50ರಿಂದ ಶೇ 18ಕ್ಕೆ ಇಳಿಸುವ ಘೋಷಣೆಯನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಡಿದ್ದಾರೆ. ಪ್ರಧಾನಿ ಮೋದಿ ಅವರು ಸುಂಕ ಇಳಿಕೆಯ ಕ್ರಮವನ್ನು ಸ್ವಾಗತಿಸಿ, ದೇಶದ 140 ಕೋಟಿ ಜನರ ಪರವಾಗಿ ಟ್ರಂಪ್ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ. ಕೆಲವು ಉದ್ಯಮ ಸಂಸ್ಥೆಗಳೂ ಇದನ್ನು ಸ್ವಾಗತಿಸಿವೆ. ಆದರೆ, ಈ ಬೆಳವಣಿಗೆಯ ಹಿಂದೆಯೇ ಹಲವು ಪ್ರಶ್ನೆಗಳು ಹುಟ್ಟಿಕೊಂಡಿವೆ. ಮೋದಿ-ಟ್ರಂಪ್ ಮಾತುಕತೆಯಲ್ಲಿ ಯಾವ ಸರಕು/ವ್ಯಾಪಾರ ನಿಯಮಗಳ ಬಗ್ಗೆ ಸಮ್ಮತಿ ಮೂಡಿದೆ ಎನ್ನುವುದು ಇನ್ನಷ್ಟೇ ಬಹಿರಂಗವಾಗಬೇಕಿದೆ

ಪ್ರಜಾವಾಣಿ ವಾರ್ತೆ

### ಸಿಗಲಿದೆಯೇ ಉತ್ತರ?

### ಟ್ರಂಪ್ ಪೋಸ್ಟ್‌ನಲ್ಲಿ ಹೇಳಿದ್ದೇನು?

### ಮೋದಿ ಪೋಸ್ಟ್‌ನಲ್ಲಿ ಏನಿತ್ತು?

### ಅಮೆರಿಕದೊಂದಿಗೆ ಭಾರತದ ಸರಕು ವ್ಯಾಪಾರ

(ಲಕ್ಷ ಕೋಟಿಗಳಲ್ಲಿ) ರಫ್ತು / ಆಮದು / ವ್ಯತ್ಯಾಸ

| ವರ್ಷ | ರಫ್ತು | ಆಮದು | ವ್ಯತ್ಯಾಸ |
|---|---|---|---|
| 2021 | ₹5.27 | ₹3.05 | ₹2.22 |
| 2022 | ₹6.28 | ₹4.04 | ₹2.24 |
| 2023 | ₹6.25 | ₹3.67 | ₹2.58 |
| 2024 | ₹6.76 | ₹3.71 | ₹3.05 |
| 2025 | ₹7.42 | ₹4.01 | ₹3.41 |

### 2025ರಲ್ಲಿ ರಫ್ತು ಶೇ 15.88ರಷ್ಟು ಹೆಚ್ಚಳ

(ಕೋಟಿಗಳಲ್ಲಿ)

| 2024 | ರಫ್ತು | ಆಮದು | ವ್ಯತ್ಯಾಸ |
|---|---|---|---|
| ಆಗಸ್ಟ್ | ₹57,787 | ₹39,742 | ₹18,045 |
| ಸೆಪ್ಟೆಂಬರ್ | ₹55,966 | ₹32,970 | ₹22,996 |
| ಅಕ್ಟೋಬರ್ | ₹62,215 | ₹35,332 | ₹26,883 |
| ನವೆಂಬರ್ | ₹51,357 | ₹34,286 | ₹16,890 |
| ಡಿಸೆಂಬರ್ | ₹63,252 | ₹33,799 | ₹18,045 |

| 2025 | ರಫ್ತು | ಆಮದು | ವ್ಯತ್ಯಾಸ |
|---|---|---|---|
| ಆಗಸ್ಟ್ | ₹61,584 | ₹32,519 | ₹29,065 |
| ಸೆಪ್ಟೆಂಬರ್ | ₹48,923 | ₹35,964 | ₹12,959 |
| ಅಕ್ಟೋಬರ್ | ₹56,579 | ₹40,247 | ₹16,332 |
| ನವೆಂಬರ್ | ₹62,973 | ₹47,417 | ₹15,556 |

ಆಧಾರ: ಪಿಟಿಐ, ರಾಯಿಟರ್ಸ್, ಮಾಧ್ಯಮ ವರದಿಗಳು, ವಾಣಿಜ್ಯ ಸಚಿವಾಲಯ

ಸುಂಕದಿಂದ ಒಪ್ಪಂದದವರೆಗೆ: ಏಪ್ರಿಲ್ 2, 2025 | ಏಪ್ರಿಲ್ 10, 2025 | ಜುಲೈ 31, 2025 | ಆಗಸ್ಟ್ 6, 2025 | ಫೆ.2, 2026

* **ಪಿಎಂಎಫ್ಎಂಇ ರಾಜ್ಯ ಮೊದಲು**

**ಸಂದರ್ಭ: ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣ ಉದ್ದಿಮೆ ಉನ್ನತೀಕರಣ ಯೋಜನೆ (ಪಿಎಂಎಫ್ಎಂಇ) ಅನುಷ್ಠಾನದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಸಾಲ ವಿತರಣೆಯಲ್ಲಿ ಕರ್ನಾಟಕದ ಜೊತೆಗೆ ತಮಿಳುನಾಡು ಕೂಡ ಮೊದಲ ಸ್ಥಾನ ಹಂಚಿಕೊಂಡಿದೆ.**

- ಕರ್ನಾಟಕದಲ್ಲಿ ಪಿಎಂಎಫ್ಎಂಇ ಯೋಜನೆಯ ಅನುಷ್ಠಾನದ ಜವಾಬ್ದಾರಿ ಹೊತ್ತಿರುವ 'ಕರ್ನಾಟಕ ಆಹಾರ ಸಂಸ್ಕರಣೆ ಮತ್ತು ರಫ್ತು ನಿಗಮ'ವು (ಕೆಪೆಕ್) ಈ ಸಾಧನೆ ಮಾಡಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಹೇಳಿದ್ದಾರೆ.
- 2021-22ರಲ್ಲಿ ಶುರುವಾದ ಈ ಯೋಜನೆಯ ಆಡಿ ನೆರವು ಬಯಸಿ ಕೆಪೆಕ್‌ಗೆ ಜನವರಿ ಅಂತ್ಯಕ್ಕೆ 8,734 ಅರ್ಜಿಗಳು ಬಂದಿದ್ದವು. ಈ ಪೈಕಿ 7,872 ಅರ್ಜಿದಾರರಿಗೆ ಸಾಲ ವಿತರಿಸಲಾಗಿದೆ. 2025-26ರ ಆರ್ಥಿಕ ವರ್ಷದಲ್ಲೇ 8.162 ಅರ್ಜಿಗಳನ್ನು ಸ್ವೀಕರಿಸಿ 2,346 ಅರ್ಜಿಗಳಿಗೆ ಸಾಲ ಮಂಜೂರು ಮಾಡಲಾಗಿದೆ. 2,486 ಅರ್ಜಿಗಳು ಬ್ಯಾಂಕುಗಳಲ್ಲಿ ಪರಿಶೀಲನಾ ಹಂತದಲ್ಲಿವೆ. ಯೋಜನೆ ಪ್ರಾರಂಭವಾದ ಐದು ವರ್ಷಗಳಲ್ಲಿ ಇದು ಗರಿಷ್ಠ ಸಾಧನೆ ಎಂದು ಪ್ರಕಟಣೆ ತಿಳಿಸಿದೆ.

## ❖ 'ಅಮೆರಿಕದ ಕೃಷಿ ಉತ್ಪನ್ನ ರಫ್ತು ಹೆಚ್ಚಳ'

**ಸಂದರ್ಭ: ದ್ವಿಪಕ್ಷೀಯ ವ್ಯಾಪಾರ ಒಪ್ಪಂದದಿಂದ ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಬಹುದು. ಈ ಒಪ್ಪಂದವು ರಷ್ಯಾದ ಆಕ್ರಮಣವನ್ನು ಎದುರಿಸಲು ಸಹ ನೆರವಾಗುತ್ತದೆ ಎಂದು ಅಮೆರಿಕದ ಹಿರಿಯ ನಾಯಕರು ಅಭಿಪ್ರಾಯಪಟ್ಟಿದ್ದಾರೆ.**



'ಸಮಗ್ರ ಒಪ್ಪಂದದತ್ತ ಇಟ್ಟಿರುವ ಮೊದಲ ಹೆಜ್ಜೆ'

ನ್ಯೂಯಾರ್ಕ್ (ಪಿಟಿಐ): 'ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದವು ಸಮಗ್ರ ದ್ವಿಪಕ್ಷೀಯ ಒಪ್ಪಂದದತ್ತ ಇಟ್ಟಿರುವ ಮೊದಲ ಹೆಜ್ಜೆ' ಎಂದು ಪ್ರಮುಖ ವಾಣಿಜ್ಯ ಸಂಸ್ಥೆಗಳು ಮತ್ತು ಚಿಂತಕರ ಚಾವಡಿ ಅಭಿಪ್ರಾಯಪಟ್ಟಿವೆ.

'ಈ ಒಪ್ಪಂದವು ಖಾಸಗಿ ವಲಯದ ಸಹಭಾಗಿತ್ವವನ್ನು ಹೆಚ್ಚಿಸಲು ಪೂರಕವಾದ ಮಾರ್ಗವನ್ನು ಸುಗಮಗೊಳಿಸುತ್ತದೆ' ಎಂದು ಹೇಳಿವೆ.

ಸುಜೇನ್ ಕ್ಲಾರ್ಕ್

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಯತ್ನಗಳು ಹಾಗೂ ರಾಯಭಾರಿಗಳಾದ ವಿನಯ್ ಕ್ವಾಟ್ರಾ, ಸೆರ್ಜಿಯೊ ಗೊರ್ ಅವರ ಶ್ರಮ ಶ್ಲಾಘನೀಯ' ಎಂದು ಅಮೆರಿಕದ ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷೆ ಸುಜೇನ್ ಕ್ಲಾರ್ಕ್ ಅವರು ತಿಳಿಸಿದ್ದಾರೆ.

- 'ವಿಶ್ವದ ಅತ್ಯಂತ ಹಳೆಯ ಮತ್ತು ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವು ಅಮೆರಿಕದೊಂದಿಗಿನ ವ್ಯಾಪಾರದ ತೊಡಕುಗಳನ್ನು ನಿವಾರಿಸಲು ಒಪ್ಪಿಕೊಂಡಿರುವುದು ಸಂತೋಷದ ವಿಷಯ' ಎಂದು ಸೆನೆಟ್ ವಿದೇಶಾಂಗ ಸಂಬಂಧಗಳ ಸಮಿತಿ ಅಧ್ಯಕ್ಷ ಸೆನೆಟರ್ ಜಿಮ್ ರಿಶ್ 'ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.
- 'ಭಾರತವು ಅಮೆರಿಕದ ನಿಕಟ ಪಾಲುದಾರ. ಇಂಡೋ-ಪೆಸಿಫಿಕ್ ವಲಯದಲ್ಲಿ ಚೀನಾದ ದುರುದ್ದೇಶಪೂರಿತ ಪ್ರಭಾವವನ್ನು ಎದುರಿಸಲು ಭಾರತ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಹೊಸ ಒಪ್ಪಂದದಡಿ ಅಮೆರಿಕದ ವಸ್ತುಗಳನ್ನು ಖರೀದಿಸುವುದಾಗಿ ಭಾರತವು ಹೇಳಿದೆ. ಇದು ರಷ್ಯಾದ ಆಕ್ರಮಣವನ್ನು ಎದುರಿಸಲು ಮತ್ತು ಆ ದೇಶದಿಂದ ತೈಲ ಖರೀದಿಯನ್ನು ಕಡಿತಗೊಳಿಸುವ ಮೂಲಕ ಉಕ್ರೇನ್ ರಷ್ಯಾ ಯುದ್ಧ ಕೊನೆಗೊಳಿಸಲು ಸಹಾಯ ಮಾಡುತ್ತದೆ' ಎಂದಿದ್ದಾರೆ.
- 'ಕೃಷಿ ಉತ್ಪನ್ನಗಳನ್ನು ಭಾರತದ ಬೃಹತ್ ಮಾರುಕಟ್ಟೆಗೆ ರಫ್ತು ಮಾಡಬಹುದು. ಇದರಿಂದ ಉತ್ಪನ್ನಗಳ ಬೆಲೆ ಹೆಚ್ಚಲಿದೆ. ಗ್ರಾಮೀಣ ಅಮೆರಿಕಕ್ಕೆ ಹಣದ ಹರಿವನ್ನು ಹೆಚ್ಚಿಸುತ್ತದೆ" ಎಂದು ಅಮೆರಿಕದ ಕೃಷಿ ಕಾರ್ಯದರ್ಶಿ ಬ್ರೂಕ್ ರೋಲಿನ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

## ❖ ಮಣಿಪುರ: ಖೇಮಚಂದ್ ನೂತನ ಮುಖ್ಯಮಂತ್ರಿ

**ಸಂದರ್ಭ: ಮಣಿಪುರದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ವೈ. ಖೇಮಚಂದ್ ಸಿಂಗ್ ಅವರು ಮಂಗಳವಾರ ಆಯ್ಕೆಯಾಗಿದ್ದು, ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಕುಕಿ ಸಮುದಾಯದ ಖೇಮಚಂದ್ ಸಿಂಗ್.**


- ಮಹಿಳಾ ನಾಯಕಿ, ಮಾಜಿ ಸಚಿವೆ ನೆಮ್ಚಾ ಕಿಪ್ಗೆನ್ ಅವರು ಉಪ ಮುಖ್ಯಮಂತ್ರಿಯಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಈ ಮೂಲಕ ಈಶಾನ್ಯದ ರಾಜ್ಯದಲ್ಲಿ ಜನರಿಂದ ಚುನಾಯಿತವಾದ ಸರ್ಕಾರ ಮರುಸ್ಥಾಪನೆಗೊಳಿಸುವ ಪ್ರಕ್ರಿಯೆಗೆ ಚಾಲನೆ ಲಭಿಸಿದೆ. ಮಣಿಪುರದಲ್ಲಿ 2025ರ ಫೆಬ್ರುವರಿ 13ರಿಂದ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದೆ.
- ಪಕ್ಷದ ಕೇಂದ್ರ ಕಚೇರಿಯಲ್ಲಿ ಮಂಗಳ ವಾರ ನಡೆದ ಸಭೆಯಲ್ಲಿ ಖೇಮಚಂದ್ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಮಾಡಲಾಯಿತು. ಎನ್‌ಡಿಎ ಮೈತ್ರಿಕೂಟದ ಎಲ್ಲ ಪಕ್ಷಗಳ ಶಾಸಕರ ಸಭೆ ಶೀಘ್ರ ನಡೆಯಲಿದ್ದು. ಅಲ್ಲಿ ಖೇಮಚಂದ್ ಮತ್ತು ಕಿಪ್ಗೆನ್ ಅವರ ಹೆಸರುಗಳನ್ನು ಅನುಮೋದಿಸುವ ನಿರೀಕ್ಷೆಯಿದೆ.
- ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೇಂದ್ರದ ವೀಕ್ಷಕ ತರುಣ್ ಚುಘ್ ಮತ್ತು ಈಶಾನ್ಯ ರಾಜ್ಯಗಳ ಉಸ್ತುವಾರಿ ಸಂಬಿತ್ ಪಾತ್ರಾ ಸೇರಿದಂತೆ ಇತರರು ಭಾಗವಹಿಸಿದರು.
- ಜನರಿಂದ ಆಯ್ಕೆಯಾಗಿರುವ ಸರ್ಕಾರವನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ಬಿಜೆಪಿ ಹೈಕಮಾಂಡ್. ಮೈತೇಯಿ, ಕುಕಿ ಸಮುದಾಯದ ಶಾಸಕರು, ಮಿತ್ರ ಪಕ್ಷಗಳಾದ ಎನ್‌ಪಿಎಫ್ ಹಾಗೂ ಎನ್‌ಪಿಪಿ ಪಕ್ಷಗಳ ಶಾಸಕರ ಜತೆ ಹಲವು ಸುತ್ತಿನ ಮಾತುಕತೆ ನಡೆಸಿದೆ.

- 60 ಸದಸ್ಯಬಲದ ಮಣಿಪುರ ವಿಧಾನಸಭೆಯಲ್ಲಿ ಸದ್ಯ ಬಿಜೆಪಿಯ 37 ಶಾಸಕರಿದ್ದಾರೆ. 2022ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 32 ಸ್ಥಾನಗಳನ್ನು ಗೆದ್ದಿತ್ತು. ಆರು ಸ್ಥಾನಗಳನ್ನು ಗೆದ್ದಿರುವ ಜೆಡಿಯುನ ಐವರು ಶಾಸಕರು ಆ ಬಳಿಕ ಬಿಜೆಪಿಗೆ ಪಕ್ಷಾಂತರಗೊಂಡರು.
- ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಕಳೆದ ವರ್ಷ ಫೆ.9ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅದಾದ ನಾಲ್ಕು ದಿನಗಳ ನಂತರ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಲಾಗಿದೆ. ಅಲ್ಲದೆ, ರಾಜ್ಯ ವಿಧಾನಸಭೆಯನ್ನು ತಾತ್ಕಾಲಿಕವಾಗಿ ಅಮಾನತಿನಲ್ಲಿರಿಸಲಾಗಿದೆ. ರಾಷ್ಟ್ರಪತಿ ಆಳ್ವಿಕೆಯ ಎರಡನೇ ಅವಧಿ ಫೆಬ್ರುವರಿ 12ರಂದು ಕೊನೆಗೊಳ್ಳಲಿದೆ.
- ಮಣಿಪುರದಲ್ಲಿ ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯಗಳ ನಡುವಿನ ಜನಾಂಗೀಯ ಸಂಘರ್ಷಕ್ಕೆ 2023ರ ಮೇ ತಿಂಗಳಿನಿಂದ ಇದುವರೆಗೆ 260 ಮಂದಿ ಬಲಿಯಾಗಿದ್ದಾರೆ. ಸಂಘರ್ಷದಿಂದ ಸಾವಿರಾರು ಮಂದಿ ನಿರ್ವಸಿತರಾಗಿದ್ದಾರೆ.


IAS/KAS Academy



# ಎಪ್‌ಸ್ಟೈನ್ ಫೈಲ್ಸ್: ಬಗೆದಷ್ಟೂ ಆಳ



ಅಮೆರಿಕದ ಜೆಫ್ರಿ ಎಪ್‌ಸ್ಟೈನ್ ಎಂಬ ಲೈಂಗಿಕ ಅಪರಾಧಿಯ ಕಥೆ ಜಾಗತಿಕ ಮಟ್ಟದಲ್ಲಿ ತಲ್ಲಣ ಉಂಟುಮಾಡಿದೆ. ಡೊನಾಲ್ಡ್ ಟ್ರಂಪ್, ನರೇಂದ್ರ ಮೋದಿ, ಬಿಲ್ ಕ್ಲಿಂಟನ್ ಅವರಂಥ ಪ್ರಭಾವಿ ರಾಜಕಾರಣಿಗಳು, ಎಲಾನ್ ಮಸ್ಕ್, ಬಿಲ್ ಗೇಟ್ಸ್, ಅನಿಲ್ ಅಂಬಾನಿ ಅವರಂಥ ಉದ್ಯಮಿಗಳು, ಬ್ರಿಟಿಷ್ ರಾಜಮನೆತನದ ಆಂಡ್ರ್ಯೂ ಮ್ಯಾನ್‌ಹಟನ್–ವಿಂಡ್ಸರ್, ಅಮೆರಿಕದ ಆತ್ಮಸಾಕ್ಷಿಯಂತಿದ್ದ ಭಾಷಾಶಾಸ್ತ್ರಜ್ಞ ನೋಮ್ ಚಾಮ್‌ಸ್ಕಿ ಅವರ ಹೆಸರುಗಳು ಎಪ್‌ಸ್ಟೈನ್ ಫೈಲ್ಸ್‌ನಲ್ಲಿವೆ. ಅಮೆರಿಕದ ನ್ಯಾಯಾಂಗ ಇಲಾಖೆ ಬಿಡುಗಡೆ ಮಾಡಿರುವ ಈ ದಾಖಲೆಗಳಲ್ಲಿ ಹೆಸರು ಪ್ರಸ್ತಾಪ ಆಗಿರುವವರೆಲ್ಲರೂ ತಪ್ಪು ಮಾಡಿದವರು ಎಂದು ಹೇಳಲಾಗದು. ಆದರೆ, ಹಲವರ ಹೆಸರುಗಳಿಗೆ ಕಳಂಕ ಅಂಟಿದೆ. ಕೆಲವರ ವಿರುದ್ಧದ ಆರೋಪಗಳು ಸುಳ್ಳು ಎನ್ನುವ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ



## ಲೈಂಗಿಕ ಅಪರಾಧಿಯ ಸಂಪರ್ಕದಲ್ಲಿ ಜಗತ್ತಿನ ಖ್ಯಾತನಾಮರು, ಪ್ರಭಾವಿಗಳು

ಪ್ರಜಾವಾಣಿ ವಾರ್ತೆ

ಬಗೆದಷ್ಟೂ ಆಳ, ಮೊಗೆದಷ್ಟೂ ಕೆಸರು. ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್‌ನ ಸಂಪರ್ಕದಲ್ಲಿ ಇದ್ದಂಥವರ ಪಟ್ಟಿ ಬೆಳೆಯುತ್ತಲೇ ಇದೆ. ಜನವರಿ 30ರಂದು ಅಮೆರಿಕದ ನ್ಯಾಯಾಂಗ ಇಲಾಖೆ ಬಿಡುಗಡೆ ಮಾಡಿರುವ 30 ಲಕ್ಷ ಪುಟಗಳ ದಾಖಲೆಗಳು, 1.8 ಲಕ್ಷ ಚಿತ್ರಗಳು ಮತ್ತು ಎರಡು ಸಾವಿರ ವಿಡಿಯೊಗಳು ಜಗತ್ತಿನ ಹಲವು ದೇಶಗಳ, ಹಲವು ಕ್ಷೇತ್ರಗಳ ಪ್ರಭಾವಿಗಳ ಹೆಸರುಗಳನ್ನು ಒಳಗೊಂಡಿವೆ. ಒಬ್ಬೊಬ್ಬರ ಹೆಸರು ಹೊರಗೆ ಬಂದಾಗಲೂ ಸಂಚಲನ ಉಂಟಾಗುತ್ತಿದೆ. ಅದಕ್ಕೆ ಕಾರಣ ಜೆಫ್ರಿ ಎಪ್‌ಸ್ಟೈನ್‌ನ ಹೀನ ಚಾರಿತ್ರ್ಯ ಮತ್ತು ಅವನು ಎಸಗಿದ ಅಪರಾಧಗಳ ಸ್ವರೂಪ.

ನ್ಯೂಯಾರ್ಕ್‌ನಲ್ಲಿ ಕೆಳಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದ ಎಪ್‌ಸ್ಟೈನ್, ಪದವಿ ಶಿಕ್ಷಣ ಪೂರೈಸದಿದ್ದರೂ ಮ್ಯಾನ್‌ಹಟನ್‌ನ ಪ್ರತಿಷ್ಠಿತ ಖಾಸಗಿ ಶಾಲೆಯೊಂದರಲ್ಲಿ ಗಣಿತ ಮತ್ತು ಭೌತಶಾಸ್ತ್ರ ಕಲಿಸುವ ಶಿಕ್ಷಕನಾಗಿದ್ದ. ಶ್ರೀಮಂತರ ಮಕ್ಕಳ ಶಾಲೆ ಅದು. ಅಲ್ಲಿನ ಪರಿಚಯಗಳಿಂದ ಹಣಕಾಸು ಸಂಸ್ಥೆಯೊಂದರಲ್ಲಿ ಪಾಲುದಾರನಾಗಿ ಸೇರಿದ. ಅಲ್ಪ ಅವಧಿಯಲ್ಲೇ ಅಪಾರ ಹಣ ಗಳಿಸಿದ. ತನ್ನ ಬೆಳವಣಿಗೆಯ ಹಂತದಲ್ಲಿ ಅವನು ಕಾನೂನು ಮತ್ತು ನೈತಿಕತೆಯ ಎಲ್ಲೆಗಳನ್ನು ಧಿಕ್ಕರಿಸುತ್ತಲೇ ಸಾಗಿದ. ಶ್ರೀಮಂತನಾದ ನಂತರ ಫ್ಲಾರಿಡಾದ ಪಾಮ್ ಬೀಚ್‌ನಲ್ಲಿ, ಮೆಕ್ಸಿಕೊ, ನ್ಯೂಯಾರ್ಕ್‌ಗಳಲ್ಲಿ ಬಂಗಲೆಗಳನ್ನು ಖರೀದಿಸಿದ. ಅವುಗಳಲ್ಲಿ ರಾಜಕಾರಣಿಗಳು, ಉದ್ಯಮಿಗಳು, ಶ್ರೀಮಂತರಿಗೆ ಅದ್ದೂರಿ ಪಾರ್ಟಿಗಳನ್ನು (ಔತಣಕೂಟ) ಸಂಘಟಿಸುವುದಕ್ಕೆ ಆರಂಭಿಸಿ, ಅದರ ಮೂಲಕ ಪ್ರಭಾವಿಗಳ ಸಂಪರ್ಕ ಗಳಿಸಿದ. ದಿನಕಳೆದಂತೆ ಆತನ ಪಾರ್ಟಿಗಳು ಜನಪ್ರಿಯವಾದವು. ದೇಶವಿದೇಶಗಳ ಖ್ಯಾತನಾಮರೂ ಅವನ ಸಂಪರ್ಕಕ್ಕೆ ಬಂದರು. 'ನನಗೆ ಎಪ್‌ಸ್ಟೈನ್ 15 ವರ್ಷಗಳಿಂದ ಗೊತ್ತು. ಭಯಂಕರ ಆಸಾಮಿ. ಆತನ ಜತೆಗಿರುವುದು ಖುಷಿ ನೀಡುತ್ತದೆ. ನನ್ನಂತೆಯೇ ಆತನೂ ಸುಂದರ ಯುವತಿಯರನ್ನು ಇಷ್ಟಪಡುತ್ತಾನೆ' ಎಂದು ಡೊನಾಲ್ಡ್ ಟ್ರಂಪ್ 2002ರಲ್ಲಿ ಹೇಳಿದ್ದರು.

ಆದರೆ, ಎಪ್‌ಸ್ಟೈನ್‌ನ ನಿಜವಾದ ಮುಖ ಹೊರಬರಲು ಹೆಚ್ಚು ಕಾಲ ಬೇಕಾಗಲಿಲ್ಲ. ಅವನು ತನ್ನ ಕಾಮತೃಷೆಗೆ ಅನೇಕ ಬಾಲಕಿಯರನ್ನು ಬಳಸಿಕೊಂಡಿದ್ದರ ಬಗ್ಗೆ ವರದಿಗಳು ಬಂದವು. ಅದಕ್ಕಿಂತಲೂ ಮುಖ್ಯವಾಗಿ ಅನೇಕ ಬಾಲಕಿಯರನ್ನು, ಮಹಿಳೆಯರನ್ನು ಕಳ್ಳಸಾಗಣೆ ಮಾಡಿ, ಅವರನ್ನು ಲೈಂಗಿಕ ಕಾರ್ಯಕರ್ತೆಯರನ್ನಾಗಿ ಬಳಸಿದ್ದಾನೆ, ಅವರ ಮೂಲಕ ವೇಶ್ಯಾವಾಟಿಕೆ ಮಾಡಿದ್ದಾನೆ ಎನ್ನುವ ಆಘಾತಕಾರಿ ವಿಚಾರಗಳು ಹೊರಬಂದವು.

2005ರಲ್ಲಿ ಲೈಂಗಿಕ ಅಪರಾಧಗಳಿಗಾಗಿ ಎಪ್‌ಸ್ಟೈನ್ ಮೊದಲ ಬಾರಿಗೆ ಬಂಧನಕ್ಕೊಳಗಾದ. 2008ರಲ್ಲಿ ಅವನ ವಿರುದ್ಧದ ಆರೋಪಗಳು ಸಾಬೀತಾಗುತ್ತವೆ. ಆದರೂ ಜೈಲು ಶಿಕ್ಷೆಯಿಂದ ಬಚಾವಾದ. ಆದರೆ, ಬಾಲಕಿಯರ ಕಳ್ಳಸಾಗಣೆ ಮತ್ತು ಅವರ ಮೇಲೆ ಲೈಂಗಿಕ ದೌರ್ಜನ್ಯದ ಆರೋಪದಲ್ಲಿ 2019ರಲ್ಲಿ ಜೈಲು ಸೇರಿ, ವಿಚಾರಣೆಗೆ ಮುನ್ನವೇ ಜೈಲಿನಲ್ಲೇ ಆತ್ಮಹತ್ಯೆ ಮಾಡಿಕೊಂಡ. ಅವನ ಐಫೋನ್, ಹಾರ್ಡ್‌ಡಿಸ್ಕ್ ಮತ್ತು ಇ–ಮೇಲ್‌ನಲ್ಲಿದ್ದ ಬೃಹತ್ ಪ್ರಮಾಣದ (300 ಗಿಗಾಬೈಟ್‌ಗೂ ಹೆಚ್ಚು) ದಾಖಲೆಗಳು ಎಪ್‌ಸ್ಟೈನ್ ಫೈಲ್ಸ್ ಎಂದು ಹೆಸರು ಪಡೆದವು. ಅವುಗಳನ್ನು ಬಹಿರಂಗಪಡಿಸಬೇಕು ಎನ್ನುವ ಕೂಗು ಕೇಳಿಬಂತು. 2024ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿಯೂ ಪ್ರಸ್ತಾಪವಾಯಿತು. ಈ ಫೈಲ್ಸ್ ಅನ್ನು ಬಹಿರಂಗಪಡಿಸುವುದಕ್ಕಾಗಿಯೇ 'ಎಪ್‌ಸ್ಟೈನ್ ಫೈಲ್ಸ್ ಪಾರದರ್ಶಕ ಕಾಯ್ದೆ' (2025ರ ನವೆಂಬರ್) ರೂಪಿಸಲಾಯಿತು. ಆನಂತರ ಹಂತಹಂತವಾಗಿ ಫೈಲ್ಸ್ ಅನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇನ್ನೂ ಅನೇಕ ದಾಖಲೆಗಳು ಬಿಡುಗಡೆಯಾಗದೇ ಉಳಿದಿವೆ ಎನ್ನಲಾಗುತ್ತಿದೆ. ಬಿಡುಗಡೆಯಾಗಿರುವ ದಾಖಲೆಗಳು ಅಮೆರಿಕದ ನ್ಯಾಯಾಂಗ ಇಲಾಖೆ ವೆಬ್‌ಸೈಟ್‌ನಲ್ಲಿ ಲಭ್ಯವಿವೆ.

ಈ ದಾಖಲೆಗಳಲ್ಲಿ ಅನೇಕರ ಹೆಸರು ಉಲ್ಲೇಖವಾಗಿದ್ದು, ಅವರೆಲ್ಲರೂ ತಪ್ಪಿತಸ್ಥರು ಎನ್ನಲಾಗುವುದಿಲ್ಲ. ಹಲವರ ಹೆಸರು ಅಲ್ಲಿ ಹೇಗೆ ಮತ್ತು ಏಕೆ ಪ್ರಸ್ತಾಪವಾಗಿದೆ ಎನ್ನುವುದೂ ಗೊತ್ತಿಲ್ಲ. ಕೆಲವರು ಎಪ್‌ಸ್ಟೈನ್ ಜತೆಗಿನ ನಂಟನ್ನು ನಿರಾಕರಿಸಿದ್ದು, ತಾವು ಏನೂ ತಪ್ಪು ಮಾಡಿಲ್ಲ ಎಂದಿದ್ದಾರೆ. ಹಲವರು ಎಪ್‌ಸ್ಟೈನ್ ಜತೆಗೆ ಇರುವ ಚಿತ್ರಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಹೆಸರುಗಳ ಜತೆಗೆ ಜಾಗತಿಕ ರಾಜಕೀಯ, ವ್ಯವಹಾರಗಳ ಬಗ್ಗೆಯೂ ಚರ್ಚೆಗಳು ನಡೆದಿರುವುದನ್ನು ದಾಖಲೆಗಳು ಹೇಳುತ್ತಿವೆ. ಹಲವು ಕಾರಣಗಳಿಗೆ ಹೆಸರುಗಳು ಪ್ರಸ್ತಾಪ ವಾಗಿರುವ ಸಾಧ್ಯತೆ ಇದೆ. ಆದರೆ, ಎಪ್‌ಸ್ಟೈನ್ ಫೈಲ್ಸ್‌ನಿಂದ ಅನೇಕರ ಹೆಸರಿಗೆ ಕಳಂಕ ಅಂಟಿರುವುದಂತೂ ಸತ್ಯ.

> ಜಾಗತಿಕ ರಾಜಕಾರಣ, ವ್ಯಾಪಾರ, ಕಾರ್ಪೊರೇಟ್ ಜಾಲದ ಕೊಂಡಿಯಾಗಿ ಎಪ್‌ಸ್ಟೈನ್ ಕಾರ್ಯ ನಿರ್ವಹಿಸುತ್ತಿದ್ದ

ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಮಹಿಳೆಯೊಂದಿಗೆ ಒಳಉಡುಪಿನಲ್ಲಿರುವ ಚಿತ್ರ ಬಹಿರಂಗಗೊಂಡಿದ್ದರಿಂದ ಇಂಗ್ಲೆಂಡ್‌ನ ಹೌಸ್ ಆಫ್ ಲಾರ್ಡ್ಸ್ (ಮೇಲ್ಮನೆ) ಸದಸ್ಯ ಸ್ಥಾನಕ್ಕೆ ಪೀಟರ್ ಮ್ಯಾಂಡೆಲ್‌ಸನ್ ರಾಜೀನಾಮೆ ನೀಡಿದರೆ, ಮಹಿಳೆಯೊಂದಿಗೆ ಅನುಚಿತ ಸ್ಥಿತಿಯಲ್ಲಿರುವ ಚಿತ್ರ ಹೊರಗೆ ಬಂದಿದ್ದರಿಂದ ಬ್ರಿಟನ್‌ನ ಬಕಿಂಗ್‌ಹ್ಯಾಮ್ ಅರಮನೆಯಿಂದ ಆ್ಯಂಡ್ರೂ ಮೌಂಟ್‌ಬ್ಯಾಟನ್ ವಿಂಡ್ಸರ್ ಅವರನ್ನು ಹೊರಹಾಕಲಾಗಿದೆ. ಎಪ್‌ಸ್ಟೈನ್‌ನೊಂದಿಗೆ ಮಹಿಳೆಯರ ಬಗ್ಗೆ ಚಾಟ್ ಮಾಡಿದ್ದಕ್ಕೆ ಸ್ಲೊವಾಕಿಯಾದ ವಿದೇಶಾಂಗ ಸಚಿವ ಮೀರೊಸ್ಲಾವ್ ಲಾಜಾಕ್ ಪದವಿ ತೊರೆದಿದ್ದಾರೆ.

**ಫೈಲ್ಸ್‌ನಲ್ಲಿ ಯಾರ್‍ಯಾರು:** ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್, ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್, ನಾರ್ವೆಯ ನೊಬೆಲ್ ಸಮಿತಿ ಮಾಜಿ ಅಧ್ಯಕ್ಷ ತೂರಬ್‌ಯರ್ನ್ ಯಾಕ್‌ಲ್ಯಂಡ್, ಉದ್ಯಮಿ ಸ್ಟೀವ್ ಟಿಶ್, ಮೈಕೆಲ್ ಜಾಕ್ಸನ್, ಗೂಗಲ್ ಸಹ ಸಂಸ್ಥಾಪಕ ಸರ್ಗೆ ಬ್ರಿನ್, ಪತ್ರಕರ್ತೆ ಕೇಟಿ ಕೊರಿಕ್, ನಿರ್ದೇಶಕರಾದ ವೂಡಿ ಅಲೆನ್, ಮೀರಾ ನಾಯರ್, ಅನುರಾಗ್ ಕಶ್ಯಪ್, ಟ್ರಂಪ್ ಆಪ್ತ ಸ್ಟೀವ್ ಬ್ಯಾನನ್, ಲೇಖಕ ದೀಪಕ್ ಚೋಪ್ರಾ ಹೀಗೆ ದೇಶವಿದೇಶಗಳ ಖ್ಯಾತನಾಮರಿದ್ದಾರೆ.

ಆಧಾರ: ಸಿಎನ್‌ಎನ್, ಬಿಬಿಸಿ, ಮಾಧ್ಯಮ ವರದಿಗಳು, ಅಮೆರಿಕದ ನ್ಯಾಯಾಂಗ ಇಲಾಖೆಯ ದಾಖಲೆಗಳು

## ಮೋದಿ, ಅನಿಲ್ ಅಂಬಾನಿ, ಹರ್ದೀಪ್ ಸಿಂಗ್ ಪುರಿ ಹೆಸರು

ಅಮೆರಿಕ ನ್ಯಾಯಾಂಗ ಇಲಾಖೆ ಬಿಡುಗಡೆ ಮಾಡಿರುವ ದಾಖಲೆಗಳಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಮತ್ತು ಉದ್ಯಮಿ ಅನಿಲ್ ಅಂಬಾನಿ ಅವರ ಹೆಸರುಗಳೂ ಪ್ರಸ್ತಾಪವಾಗಿವೆ.

ಹರ್ದೀಪ್ ಸಿಂಗ್ ಪುರಿ ಮತ್ತು ಅನಿಲ್ ಅಂಬಾನಿ ಅವರು ಎಪ್‌ಸ್ಟೈನ್‌ನೊಂದಿಗೆ ನೇರವಾಗಿ ಸಂಪರ್ಕ ಹೊಂದಿದ್ದರು ಎಂಬುದನ್ನು ದಾಖಲೆಗಳು ಹೇಳುತ್ತವೆ. ಸಿಂಗ್ ಅವರು ಎಪ್‌ಸ್ಟೈನ್‌ಗೆ ಇಮೇಲ್ ಮಾಡಿರುವುದು, ಅವನ ಮನೆಗೆ ಭೇಟಿ ನೀಡಿರುವುದು, ಅನಿಲ್ ಅಂಬಾನಿ ಅವರು ಸಂದೇಶ ಕಳುಹಿಸಿರುವುದು, ಅಮೆರಿಕದಲ್ಲಿ ಭೇಟಿ ಮಾಡಿದ ವಿವರಗಳೂ ದಾಖಲೆಯಲ್ಲಿವೆ. ಅನಿಲ್ ಅಂಬಾನಿ ಮತ್ತು ಎಪ್‌ಸ್ಟೈನ್ ನಡುವೆ ನಡೆದಿದ್ದ ಸಂಭಾಷಣೆಯಲ್ಲಿ ಪ್ರಧಾನಿ ಮೋದಿ ಅವರ ಹೆಸರು ಪ್ರಸ್ತಾಪವಾಗುತ್ತದೆ.

## ಮೋದಿ ಪರ ಅನಿಲ್ ಅಂಬಾನಿ ಮಾತು



ಅನಿಲ್ ಅಂಬಾನಿ

ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ ಅವರು ಎಪ್‌ಸ್ಟೈನ್‌ನೊಂದಿಗೆ 2017ರಿಂದ 2019ರವರೆಗೂ ಸಂಪರ್ಕದಲ್ಲಿದ್ದರು ಎಂಬುದನ್ನು ದಾಖಲೆಗಳು ಹೇಳುತ್ತವೆ. ಪ್ರಧಾನಿ ಮೋದಿ ಅವರ ಅಮೆರಿಕ ಭೇಟಿ ಸೇರಿದಂತೆ ಹಲವು ವಿಚಾರಗಳ ನಡುವೆ ಇಬ್ಬರೂ ಇಮೇಲ್, ಮೊಬೈಲ್ ಸಂದೇಶಗಳ (ಐಮೆಸೇಜಸ್) ಮೂಲಕ ಮಾತುಕತೆ ನಡೆಸಿದ್ದರೆ, 2019ರ ಲೋಕಸಭಾ ಚುನಾವಣೆ ನಡೆಯುತ್ತಿದ್ದ ಸಮಯದಲ್ಲಿ ಇಬ್ಬರೂ ಭೇಟಿಯಾದ್ದಾರೆ.

2017ರ ಮಾರ್ಚ್ 16ರಂದು ಅಂಬಾನಿ ಅವರು ಎಪ್‌ಸ್ಟೈನ್‌ಗೆ, 'ಡೊನಾಲ್ಡ್ ಟ್ರಂಪ್ ಆಪ್ತ, ಶ್ವೇತಭವನದ ಹಿರಿಯ ಅಧಿಕಾರಿಯಾಗಿದ್ದ ಸ್ಟೀವ್ ಬಾನನ್ ಸೇರಿದಂತೆ ಟ್ರಂಪ್ ವಲಯದಲ್ಲಿರುವ ಪ್ರಮುಖ ನಾಯಕರನ್ನು ಸಂಪರ್ಕಿಸಲು 'ನಾಯಕತ್ವ'ವು ಸಹಾಯ ಕೇಳುತ್ತಿದೆ' ಎಂದು ಅಂಬಾನಿ ಐಮೆಸೇಜ್ ಕಳುಹಿಸಿದ್ದರು. ಟ್ರಂಪ್ ಅವರು ಮೊದಲ ಬಾರಿಗೆ ಅಧ್ಯಕ್ಷರಾಗಿ ಎರಡು ತಿಂಗಳ ಬಳಿಕ ಈ ಮಾತುಕತೆ ನಡೆದಿತ್ತು.



ಮೋದಿ

ಎರಡು ವಾರದ ನಂತರ, ಮಾರ್ಚ್ 29ರಂದು ಮತ್ತೆ ಎಪ್‌ಸ್ಟೈನ್‌ಗೆ ಸಂದೇಶ ಕಳುಹಿಸಿದ್ದ ಅಂಬಾನಿ, ಪ್ರಧಾನಿ ಮೋದಿ ಅವರ ಅಮೆರಿಕ ಭೇಟಿಯ ದಿನಾಂಕ ಮತ್ತು ಸ್ಥಳಗಳ ಬಗ್ಗೆ ವಿಚಾರಿಸಿದ್ದರು.

ಜುಲೈ 5, 6ರಂದು ಮೋದಿ ಅವರ ಇಸ್ರೇಲ್ ಭೇಟಿಯನ್ನು ಪ್ರಸ್ತಾಪಿಸಿದ್ದ ಅವರು, 7 ಮತ್ತು 8 ರಂದು ಜಿ20 ಶೃಂಗಸಭೆಯಲ್ಲಿ ಭಾಗವಹಿಸುವ ಮತ್ತು ಅಲ್ಲಿ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಲಿದ್ದಾರೆ ಎಂದೂ ಹೇಳುತ್ತಾರೆ. ವಾಷಿಂಗ್ಟನ್‌ನಲ್ಲಿ ಮತ್ತೊಂದು ಪ್ರತ್ಯೇಕ ಭೇಟಿ ಆಯೋಜನೆಯಾಗುತ್ತಿರುವ ಬಗ್ಗೆಯೂ ಕೇಳಿದ್ದರು.

ಜುಲೈ 6, 7ರಂದು ಮೋದಿ ಇಸ್ರೇಲ್‌ಗೆ ಭೇಟಿ ನೀಡಿದ್ದರು. ಈ ಭೇಟಿ ಬಳಿಕ ಎಪ್‌ಸ್ಟೈನ್ ಜೇಬರ್ ವೈ ಎಂಬ ವ್ಯಕ್ತಿಗೆ ಮೇಲ್ ಮಾಡಿ, 'ಭಾರತದ ಪ್ರಧಾನಿ ಮೋದಿ ಸಲಹೆ ಪಡೆದರು. ಅಮೆರಿಕ ಅಧ್ಯಕ್ಷರ ಲಾಭಕ್ಕಾಗಿ ಇಸ್ರೇಲ್‌ನಲ್ಲಿ ಕುಣಿದರು, ಹಾಡಿದರು. ಅವರಿಬ್ಬರೂ ಕೆಲವು ವಾರಗಳ ಹಿಂದೆ ಭೇಟಿಯಾಗಿದ್ದರು. ಅದು ಕೆಲಸ ಮಾಡಿತು' ಎಂದು ಹೇಳಿದ್ದ.

ಮೋದಿ–ಟ್ರಂಪ್ ವಾಷಿಂಗ್ಟನ್‌ನಲ್ಲಿ ಜೂನ್ 26ರಂದು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

**ನಿರಾಕರಿಸಿದ ಕೇಂದ್ರ:** ಮೋದಿ ಅವರ ಕುರಿತಾಗಿ ಎಪ್‌ಸ್ಟೈನ್ ದಾಖಲೆಗಳಲ್ಲಿರುವ ಅಂಶಗಳಿಗೆ ಪ್ರತಿಕ್ರಿಯಿಸಿರುವ ವಿದೇಶಾಂಗ ಇಲಾಖೆಯು 2017ರ ಜುಲೈನಲ್ಲಿ ಪ್ರಧಾನಿ ಅವರು ಇಸ್ರೇಲ್ ಅವರಿಗೆ ಭೇಟಿ ನೀಡಿದ್ದು ಬಿಟ್ಟರೆ, ಉಳಿದೆಲ್ಲವೂ ಸುಳ್ಳು ಎಂದು ಸ್ಪಷ್ಟನೆ ನೀಡಿದೆ.

### ಫಲಿತಾಂಶದ ದಿನವೇ ಭೇಟಿ

ಎಪ್‌ಸ್ಟೈನ್ ದಾಖಲೆಗಳಿಗೆ ಸಂಬಂಧಿಸಿದಂತೆ ಚರ್ಚೆಯಾಗುತ್ತಿರುವ ಮತ್ತೊಂದು ವಿಚಾರ–2019ರ ಲೋಕಸಭಾ ಚುನಾವಣೆ ಮತ್ತು ಫಲಿತಾಂಶದ ಹೊತ್ತಿನಲ್ಲಿ ಅನಿಲ್ ಅಂಬಾನಿ ಮತ್ತು ಎಪ್‌ಸ್ಟೈನ್ ನಡೆದ ಸಂಭಾಷಣೆಗಳು ಹಾಗೂ ಭೇಟಿ.

ಚುನಾವಣೆಯಲ್ಲಿ ಗೆದ್ದ ಬಳಿಕ, ಮೋದಿ ಮತ್ತು ಟ್ರಂಪ್ ಆಪ್ತ, ಶ್ವೇತಭವನದ ಕಾರ್ಯತಂತ್ರ ವಿಭಾಗದ ಮುಖ್ಯಸ್ಥ ಸ್ಟೀವ್ ಬ್ಯಾನನ್ ನಡುವೆ ಭೇಟಿ ನಿಗದಿಪಡಿಸಿಕೊಡುವುದಾಗಿ ಎಪ್‌ಸ್ಟೈನ್ ಹೇಳಿದ್ದ. ಮೇ 19ರಂದು ಬ್ಯಾನನ್‌ಗೆ ಐಮೆಸೇಜ್ ಕಳುಹಿಸಿದ್ದ ಆತ 'ನನ್ನನ್ನು ಕಾಣಲು ಮೋದಿ ಅವರು ಯಾರನ್ನೋ ಶುಕ್ರವಾರ (ಮೇ 23) ಕಳುಹಿಸುತ್ತಾರೆ' ಎಂದಿದ್ದ. ಆದರೆ, ವ್ಯಕ್ತಿಯ ಹೆಸರು ಅಲ್ಲಿ ಉಲ್ಲೇಖಿಸಿರಲಿಲ್ಲ. ಮೇ 23ರ ಗುರುವಾರ, ನ್ಯೂಯಾರ್ಕ್‌ನಲ್ಲಿ ಅನಿಲ್ ಅಂಬಾನಿ ಅವರು ಎಪ್‌ಸ್ಟೈನ್‌ನನ್ನು ಭೇಟಿಯಾಗಿದ್ದರು. ಅಂಬಾನಿ ಭೇಟಿ ಬಳಿಕ ಬ್ಯಾನನ್‌ಗೆ ಇಮೇಲ್ ಮಾಡಿದ್ದ ಎಪ್‌ಸ್ಟೈನ್, 'ಮೋದಿ ಭೇಟಿ ನಿಜಕ್ಕೂ ಆಸಕ್ತಿಕರವಾಗಿದೆ. ಅವರು ಭಾರಿ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ವಾಷಿಂಗ್ಟನ್‌ನಲ್ಲಿ ಯಾರೊಬ್ಬರೂ ಅವರೊಂದಿಗೆ ಮಾತನಾಡುವುದಿಲ್ಲ ಎಂದು 'ಅವರ ವ್ಯಕ್ತಿ' ಹೇಳಿದ್ದಾರೆ. ಅವರ ಮುಖ್ಯ ಶತ್ರು ಚೀನಾ. ಮತ್ತು ಆ ಪ್ರದೇಶದಲ್ಲಿರುವ ಅದರ ಮುಖವಾಡ ಪಾಕಿಸ್ತಾನ. 2022ರಲ್ಲಿ ಅವರು ಜಿ20ಯ ಅಧ್ಯಕ್ಷತೆ ವಹಿಸಲಿದ್ದಾರೆ. ಇದು ನಿಮ್ಮ ದೃಷ್ಟಿಕೋನಕ್ಕೆ ಸರಿಯಾಗಿ ಹೊಂದಿಕೆಯಾಗುತ್ತದೆ' ಎಂದು ಹೇಳಿದ್ದ.

ನಂತರ ಅಂಬಾನಿಗೂ ಸಂದೇಶ ಕಳುಹಿಸಿದ್ದ ಆತ, 'ಮೋದಿ ಅವರು ಸ್ಟೀವ್ ಬಾನನ್ ಅವರನ್ನು ಭೇಟಿ ಮಾಡಿ ಮಾಡಿದರೆ ಖುಷಿ ಪಡಬಹುದು. ನೀವೆಲ್ಲರೂ ಚೀನಾದ ಸಮಸ್ಯೆಯನ್ನು ಎದುರಿಸುತ್ತಿದ್ದೀರಿ' ಎಂದು ಹೇಳಿದ್ದ. ಇದಕ್ಕೆ ಅನಿಲ್ ಅಂಬಾನಿ 'ಖಂಡಿತ' ಎಂದು ಪ್ರತಿಕ್ರಿಯಿಸಿದ್ದರು. ಬಳಿಕ ಬ್ಯಾನನ್‌ಗೆ ಸಂದೇಶ ಕಳಿಸಿದ್ದ ಎಪ್‌ಸ್ಟೈನ್ 'ಮೋದಿ ಅವರು ನಮ್ಮ ಜೊತೆಗೆ ಇದ್ದಾರೆ' ಎಂದು ಹೇಳಿದ್ದ.

**ಅನಿಲ್ ಅಂಬಾನಿ ಮೌನ:** ಈ ದಾಖಲೆಗಳಲ್ಲಿ ತಮ್ಮ ಹೆಸರು ಕೇಳಿಬಂದಿರುವ ಬಗ್ಗೆ ಅನಿಲ್ ಅಂಬಾನಿ ಅವರು ಈವರೆಗೂ ಎಲ್ಲೂ ಪ್ರತಿಕ್ರಿಯಿಸಿಲ್ಲ. ಪ್ರಧಾನಿ ಮೋದಿ ಅಥವಾ ಕೇಂದ್ರ ಸರ್ಕಾರದ ಪರವಾಗಿ ಮಾತುಕತೆ ನಡೆಸಲು ಅನಿಲ್ ಅಂಬಾನಿ ಅವರಿಗೆ ಕೇಂದ್ರ ಸರ್ಕಾರ ಸೂಚಿಸಿತ್ತೇ ಎಂಬುದೂ ದೃಢಪಟ್ಟಿಲ್ಲ.

## 3 ಬಾರಿ ಭೇಟಿ ಮಾಡಿದ್ದ ಪುರಿ



ಹರ್ದೀಪ್ ಸಿಂಗ್

ಹಾಲಿ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಹಾಗೂ ಎಪ್‌ಸ್ಟೈನ್ ನಡುವೆ 2014ರಿಂದ ಇಮೇಲ್ ವಿನಿಮಯ ಆಗಿರುವುದನ್ನು ದಾಖಲೆಗಳು ಉಲ್ಲೇಖಿಸಿವೆ. ಎಪ್‌ಸ್ಟೈನ್, ಪುರಿ ಅವರಿಗೆ ಮೇಲ್ ಮಾಡಿ ಲಿಂಕ್ಡ್‌ಇನ್ ತಾಣದ ಸಹ ಸಂಸ್ಥಾಪಕ ರೀಡ್ ಹಾಫ್‌ಮನ್ ಅವರ ಭಾರತ ಭೇಟಿಗೆ ವ್ಯವಸ್ಥೆ ಮಾಡುವ ಬಗ್ಗೆ ಮಾತನಾಡಿದ್ದ.

ನಂತರ ಪುರಿ ಅವರು ಭಾರತದಲ್ಲಿ ಇರುವ ಹೂಡಿಕೆ ಅವಕಾಶಗಳ ಬಗ್ಗೆ ಮತ್ತು ಮೋದಿ ಸರ್ಕಾರದ ಆರ್ಥಿಕ ಯೋಜನೆಗಳ ಬಗ್ಗೆಯೂ ವಿವರಿಸಿದ್ದರು. ಪುರಿ ಅವರು 2015 ಫೆ.4, 2016ರ ಜನವರಿ 6 ಮತ್ತು 2017ರ ಮೇ 19ರಂದು ಮ್ಯಾನ್‌ಹಟನ್‌ನಲ್ಲಿರುವ ಎಪ್‌ಸ್ಟೈನ್‌ನ ಮನೆಯಲ್ಲೇ ಆತನನ್ನು ಭೇಟಿ ಮಾಡಿದ್ದರು.

ದಾಖಲೆಗಳಲ್ಲಿ ತಮ್ಮ ಹೆಸರು ಇರುವ ಬಗ್ಗೆ ಪ್ರತಿಕ್ರಿಯಿಸಿರುವ ಪುರಿ, ನಮ್ಮ ಭೇಟಿ ಹಾಗೂ ಎಪ್‌ಸ್ಟೈನ್‌ನೊಂದಿಗಿನ ಮಾತುಕತೆ ಉದ್ಯಮಕ್ಕೆ ಸಂಬಂಧಿಸಿದ್ದಾಗಿತ್ತು ಎಂದು ಹೇಳಿದ್ದಾರೆ.

ಪದಬ

ಎಡದಿಂದ ಬಲಕ್ಕೆ

- 2.ಅರಸಿಕನ ಹತ್ತಿರವಿರುವ ರಾಜ (3)
- 5.ತಾರೀಕು ಇಲ್ಲಿ ನಮೂದಾಗಿದೆ (3)
- 6.ಬಿಡದಿ ಬಳಿ ಕಾಣಿಸಿದ ಹೆಂಡತಿ (3)
- 7.ಅಲಯದ ಹತ್ತಿರವಿರುವ ವಟವೃಕ್ಷ (2)
- 8.ವನದಲ್ಲಿ ತಿರುಗಿರುವಾಗ ಹೊಸದು ಕಂಡಿದೆ (2)
- 12.ಅಸತ್ಯವಿದು (2)
- 14.ಸ್ವಯಂವರದಲ್ಲಿರುವ ನಾದ! (2)
- 15.ಮಗ ಇಲ್ಲಿದ್ದಾನೆ (3)
- 16.ರಾಜನ ಸಭೆ (3)
- 17.ಚಾಳಿ ಅಥವಾ ಚಟ (3)

ಮೇಲಿಂದ ಕೆಳಕ್ಕೆ

- 1.ದೊಡ್ಡ ಹೊಟ್ಟೆಯುಳ್ಳವನು
- 2.ಯಾವುದೇ ಕಳಂಕ ಇಲ್ಲದ್ದು
- 3.ಹೊಂದಾಣಿಕೆಯನ್ನು ಹೀಗೆನ್ನಿ
- 4.ಒಳ್ಳೆಯ ದಿನ
- 7.ಉದ್ದವಾದ ತೋಳು
- 9.ಬಣ್ಣಗುಂದುವಿಕೆಯನ್ನು ಹೀಗೆನ್ನಿ
- 10.ತನ್ನದೆಂಬ ಭಾವನೆ
- 11.ಕೊನೆಗೆ ವಾಲುತ್ತಾ ಮಾಡಿದ ಮನವಿ
- 13.ಮರಳಿರುವ ತೀರ
- 14.ತನಗೆ ತಾನೇ ಮಾತನಾಡಿ ಕೊಳ್ಳುವು

6305ನೇ

## ❖ ಸೇವಾ ವಲಯದ ಪ್ರಗತಿ ಏರಿಕೆ

**ಸಂದರ್ಭ: 'ದೇಶದ ಸೇವಾ ವಲಯದ ಬೆಳವಣಿಗೆ ಜನವರಿ ತಿಂಗಳಿನಲ್ಲಿ ಎರಡು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ' ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾವರದಿ ತಿಳಿಸಿದೆ.**

- ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು 2025ರ ಡಿಸೆಂಬರ್‌ನಲ್ಲಿ 58 ಆಗಿತ್ತು. ಅದು ಜನವರಿಯಲ್ಲಿ 58.5ಕ್ಕೆ ಏರಿಕೆ ಆಗಿದೆ.
- ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಅದನ್ನು ಬೆಳವಣಿಗೆ ಎಂದು. 50ಕ್ಕಿಂತ ಕೆಳಕ್ಕೆ ಬಂದರೆ ಅದನ್ನು ಕುಸಿತ ಎಂದು ಪರಿಗಣಿಸಲಾಗುತ್ತದೆ.
- 'ಜನವರಿಯಲ್ಲಿ ಸೇವಾ ವಲಯವು ಬೆಳವಣಿಗೆ ದಾಖಲಿಸಿದೆ. ದಕ್ಷಿಣ ಮತ್ತು ಆಗ್ನೇಯ ಏಷ್ಯಾದಿಂದ ಹೆಚ್ಚಿದ ಅಂತರರಾಷ್ಟ್ರೀಯ ಬೇಡಿಕೆ ಸೇರಿದಂತೆ ಹೊಸ ಕಾರ್ಯಾದೇಶಗಳು ಉತ್ಪಾದನೆಯ ಬೆಳವಣಿಗೆಗೆ ಕಾರಣವಾದವು' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ತಿಳಿಸಿದ್ದಾರೆ.
- ದೇಶದಲ್ಲಿನ ಸೇವಾ ಪೂರೈಕೆದಾರರು ಹೊಸ ವ್ಯವಹಾರ ಮತ್ತು ಉತ್ಪಾದನೆಯಲ್ಲಿ ವೇಗದ ಬೆಳವಣಿಗೆ ಕಂಡಿದ್ದಾರೆ. ಇದರಿಂದ ಹೆಚ್ಚುವರಿ ಸಿಬ್ಬಂದಿಯನ್ನು ಕಂಪನಿಗಳು ನೇಮಿಸಿಕೊಂಡವು ಎಂದು ತಿಳಿಸಿದ್ದಾರೆ.

## ❖ 'ರಷ್ಯಾ ತೈಲ ಖರೀದಿ ಇಲ್ಲ: ಭಾರತದಿಂದ ವಾಗ್ದಾನ'

**ಸಂದರ್ಭ: ರಷ್ಯಾದಿಂದ ಇನ್ನು ಮುಂದೆ ತೈಲಖರೀದಿ ಮಾಡುವುದಿಲ್ಲ ಎಂಬುದಾಗಿ ಭಾರತ ಹೇಳಿದೆ. ಜೊತೆಗೆ, ಅಮೆರಿಕದ ವಿವಿಧ ಕ್ಷೇತ್ರಗಳಲ್ಲಿ ಅಂದಾಜು 500 ಶತಕೋಟಿ ಡಾಲರ್ (₹45 ಲಕ್ಷ ಕೋಟಿ) ಹೂಡಿಕೆ ಮಾಡುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಒಪ್ಪಿದ್ದಾರೆ' ಎಂದು ಶ್ವೇತಭವನ ಹೇಳಿದೆ.**


**ಭಾರತವು ಯಾರಿಂದ ಬೇಕಿದ್ದರೂ ತೈಲ ಖರೀದಿಸಬಹುದು: ರಷ್ಯಾ**

**ಮಾಸ್ಕೊ (ಪಿಟಿಐ):** 'ಭಾರತವು ಯಾವುದೇ ದೇಶದಿಂದ ಬೇಕಿದ್ದರೂ ತೈಲ ಖರೀದಿಸಬಹುದು. ಭಾರತಕ್ಕೆ ರಷ್ಯಾ ಮಾತ್ರ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುತ್ತಿಲ್ಲ. ದೇಶವೊಂದು ಯಾರಿಂದ ಬೇಕಿದ್ದರೂ ತೈಲ ಖರೀದಿಸಬಹುದು. ಇದರಲ್ಲಿ ಹೊಸತೇನಿಲ್ಲ' ಎಂದು ರಷ್ಯಾ ಪ್ರತಿಕ್ರಿಯಿಸಿದೆ.

ರಷ್ಯಾದ 'ರಾಷ್ಟ್ರೀಯ ಇಂಧನ ಭದ್ರತಾ ನಿಧಿ' ಸಂಸ್ಥೆಯ ತಜ್ಞರು ಈ ಬಗ್ಗೆ ಪ್ರತಿಕ್ರಿಯಿಸಿ, 'ರಷ್ಯಾದಿಂದ ತೈಲ ಖರೀದಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಲು ಭಾರತಕ್ಕೆ ಸಾಧ್ಯವಿಲ್ಲ. ರಷ್ಯಾವು ಭಾರತಕ್ಕೆ ಪ್ರತಿ ದಿನ 15 ಲಕ್ಷ ಬ್ಯಾರಲ್‌ನಿಂದ 20 ಲಕ್ಷ ಬ್ಯಾರಲ್ ತೈಲ ರಫ್ತು ಮಾಡುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ತೈಲ ರಫ್ತು ಮಾಡಲು ಅಮೆರಿಕಕ್ಕೆ ಸಾಧ್ಯವೇ ಇಲ್ಲ. ಭಾರತದೊಂದಿಗೆ ವ್ಯಾಪಾರ ಒಪ್ಪಂದ ಕುದುರಿಸಿಕೊಂಡು ಗೆದ್ದು ಬಿಟ್ಟೆ ಎಂದು ಟ್ರಂಪ್ ಬೀಗುತ್ತಿದ್ದಾರೆ. ಅಮೆರಿಕದ ಆಗ್ರಹದ ಮೇರೆಗೇ ಈ ಒಪ್ಪಂದ ನಡೆದಿದೆ' ಎಂದರು.

- ಸುದ್ದಿಗಾರರೊಂದಿಗೆ ಮಾತನಾಡಿದ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೋಲಿನ್ ಲೀವಿಟ್, 'ಭಾರತದೊಂದಿ-ಗಿನ ವ್ಯಾಪಾರ ಒಪ್ಪಂದದಿಂದ ಅಮೆರಿಕ ಹಾಗೂ ಅಮರಿಕದ ಜನತೆಗೆ ಭಾರಿ ಪ್ರಯೋಜನವಾಗಲಿದೆ' ಎಂದರು.
- 'ಸಾರಿಗೆ, ಇಂಧನ, ಕೃಷಿ ಉತ್ಪನ್ನ ಸೇರಿ ಹಲವು ಕ್ಷೇತ್ರಗಳಲ್ಲಿ ಭಾರಿ ಹೂಡಿಕೆಗೆ ಪ್ರಧಾನಿ ನರೇಂದ್ರ ಮೋದಿ ಸಮ್ಮತಿಸಿ ದ್ದಾರೆ ಎಂದು ಹೇಳಿದರು.
- ಭಾರತದಿಂದ 'ಅಮೆರಿಕವು ಆಮದು ಮಾಡಿಕೊಳ್ಳುವ ಸರಕುಗಳಿಗೆ ಶೇ18ರಷ್ಟು ಸುಂಕ ವಿಧಿಸಲಾಗು ಇದೆ. ಅಮೆರಿಕದಿಂದ ತಾನು ಆಮದು ಮಾಡಿಕೊಳ್ಳುವ ಸರಕುಗಳಿಗೆ ಭಾರತವು ಯಾವುದೇ ಸುಂಕ ವಿಧಿಸುವುದಿಲ್ಲ. ಹೀಗಾಗಿ, ಈ ವ್ಯಾಪಾರ ಒಪ್ಪಂದದಿಂದ ಅಮೆರಿಕದ ಉದ್ದಿಮೆಗಳು, ಕೆಲಸಗಾರರು ಹಾಗೂ ಗ್ರಾಹಕರಿಗೆ ದೊಡ್ಡಪ್ರಮಾಣದಲ್ಲಿ ಅನುಕೂಲವಾಗಲಿದೆ' ಎಂದು ಲೀವಿಟ್ ಹೇಳಿದರು.

## ❖ ಖೇಮಚಂದ್ ಮಣಿಪುರ ಮುಖ್ಯಮಂತ್ರಿ: ರಾಷ್ಟ್ರಪತಿ ಆಳ್ವಿಕೆ ರದ್ದು

- ಸರ್ಕಾರ ರಚನೆಗೆ ಸಿದ್ಧತೆ ನಡೆಯುತ್ತಿರುವ ಬೆನ್ನಲ್ಲೇ ರಾಜ್ಯದಲ್ಲಿದ್ದ ರಾಷ್ಟ್ರಪತಿ ಆಳ್ವಿಕೆಯನ್ನೂ ಬುಧವಾರ ರದ್ದುಗೊಳಿಸಲಾಗಿದೆ.
- 2025ರ ಫೆಬ್ರುವರಿ 13ರಂದು ಮಣಿಪುರದಲ್ಲಿ ಜಾರಿಗೊಳಿಸಲಾಗಿದ್ದ ರಾಷ್ಟ್ರಪತಿ ಆಳ್ವಿಕೆಯನ್ನು ಸಂವಿಧಾನದ 356ನೇ ವಿಧಿಯ ಷರತ್ತು (2)ರ ಅನ್ವಯ ನೀಡಲಾದ ಹಕ್ಕುಗಳನ್ನು ಚಲಾಯಿಸಿ 2026ರ ಫೆಬ್ರುವರಿ 4ರಂದು ಹಿಂಪಡೆಯುತ್ತಿರುವುದಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಕಟಣೆ ಹೊರಡಿಸಿದ್ದಾರೆ.

## ❖ 2031ರ ಏಷ್ಯಾಕಪ್ ಫುಟ್‌ಬಾಲ್: ಆತಿಥ್ಯಕ್ಕೆ ಭಾರತ ಪೈಪೋಟಿ

**ಸಂದರ್ಭ: ಭಾರತವು 2031ರ ಏಷ್ಯಾ ಕಪ್ ಫುಟಬಾಲ್ ಟೂರ್ನಿಯ ಅತಿಥ್ಯಕ್ಕೆ ಬಿಡ್ ಸಲ್ಲಿಸಿರುವುದನ್ನು ಏಷ್ಯನ್ ಫುಟ್‌ಬಾಲ್ ಒಕ್ಕೂಟ ದೃಢಪಡಿಸಿದೆ. ಭಾರತ ಸೇರಿ ಆರು ದೇಶಗಳು ಅತಿಥ್ಯಕ್ಕೆ ಬಿಡ್ ಸಲ್ಲಿಸಿವೆ.**

- ಬಿಡ್ ಪ್ರಕ್ರಿಯೆಯಿಂದ ಯುನೈಟೆಡ್ ಅರಬ್ ಎಮಿರೇಟ್ಸ್ ಹಿಂದೆಸರಿದಿದೆ. ಭಾರತದ ಜೊತೆಗೆ ಆಸ್ಟ್ರೇಲಿಯಾ, ಇಂಡೋನೇಷ್ಯಾ, ಕೊರಿಯಾ, ಕುವೈತ್ ಪಟ್ಟಿಯಲ್ಲಿವೆ. ಈ ದೇಶಗಳ ಜೊತೆ ಕಿರ್ಗಿಸ್ತಾನ, ತಜಿಕಿಸ್ತಾನ ಮತ್ತು ಉಜ್ಬೆಕಿಸ್ತಾನ ಸಂಯುಕ್ತವಾಗಿ ಆತಿಥ್ಯ ವಹಿಸಲು ಬಿಡ್ ಸಲ್ಲಿಸಿವೆ.
- 2025ರಲ್ಲಿ ಅಖಿಲ ಭಾರತ ಫುಟ್ ಬಾಲ್ ಫೆಡರೇಷನ್, ಈ ಟೂರ್ನಿ ನಡೆಸಲು ಆಸಕ್ತಿ ಪತ್ರ ಸಲ್ಲಿಸಿತ್ತು. ಈ ಪ್ರಯತ್ನಕ್ಕೆ ಸಂಪೂರ್ಣಬೆಂಬಲ ನೀಡುವುದಾಗಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ತಿಳಿಸಿದ್ದರು.
- ಭಾರತ ಹಿಂದೆಂದೂ ಈ ಟೂರ್ನಿಯನ್ನು ಆಯೋಜಿಸಿರಲಿಲ್ಲ. 5 4 2023 2 2027 ಕೂಟಕ್ಕೆ ಬಿಡ್ ಸಲ್ಲಿಸಿದ್ದರೂ, ನಂತರ ಹಿಂದೆಸರಿದಿತ್ತು.

# ಭಾರತಕ್ಕೆ ಮೊದಲ ದಿನ ಎರಡು ಸ್ವರ್ಣ

## ಏಷ್ಯನ್ ಶೂಟಿಂಗ್: ಏರ್ ಪಿಸ್ತೂಲ್ ಚಿನ್ನ ಗೆದ್ದ ಇಶಾ • ಸಾಮ್ರಾಟ್‌ಗೆ ಕಂಚು

ನವದೆಹಲಿ (ಪಿಟಿಐ): ಅಮೋಘ ಲಯ ಪ್ರದರ್ಶಿಸಿದ ಭಾರತದ ಒಲಿಂಪಿಯನ್ ಇಶಾ ಸಿಂಗ್ ಅವರು ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವೈಯಕ್ತಿಕ ವಿಭಾಗದಲ್ಲಿ ಬುಧವಾರ ಚಿನ್ನ ಗೆದ್ದರು. ಜೊತೆಗೆ ತಂಡ ವಿಭಾಗದಲ್ಲೂ ಭಾರತ ಚಿನ್ನಗೆಲ್ಲಲು ನೆರವಾದರು.

ಈ ಚಾಂಪಿಯನ್‌ಷಿಪ್‌ನ ಮೊದಲ ದಿನ, ವಿಶ್ವ ಚಾಂಪಿಯನ್ ಸಾಮ್ರಾಟ್ ರಾಣಾ ಪುರುಷರ ವಿಭಾಗದಲ್ಲಿ ಕಂಚಿನ ಪದಕ ಗೆದ್ದರು. ಪುರುಷರ ಟೀಮ್ ವಿಭಾಗದಲ್ಲಿ ಭಾರತ ಬೆಳ್ಳಿ ಜಯಿಸಿತು.

21 ವರ್ಷ ವಯಸ್ಸಿನ ಇಶಾ ಹಿನ್ನಡೆಯಿಂದ ಚೇತರಿಸಿಕೊಂಡು 239.8 ಸ್ಕೋರ್‌ನೊಡನೆ ಚಿನ್ನ ಗೆದ್ದರು. ತೈವಾನ್‌ನ ಚೆಂಗ್ ಯೆನ್-ಚಿಂಗ್ (235.4) ಮತ್ತು ಯು ಐ-ವೆನ್ (217.7) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

19 ವರ್ಷ ವಯಸ್ಸಿನ ಸುರುಚಿ ನಾಲ್ಕನೇ ಸ್ಥಾನ ಪಡೆದರು. ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಮನು ಭಾಕರ್ ಅವರು ಎಂಟು ಸ್ಪರ್ಧಿಗಳ ಫೈನಲ್‌ನಲ್ಲಿ ಏಳನೇ ಸ್ಥಾನ ಗಳಿಸಿದರು.

ತಂಡ ವಿಭಾಗದಲ್ಲಿ ಭಾರತ 1,726 ಅಂಕ ಕಲೆಹಾಕಿ ಚಿನ್ನ ಗೆದ್ದಿತು. ಸುರುಚಿ (576), ಮನು (575) ಮತ್ತು ಇಶಾ (575) ಅವರು ಇದಕ್ಕೆ ಕಾರಣರಾದರು. ವಿಯೆಟ್ನಾಂ (1,713) ಮತ್ತು ಚೀನಾ ತೈಪಿ (1,711) ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದವು.




ಸ್ವರ್ಣ ಗೆದ್ದ ಭಾರತದ ಇಶಾ ಸಿಂಗ್ (ಮಧ್ಯ), ಬೆಳ್ಳಿ ಜಯಿಸಿದ ತೈವಾನ್‌ನ ಚೆಂಗ್ ಯೆನ್–ಚಿಂಗ್ (ಎಡ) ಮತ್ತು ಕಂಚು ಗೆದ್ದ ಯು ಐ–ವೆನ್ ಎನ್‌ಆರ್‌ಎಐ ಚಿತ್ರ

**ಸಾಮ್ರಾಟ್‌ಗೆ ಕಂಚು:** ಹೋದ ವರ್ಷ ಕೈರೊ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಗಮನ ಸೆಳೆದಿದ್ದ 21 ವರ್ಷ ವಯಸ್ಸಿನ ಸಾಮ್ರಾಟ್ ರಾಣಾ ಪುರುಷರ ವಿಭಾಗದಲ್ಲಿ 220.3 ಸ್ಕೋರ್‌ನೊಡನೆ ಕಂಚಿನ ಪದಕ ಗೆದ್ದರು. ಉಜ್ಬೇಕಿಸ್ತಾನದ ವ್ಲಾದಿಮಿರ್ ಸ್ವೆಚ್ನಿಕೋವ್ (242) ಚಿನ್ನ ಗೆದ್ದರೆ, ಕಜಾಕಸ್ತಾನದ ವೆಲೆರಿ ರಾಖಿಮ್‌ಝಾನ್ (241) ಬೆಳ್ಳಿ ಪದಕ ಕೊರಳಿಗೇರಿಸಿಕೊಂಡರು.

ಎಂಟು ಮಂದಿಯ ಫೈನಲ್‌ನಲ್ಲಿ ಸ್ಥಾನ ಪಡೆದಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ಶ್ರವಣ್ ಕುಮಾರ್ ನಾಲ್ಕನೇ ಸ್ಥಾನ ಪಡೆದರು.

ಭಾರತ ತಂಡವು (ಸಾಮ್ರಾಟ್, ಶ್ರವಣ್, ವರುಣ್ ತೋಮಾರ್) ತಂಡ ವಿಭಾಗದಲ್ಲಿ 1732 ಪಾಯಿಂಟ್‌ಗಳೊಡನೆ ಬೆಳ್ಳಿ ಗೆದ್ದಿತು.

ಪಿಸ್ತೂಲ್ ಮತ್ತು ರೈಫಲ್ ಸ್ಪರ್ಧೆಗಳು ನಡೆಯಲಿರುವ ಈ ಕೂಟಕ್ಕೆ ಭಾರತ 118 ಮಂದಿಯ ದೊಡ್ಡ ತಂಡವನ್ನು ಕಣಕ್ಕಿಳಿಸಿದೆ. ಕಜಾಕಸ್ತಾನ ತಂಡ (35 ಸ್ಪರ್ಧಿಗಳು) ಎರಡನೇ ದೊಡ್ಡ ತಂಡವೆನಿಸಿದೆ.

ಜೂನಿಯರ್ ವಿಭಾಗದಲ್ಲಿ ಭಾರತದ ಮರೂಫ್ ಔಲಿಯಾ ಅವರು ಪುರುಷರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದರು. ತಂಡ ವಿಭಾಗದಲ್ಲಿ ಭಾರತ ಮೊದಲ ಸ್ಥಾನ ಪಡೆಯಿತು.

ಇರಾನ್ ಈ ಕೂಟದಲ್ಲಿ ಭಾಗವಹಿಸುತ್ತಿಲ್ಲ. ಆ ದೇಶದಲ್ಲಿ ಕೆಲದಿನಗಳ ಹಿಂದೆ ಕ್ಷೋಭೆಯ ವಾತಾವರಣ ನೆಲೆಸಿದ್ದು ಇದಕ್ಕೆ ಕಾರಣವಾಗಿದೆ.

# ವೇಟ್‌ಲಿಫ್ಟಿಂಗ್: ಮೀರಾಬಾಯಿ ದಾಖಲೆ ಚಿನ್ನ




ಮೋದಿನಗರ (ಉತ್ತರ ಪ್ರದೇಶ) (ಪಿಟಿಐ): ಒಲಿಂಪಿಯನ್ ಮೀರಾಬಾಯಿ ಚಾನು ಅವರು ರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸಾಮರ್ಥ್ಯ ಮೆರೆದರು.

ಬುಧವಾರ ಇಲ್ಲಿ ನಡೆದ ಸ್ಪರ್ಧೆಯಲ್ಲಿ ಅವರು ಮಹಿಳೆಯರ 48 ಕೆ.ಜಿ ವಿಭಾಗದಲ್ಲಿ ಒಟ್ಟು 205 ಕೆ.ಜಿ ಭಾರ ಎತ್ತಿ ಪ್ರಶಸ್ತಿ ಜಯಿಸಿದರು. ಅವರು ಸ್ನ್ಯಾಚ್‌ನಲ್ಲಿ 89 ಕೆ.ಜಿ ಹಾಗೂ ಕ್ಲೀನ್–ಜರ್ಕ್‌ನಲ್ಲಿ 116 ಕೆ.ಜಿ ತೂಕ ಎತ್ತಿದರು. ಹೊಸ ರಾಷ್ಟ್ರೀಯ ದಾಖಲೆ ಕೂಡ ಬರೆದರು.

'ಮುಂದಿನ ಸ್ಪರ್ಧೆಯ ಹೊತ್ತಿಗೆ ಸಾಮರ್ಥ್ಯವನ್ನು ಮತ್ತಷ್ಟು ಉತ್ತಮಗೊಳಿಸಿಕೊಳ್ಳುವೆ. 90 ಕೆ.ಜಿ.ಗಿಂತ ಹೆಚ್ಚಿನ ಭಾರವನ್ನು ಎತ್ತುವೆ. ಇವತ್ತು (ಬುಧವಾರ) ನಾನು ಬಹಳಷ್ಟು ಪ್ರಯತ್ನಪಟ್ಟೆ. ಆದರೆ ಪೂರ್ವಸಿದ್ಧತೆ ಬಹಳಷ್ಟಿರಲಿಲ್ಲ. ಆದ್ದರಿಂದ 90 ಕೆ.ಜಿ. ಗಡಿ ದಾಟಲು ಸಾಧ್ಯವಾಗಲಿಲ್ಲ' ಎಂದು ಚಾನು ಹೇಳಿದರು.

31 ವರ್ಷದ ಚಾನು ಸ್ನ್ಯಾಚ್ ಸ್ಪರ್ಧೆಯಲ್ಲಿ ಸಲೀಸಾಗಿ ಒತ್ತಡ ನಿಭಾಯಿಸಿದರು. ಈ ಹಿಂದಿನ ವೈಯಕ್ತಿಕ ಶ್ರೇಷ್ಠ ದಾಖಲೆ (88 ಕೆಜಿ)ಯನ್ನು ಇಲ್ಲಿ ಉತ್ತಮಪಡಿಸಿಕೊಂಡರು.

IAS/KAS Academy

## ❖ ನಂಜೇಗೌಡ ಆಯ್ಕೆ ಎತ್ತಿ ಹಿಡಿದ ಸುಪ್ರೀಂ ಕೋರ್ಟ್

**ಸಂದರ್ಭ: 2023ರ ವಿಧಾನಸಭಾ ಚುನಾವಣೆಯಲ್ಲಿ ಮಾಲೂರು ಕ್ಷೇತ್ರದಿಂದ ಗೆದ್ದಿದ್ದ ಕಾಂಗ್ರೆಸ್ ಕೆ.ವೈ. ನಂಜೇಗೌಡ ಅವರ ಆಯ್ಕೆಯನ್ನು ಸುಪ್ರೀಂ ಎತ್ತಿಹಿಡಿದಿದೆ.**

- ನಂಜೀಗೌಡರು ತಮ್ಮ ಎದುರಾಳಿ ಬಿಜೆಪಿಯ ಕೆ.ಎಸ್. ಮಂಜುನಾಥ್ ಗೌಡ ಅವರಿಗಿಂತ 250 ಹೆಚ್ಚು ಮತಗಳನ್ನು ಪಡೆದಿದ್ದಾರೆ ಎಂಬುದನ್ನು ಗಮನಿಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಲ್ಯ ಬಾಗ್ಚಿ ಅವರಿದ್ದ ಪೀಠವು ಕರ್ನಾಟಕ ಹೈಕೋರ್ಟ್‌ನ ಸೆಪ್ಟೆಂಬರ್ 2025ರ ತೀರ್ಪನ್ನು ರದ್ದುಗೊಳಿಸಿತು.
- ಚುನಾವಣಾ ಅಯೋಗವು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದ ಮರು ಮತ ಎಣಿಕೆಯ ಫಲಿತಾಂಶವನ್ನು ಅರ್ಜಿದಾರರು ಪ್ರತಿ ವಾದಿಗಳ ಸಮ್ಮುಖದಲ್ಲಿ ತೆರೆಯಲಾಯಿತು. ಮತ ಎಣಿಕೆಯಲ್ಲಿ ನಂಜೇಗೌಡ 50,957 ಮತಗಳನ್ನು ಮತ್ತು ಮಂಜುನಾಥ ಗೌಡ 50,707 ಮತಗಳನ್ನು ಪಡೆದಿದ್ದಾರೆ.
- ಎಣಿಕೆ ಪ್ರಕ್ರಿಯೆಯ ವಿಡಿಯೋ ರೆಕಾರ್ಡಿಂಗ್ ಕಡ್ಡಾಯವೇ ಅಥವಾ ಇಲ್ಲವೇ ಎಂಬುದರ ಕುರಿತು ಯಾವುದೇ ಅಭಿಪ್ರಾಯ ವ್ಯಕ್ತಪಡಿಸುತ್ತಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.
- 'ಮತ ಎಣಿಕೆ ಪ್ರಕ್ರಿಯೆ ಕಾನೂ-ನುಬದ್ದವಾಗಿ ನಡೆದಿಲ್ಲ. ಸಾಕಷ್ಟು ಅಕ್ರಮ ಎಸಗಲಾಗಿದೆ' ಎಂದು ಆರೋಪಿಸಿ ಮಂಜುನಾಥ್ ಗೌಡ ಸಲ್ಲಿ ಸಿದ್ದ ಚುನಾವಣಾ ತಕರಾರು ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ಏಕಸದಸ್ಯ ಪೀಠವು ನಂಜೇಗೌಡ ಆಯ್ಕೆ ಯ ನ್ನು ಅಸಿಂಧುಗೊಳಿಸಿತ್ತು.
- 'ಈ ಕ್ಷೇತ್ರದ ಮತಗಳನ್ನು ನಾಲ್ಕು ವಾರಗಳಲ್ಲಿ ಪುನಃ ಎಣಿಕೆ ಮಾಡಿ ಫಲಿತಾಂಶ ಪ್ರಕಟಿಸಬೇಕು. ಅದರಲ್ಲಿ ಯಾರು ಹೆಚ್ಚು ಮತಗಳಿಸಿದವರು ಎಂದು ಕಂಡುಬರುತ್ತದೆಯೋ ಅಂಥವರನ್ನು ಆಯ್ಕೆಯಾದ ಅಭ್ಯರ್ಥಿ ಎಂದು ಘೋಷಿಸಬೇಕು' ಎಂದು ನ್ಯಾಯಪೀಠವು ಚುನಾವಣಾ ಆಯೋಗಕ್ಕೆ ಆದೇಶಿಸಿತ್ತು.
- 'ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಲ್ಲ 15 ಸ್ಪರ್ಧಿಗಳ ಏಜೆಂಟರುಗಳಿಗೆ ಮತ ಎಣಿಕೆ ಕೇಂದ್ರದಲ್ಲಿ ಸಮರ್ಪಕ ವ್ಯವಸ್ಥೆ ಮಾಡಿರಲಿಲ್ಲ. ಮತಗಳ ಎಣಿಕೆ ಒಂದೇ ಕೊಠಡಿಯಲ್ಲಿ ನಡೆಯಬೇಕಿತ್ತು. ಆದರೆ, ಎರಡು ಪ್ರತ್ಯೇಕ ಕೊಠಡಿಗಳಲ್ಲಿ ನಡೆದಿದೆ. ಈ ಮೂಲಕ ಜನಪ್ರ-ತಿನಿಧಿಗಳ ಕಾಯ್ದೆ-1951 ಮತ್ತು ಚುನಾವಣಾ ಆಯೋಗ ಪ್ರಕಟಿಸಿದ್ದ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಆದ್ದರಿಂದ. ನಂಜೇಗೌಡ ಅವರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಣೆ ಮಾಡಿದ ಚುನಾವಣಾ ಆಯೋಗದ ಕ್ರಮವನ್ನು ರದ್ದುಪಡಿಸಬೇಕು. ಮತಗಳ ಮರು ಎಣಿಕೆಗೆ ನಿರ್ದೇಶಿಸಬೇಕು' ಎಂದು ಮಂಜುನಾಥ್ ಗೌಡ ಕೋರಿದ್ದರು.

Dr. Rajkumar IAS KAS Academy

## ❖ ಜೀವಮಾನ ಶ್ರೇಷ್ಠ ಸಾಧನೆ ಪ್ರಶಸ್ತಿಗೆ ಹಂಸಲೇಖ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಖ್ಯಾತ ಗೀತರಚನೆಕಾರ ಮತ್ತು ಸಂಗೀತ ನಿರ್ದೇಶಕ ಹಂಸಲೇಖ 17ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದ ಜೀವಮಾನ ಶ್ರೇಷ್ಠ ಸಾಧನೆ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ಹಂಸಲೇಖ

ನಗರದ ಲುಲು ಮಾಲ್‌ನಲ್ಲಿ ಶುಕ್ರವಾರ ನಡೆಯಲಿರುವ ಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಸಂಬಂಧ ಗುರುವಾರ ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ವಿನೋದ್ ಚಂದ್ರ ಮತ್ತು ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಮುರಳಿ ಪಿ.ಬಿ. ಹಂಸಲೇಖ ಅವರನ್ನು ಭೇಟಿ ಮಾಡಿ, ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಆಹ್ವಾನಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗೂಂಡೂರಾವ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಸಾಧು ಕೋಕಿಲ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲಾ, ಚಿತ್ರೋತ್ಸವದ ರಾಯಭಾರಿ ಪ್ರಕಾಶ್ ರಾಜ್ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ❖ ರಾಷ್ಟ್ರಪತಿ ಅಂಕಿತಕ್ಕೆ 'ದ್ವೇಷ ಭಾಷಣ ತಡೆ' ಮಸೂದೆ

**ಸಂದರ್ಭ: ಹಲವು ಕಾರಣಗಳನ್ನು ನೀಡಿ. ಅಂಕಿತ ಹಾಕದೆ ಆರ್. ರಾಷ್ಟ್ರಪತಿಯ ವಿವೇಚನೆಗೆ ರಾಜ್ಯಪಾಲರು ಕಾಯ್ದಿರಿಸಿದ್ದ ದ್ವೇಷ ಭಾಷಣ ತಡೆ ಮಸೂದೆಯನ್ನು ರಾಷ್ಟ್ರಪತಿಯವರ ಅಂಕಿತಕ್ಕಾಗಿ ಕೇಂದ್ರ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿಗೆ (ನ್ಯಾಯಾಂಗ) ರಾಜ್ಯ ಸರ್ಕಾರವು (ಫೆ. 4) ರವಾನಿಸಿದೆ.**

- ದ್ವೇಷ ಭಾಷಣ ಹಾಗೂ ದ್ವೇಷಾಪರಾಧಗಳನ್ನು ತಡೆಯಲು 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆ -2025' ಅನ್ನು ಸರ್ಕಾರ ರೂಪಿಸಿ, ಅಂಕಿತ ಹಾಕುವಂತೆ ಕೋರಿ ಲೋಕಭವನಕ್ಕೆ ಕಳುಹಿಸಿತ್ತು.

- ಆದರೆ, ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್ ನೀಡಿದ್ದ ಕೆಲವು ತೀರ್ಪುಗಳನ್ನು ಉಲ್ಲೇಖಿಸಿ ಮತ್ತು ಸಾಂವಿಧಾನಿಕವಾಗಿ ಸಂರಕ್ಷಿತ ಪ್ರಜಾಪ್ರಭುತ್ವದ ಚರ್ಚೆಯ ಮೇಲೆ ತೀವ್ರ ನಕಾರಾತ್ಮಕ ಪರಿಣಾಮ ಉಂಟು ಮಾಡುವ ಸಾಧ್ಯತೆಯ ಆತಂಕ ವ್ಯಕ್ತಪಡಿಸಿ ಈ ಮಸೂದೆಯನ್ನು ರಾಜ್ಯಪಾಲರು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದರು.

## ❖ ಮೈಸೂರು-ಕುಶಾಲನಗರ ಹೆದ್ದಾರಿ ವಿಸ್ತರಣೆಗೆ ಅಸ್ತು: 17 ಪ್ರಸ್ತಾವಗಳಿಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಒಪ್ಪಿಗೆ

**ಸಂದರ್ಭ: ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ, ಜಲ ಜೀವನ್ ಮಿಷನ್ ಕಾಮಗಾರಿ, ವಿದ್ಯುತ್ ಮಾರ್ಗ ನಿರ್ಮಾಣ ಹಾಗೂ 4ಜಿ ಮೊಬೈಲ್ ಟವರ್‌ಗಳ ಅಳವಡಿಸುವ ಕರ್ನಾಟಕದ 17 ಪ್ರಸ್ತಾವಗಳಿಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಒಪ್ಪಿಗೆ ನೀಡಿದೆ.**

- ಸಚಿವ ಕೇಂದ್ರ ಅರಣ್ಯ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ನಡೆದ ಸ್ಥಾಯಿ ಸಮಿತಿಯ 88ನೇ ಸಭೆಯಲ್ಲಿ ಕರ್ನಾಟಕ ಅರಣ್ಯ ಇಲಾಖೆಯ ಪ್ರಸ್ತಾವಗಳಿಗೆ ಷರತ್ತುಬದ್ಧ ಒಪ್ಪಿಗೆ ನೀಡಲಾಯಿತು. ರಾಜ್ಯದ ಇಷ್ಟೊಂದು ಪ್ರಸ್ತಾವಗಳಿಗೆ ಈಚಿನ ವರ್ಷಗಳಲ್ಲಿ ಅನುಮೋದನೆ ಸಿಕ್ಕಿದ್ದು ಇದೇ ಮೊದಲು.




- ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 24.100 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಮೈಸೂರು-ಕುಶಾಲನಗರ ಚತುಷ್ಪಥ/ಆರು ಪಥದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ರಂಗನತಿಟ್ಟು ಪಕ್ಷಿಧಾಮದ ಪರಿಸರ ಸೂಕ್ಷ್ಮ ಪ್ರದೇಶದ 10 ಎಕರೆ ಜಾಗವನ್ನು ಬಳಸಿಕೊಳ್ಳಲು ಸ್ಥಾಯಿ ಸಮಿತಿ ಷರತ್ತುಬದ್ಧ ಅನುಮತಿ ಕೊಟ್ಟಿದೆ. ಈಗಿರುವ ಹೆದ್ದಾರಿಯನ್ನು ಮೇಲ್ದರ್ಜೆಗೆ ಏರಿಸಲಾಗುತ್ತದೆ. ಇದು ಮೈಸೂರು ಮತ್ತು ಕೊಡಗು ಪ್ರದೇಶವನ್ನು ಸಂಪರ್ಕಿಸುವ ಪ್ರಮುಖ ರಸ್ತೆ. ರಸ್ತೆ ಸುರಕ್ಷತೆ ಹೆಚ್ಚಿಸಲು, ದಟ್ಟಣೆ ಕಡಿಮೆ ಮಾಡಲು ಹೆದ್ದಾರಿ ಸುಧಾರಣೆ ಅಗತ್ಯ. ರಂಗನತಿಟ್ಟು ಪಕ್ಷಿಧಾಮದ ಪರಿಸರ ಸೂಕ್ಷ್ಮ ವಲಯದ ಅರಣ್ಯೇತರ ಭೂಮಿಯನ್ನಷ್ಟೇ ಬಳಸಿಕೊಳ್ಳಲಾಗುತ್ತದೆ
- ಎಂದು ಕರ್ನಾಟಕ ಅರಣ್ಯ ಇಲಾಖೆಯ ಪಿಸಿಸಿಎಫ್ (ವನ್ಯಜೀವಿ) ಅವರು ಸಭೆಯ ಗಮನಕ್ಕೆ ತಂದರು. 13 ಷರತ್ತುಗಳನ್ನು ವಿಧಿಸಿದ ಸ್ಥಾಯಿ ಸಮಿತಿಯು ಕಾಮಗಾರಿಗೆ ಹಸಿರು ನಿಶಾನೆ ತೋರಿತು. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ 400 ಕೆ.ವಿ. ವಿದ್ಯುತ್ ಮಾರ್ಗವನ್ನು ಮೇಲ್ದರ್ಜೆಗೆ ಏರಿಸಲು 11 ಎಕರೆ ಕಾಡು ಬಳಸುವ ಪ್ರಸ್ತಾವಕ್ಕೂ ಸ್ಥಾಯಿ ಸಮಿತಿ ಒಪ್ಪಿಗೆ ನೀಡಿತು.

## ❖ ಸಹಕಾರಿ 'ಭಾರತ್ ಟ್ಯಾಕ್ಸಿ' ಸೇವೆ ಶುರು

**ಸಂದರ್ಭ: ಭಾರತ್ ಟ್ಯಾಕ್ಸಿ' ಸೇವೆಗೆ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಚಾಲನೆ ನೀಡಿದ್ದಾರೆ. ಇದು ದೇಶದಲ್ಲಿ ಸಹಕಾರ ತತ್ತ್ವದಲ್ಲಿ ಟ್ಯಾಕ್ಸಿ ಸೇವೆಗಳನ್ನು ಒದಗಿಸುವ ಮೊದಲ ವೇದಿಕೆ ಆಗಿದೆ.**

- ಮುಂದಿನ ಮೂರು ವರ್ಷಗಳಲ್ಲಿ ಭಾರತ್ ಟ್ಯಾಕ್ಸಿ ಸೇವೆಯನ್ನು ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ ಮತ್ತು ದ್ವಾರಕಾದಿಂದ ಕಾಮಾಕ್ಯದವರೆಗೆ ವಿಸ್ತರಿಸಲಾಗುವುದು ಎಂದು ವೇದಿಕೆಯನ್ನು ಉದ್ಘಾಟಿಸಿದ ಬಳಿಕ ಸಚಿವ ಶಾ ಅವರು ಹೇಳಿದ್ದಾರೆ.
- ಭಾರತ್ ಟ್ಯಾಕ್ಸಿ ಜೊತೆ ಸೇರಿರುವ ಚಾಲಕರೊಂದಿಗೆ ಲಾಭವನ್ನು ಹಂಚಿಕೊಳ್ಳ. ಲಾಗುವುದು ಚಾಲಕರುಗಳಿಸುವ ಪ್ರತಿ 1 ಖಾತೆಗೆ ಜಮಾ ಆಗಲಿದೆ. ಉಳಿದ ₹20 ವೇದಿಕೆಯಲ್ಲಿ ಉಳಿಯಲಿದೆ. ಆ ₹20ಕ್ಕೂ ಚಾಲಕರೇ ಮಾಲೀಕರಾಗಿ ಇರುತ್ತಾರೆ ಎಂದಿದ್ದಾರೆ.
- ಗ್ರಾಹಕರು. ಈ ವೇದಿಕೆಯ ಮೂಲಕ ಕಾರು, ತ್ರಿಚಕ್ರ ಮತ್ತು ದ್ವಿಚಕ್ರ ವಾಹನಗಳ ಸೇವೆಯನ್ನು ಪಡೆಯಬಹುದಾಗಿದೆ ಎಂದು ಹೇಳಿದ್ದಾರೆ.
- ಈಗ ದೇಶದಲ್ಲಿ ಟ್ಯಾಕ್ಸಿ ಸೇವೆಗಳನ್ನು ಒದಗಿಸುವ ಮಾರುಕಟ್ಟೆಯಲ್ಲಿ ಊಬರ್, ಓಲಾ ಮತ್ತು ರಾಪಿಡೊ ಪ್ರಾಬಲ್ಯ ಹೊಂದಿವೆ.
- ಚಾಲಕರೇಮಾಲೀಕರಾಗುವ ಅವಕಾಶವನ್ನು ಇಂತಹ ಈ ವೇದಿಕೆಯು ನೀಡಲಿದೆ. ಅವಕಾಶವನ್ನು ಇತರೆ ಯಾವುದೇ ವೇದಿಕೆ ಒದಗಿ-ಸುತ್ತಿಲ್ಲ ಎಂದು ಶಾ ಅವರು ಹೇಳಿದ್ದಾರೆ.
- ಅಮೂಲ್ ಸೇರಿದಂತೆ ದೇಶದ ಎಂಟು ಪ್ರಮುಖ ಸಹಕಾರ ಸಂಘಗಳ ನೆರವಿನೊಂದಿಗೆ ಕಳೆದ ಡಿಸೆಂಬರ್ 2ರಂದು ದೆಹಲಿ ಎನ್‌ಸಿಆರ್ ಮತ್ತು ಗುಜರಾತ್‌ನಲ್ಲಿ ಪ್ರಾಯೋಗಿಕವಾಗಿ ಈ ಸೇವೆಯನ್ನು ಆರಂಭಿಸಲಾಯಿತು.
- ಸಹಕಾರ ತತ್ತ್ವದ ಆಧಾರದಲ್ಲಿ ಆ್ಯಪ್ ಮೂಲಕ ಟ್ಯಾಕ್ಸಿ ಸೇವೆ ಒದಗಿಸುವ ಜಗತ್ತಿನ ಅತಿದೊಡ್ಡ ವೇದಿಕೆ ಇದಾಗಿದೆ. ಅಲ್ಲದೆ, ಚಾಲಕರ ಮಾಲೀಕತ್ವದ ವಿಶ್ವದ ಅತಿದೊಡ್ಡ ವೇದಿಕೆಯೂ ಹೌದು ಎಂದು ಸಹಕಾರ ಸಚಿವಾಲಯ ಹೇಳಿದೆ.
- ಈ ಸೇವೆ ಆರಂಭಗೊಂಡಾಗಿನಿಂದ ಇಲ್ಲಿಯವರೆಗೆ 3 ಲಕ್ಷಕ್ಕೂ ಅಧಿಕ ಚಾಲಕರು ಈ ವೇದಿಕೆ ಸೇರಿದ್ದಾರೆ. 1 ಲಕ್ಷ ಹೆಚ್ಚು ಬಳಕೆದಾರರು ನೋಂದಣಿ ಆಗಿದ್ದಾರೆ.
- ಮುಂಬರುವ ವರ್ಷಗಳಲ್ಲಿ ಸಂಘಗಳು ಹೊಸ ಸಹಕಾರ ವ್ಯವಹಾರಗಳಿಗೆ ಪ್ರವೇಶಿಸಲಿವೆ. ಈ ಚಾಲಕರನ್ನು 'ಸಾರಥಿಗಳು' ಎಂದು ಕರೆಯಲಾಗುತ್ತದೆ. ಈ ಚಾಲಕರಿಗೆ ಇನ್ನೊ-ಟೋಕಿಯೊ ಜನರಲ್ ಇನ್ಶೂರೆನ್ಸ್ ಕಂಪನಿಯು ವೈಯಕ್ತಿಕ ಅಪಘಾತ ಮತ್ತು ಆರೋಗ್ಯ ವಿಮಾ ರಕ್ಷಣೆಯನ್ನು ಒದಗಿಸುತ್ತದೆ ಎಂದು ಹೇಳಿದ್ದಾರೆ.
- ಭಾರತ್ ಟ್ಯಾಕ್ಸಿ ಸೇವೆಯು ಸಾರ್ವಜನಿಕರಿಗೆ ಕೈಗೆಟಕುವ, ಸುರಕ್ಷಿತ ಸೇವೆಯನ್ನು ಒದಗಿಸಲು ಪ್ರಯತ್ನಿಸುತ್ತದೆ ಎಂದಿದ್ದಾರೆ.

Dr. Rajkumar IAS/KAS Academy

### 32,997 ಅರ್ಜಿಗಳು ಬಾಕಿ: ಮುಖ್ಯ ಮಾಹಿತಿ ಆಯುಕ್ತ ರಾಮನ್ ಕೆ.

# ಮಾಹಿತಿ ಆಯೋಗ: 36,474 ವಿಲೇವಾರಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಮಾಹಿತಿ ನೀಡಲು 23 ಜಿಲ್ಲೆಗಳಲ್ಲಿ ಕಾರ್ಯಾಗಾರ
- ಮಾಹಿತಿ ಒದಗಿಸುವ ಪ್ರಮಾಣ ಶೇ90ಕ್ಕೆ ಏರಿಕೆ

**ಬೆಂಗಳೂರು:** ಕರ್ನಾಟಕ ಮಾಹಿತಿ ಆಯೋಗವು 2025ರ ಫೆಬ್ರುವರಿಯಿಂದ 2026ರ ಜನವರಿ ಅಂತ್ಯದವರೆಗೆ ಒಟ್ಟು 36,474 ಮೇಲ್ಮನವಿಗಳನ್ನು ವಿಲೇವಾರಿ ಮಾಡಿದೆ.

ಅಧಿಕಾರಿಗಳು ಮಾಹಿತಿ ನೀಡದ, ಮಾಹಿತಿ ನಿರಾಕರಿಸಿದ, ತಪ್ಪು ಮಾಹಿತಿ ನೀಡಿದ ಸಂಬಂಧ ಪರಿಹಾರ ಕೋರಿ ಆಯೋಗಕ್ಕೆ ಸಲ್ಲಿಸಿದ್ದ ದ್ವಿತೀಯ ಮೇಲ್ಮನವಿಗಳು ಇವಾಗಿದ್ದವು. 2025ರ ಫೆಬ್ರುವರಿಯಲ್ಲಿ ಆಯೋಗದ ಮುಂದೆ ಇಂತಹ 69,471 ಅರ್ಜಿಗಳು ಇದ್ದವು. ಅವುಗಳಲ್ಲಿ ಅರ್ಧಕ್ಕೂ ಹೆಚ್ಚು ಅರ್ಜಿಗಳ ವಿಲೇವಾರಿ ಆಗಿದ್ದು, 32,997 ಅರ್ಜಿಗಳು ಬಾಕಿ ಉಳಿದಿವೆ.

'2023ರಿಂದ 2025ರ ಫೆಬ್ರುವರಿವರೆಗೆ ಮೂವರು ಮಾಹಿತಿ ಆಯುಕ್ತರಷ್ಟೇ ಕಾರ್ಯನಿರ್ವಹಿಸುತ್ತಿದ್ದರು. ನಾನು ಅಧಿಕಾರ ವಹಿಸಿಕೊಂಡ ನಂತರ ಅರ್ಜಿಗಳ ತ್ವರಿತ ವಿಲೇವಾರಿಗೆ ಕ್ರಮ ತೆಗೆದುಕೊಂಡೆ. ಹೀಗಾಗಿ ಆಯೋಗದ ಮೇಲಿದ್ದ ಅರ್ಜಿಗಳ ಹೊರೆಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಲು ಸಾಧ್ಯವಾಯಿತು' ಎಂದು ರಾಜ್ಯ ಮುಖ್ಯ ಮಾಹಿತಿ ಆಯುಕ್ತ ರಾಮನ್ ಕೆ. ಅವರು ಹೇಳಿದ್ದಾರೆ.

'ಸಾರ್ವಜನಿಕರಿಗೆ ಮಾಹಿತಿ ನೀಡಬೇಕಾದುದರ ಬಗ್ಗೆ ಮಾಹಿತಿ ಅಧಿಕಾರಿಗಳಿಗೆ ಜಾಗೃತಿ ಮೂಡಿಸುವ ಸಲುವಾಗಿ 23 ಜಿಲ್ಲೆಗಳಲ್ಲಿ ಕಾರ್ಯಾಗಾರ ನಡೆಸಲಾಗಿದೆ. ಪರಿಣಾಮವಾಗಿ, ಮಾಹಿತಿ ಹಕ್ಕು ಕಾಯ್ದೆ ಅಡಿ ಸಲ್ಲಿಸಲಾಗುವ ಅರ್ಜಿಗಳಿಗೆ ಸರಿಯಾದ ಮಾಹಿತಿ ಒದಗಿಸುವ ಪ್ರಮಾಣ ಶೇ 90ರಷ್ಟಕ್ಕೆ ಏರಿಕೆಯಾಗಿದೆ' ಎಂದು ವಿವರಿಸಿದ್ದಾರೆ.

**ಇಲಾಖಾವಾರು ಬಾಕಿ ಮೇಲ್ಮನವಿಗಳು**

| ಇಲಾಖೆ | ಬಾಕಿ ಇರುವ ದ್ವಿತೀಯ ಮೇಲ್ಮನವಿಗಳು |
|---|---|
| ಗ್ರಾಮೀಣಾಭಿವೃದ್ಧಿ | 11,195 |
| ಕಂದಾಯ | 5,384 |
| ನಗರಾಭಿವೃದ್ಧಿ | 4,336 |
| ಶಿಕ್ಷಣ | 1,537 |
| ಸಮಾಜ ಕಲ್ಯಾಣ | 1,328 |
| ಲೋಕೋಪಯೋಗಿ | 1,280 |
| ಜಲಸಂಪನ್ಮೂಲ | 1,047 |
| ಆರೋಗ್ಯ | 959 |
| ಕೈಗಾರಿಕೆ | 803 |
| ಅರಣ್ಯ | 555 |
| ಕೃಷಿ | 531 |

**₹45.29 ಲಕ್ಷ** ಅಧಿಕಾರಿಗಳಿಗೆ ವಿಧಿಸಿದ ದಂಡದ ಮೊತ್ತ

**241** ಮಾಹಿತಿ ನೀಡದಕ್ಕೆ, ದಂಡಕ್ಕೆ ಗುರಿಯಾದ ಅಧಿಕಾರಿಗಳು

# ವ್ಯಾಪಾರ ಒಪ್ಪಂದಕ್ಕೆ ಮಾರ್ಚ್‌ನಲ್ಲಿ ಸಹಿ

## ಭಾರತ–ಅಮೆರಿಕ ಒಪ್ಪಂದದ ಕುರಿತಾಗಿ ಸಚಿವ ಗೋಯಲ್ ಮಾಹಿತಿ



ಪೀಯೂಷ್ ಗೋಯಲ್

**ನವದೆಹಲಿ (ಪಿಟಿಐ):** ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತಕ್ಕೆ ಮಾರ್ಚ್ ತಿಂಗಳ ಮಧ್ಯ ಭಾಗದಲ್ಲಿ ಭಾರತ ಮತ್ತು ಅಮೆರಿಕ ಸಹಿ ಹಾಕುವ ನಿರೀಕ್ಷೆ ಇದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದರು.

ಈ ಒಪ್ಪಂದಕ್ಕೆ ಸಹಿ ಹಾಕಿದ ನಂತರ, ಭಾರತವು ಅಮೆರಿಕದಿಂದ ಆಮದಾಗುವ ಕೆಲವು ಸರಕುಗಳ ಮೇಲಿನ ಸುಂಕವನ್ನು ಕಡಿಮೆ ಮಾಡಲಿದೆ.

ಭಾರತ ಮತ್ತು ಅಮೆರಿಕದ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತಕ್ಕೆ ಸಂಬಂಧಿಸಿದ ಜಂಟಿ ಹೇಳಿಕೆಯನ್ನು ಅಂತಿಮಗೊಳಿಸುವ ಕೆಲಸ, ಅದಕ್ಕೆ ಸಹಿ ಹಾಕುವ ಕೆಲಸ 4-5 ದಿನಗಳಲ್ಲಿ ಆಗುವ ನಿರೀಕ್ಷೆ ಇದೆ. ಇದರ ಬಳಿಕ ಅಮೆರಿಕ ವಿಧಿಸುವ ಸುಂಕಗಳು ಶೇ 18ಕ್ಕೆ ಇಳಿಯುತ್ತವೆ ಎಂದು ಹೇಳಿದ್ದಾರೆ.

ಈ ವಾರದ ಆರಂಭದಲ್ಲಿ ಉಭಯ ರಾಷ್ಟ್ರಗಳು ಒಪ್ಪಂದವನ್ನು ಅಂತಿಮಗೊಳಿಸಿವೆ. ಭಾರತದಿಂದ ಅಮೆರಿಕ ಪ್ರವೇಶಿಸುವ ಸರಕುಗಳ ಮೇಲೆ ಈಗ ಶೇ 50ರಷ್ಟು ಸುಂಕ ಇದೆ. ಈ ಪೈಕಿ ಶೇ 25ರಷ್ಟನ್ನು ಪ್ರತಿಸುಂಕದ ರೂಪದಲ್ಲಿ ಮತ್ತು ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವದಕ್ಕೆ ಶೇ 25ರಷ್ಟು ಹೆಚ್ಚುವರಿ ಸುಂಕವನ್ನು ಅಮೆರಿಕ ವಿಧಿಸುತ್ತಿದೆ.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತವು ಈಗಾಗಲೇ ಸಿದ್ಧವಾಗಿದೆ. ಇದು ಮುಂದಿನ 4–5 ದಿನಗಳಲ್ಲಿ ಅಂತಿಮಗೊಂಡು ಮತ್ತು ಜಂಟಿ ಹೇಳಿಕೆಗೆ ಸಹಿ ಆಗಲಿದೆ. ಇದರ ಆಧಾರದ ಮೇಲೆ ಪಾಲುದಾರಿಕೆಯ ಮೊದಲ ಹಂತವು ಆರಂಭವಾಗಲಿದೆ ಎಂದು ತಿಳಿಸಿದ್ದಾರೆ.

ಒಪ್ಪಂದದ ಅಧಿಕೃತ ಕಡತವನ್ನು ಸಿದ್ಧಪಡಿಸಲಾಗುತ್ತಿದೆ. ಇದಕ್ಕೆ ಒಂದು ಅಥವಾ ಒಂದೂವರೆ ತಿಂಗಳು ಸಮಯ ಬೇಕಾಗಬಹುದು. ಮಾರ್ಚ್ ಮಧ್ಯದ ವೇಳೆಗೆ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಜಂಟಿ ಹೇಳಿಕೆಗೆ ಸಹಿ ಹಾಕಿದ ಒಂದೆರೆಡು ದಿನದ ಬಳಿಕ, ಭಾರತದ ಸರಕುಗಳ ಮೇಲೆ ಸುಂಕವನ್ನು ಶೇ 18ಕ್ಕೆ ಇಳಿಸುವ ಕಾರ್ಯಕಾರಿ ಆದೇಶವನ್ನು ಅಮೆರಿಕ ಜಾರಿ ಮಾಡಲಿದೆ. ಈ ಒಪ್ಪಂದದ ಭಾಗವಾಗಿ ಹೂಡಿಕೆ ಮಾಡುವ ಭರವಸೆಯನ್ನು ನೀಡಿಲ್ಲ ಎಂದು ಗೋಯಲ್ ತಿಳಿಸಿದ್ದಾರೆ.

ಈ ಜಂಟಿ ಹೇಳಿಕೆಗೆ ಸಹಿ ಹಾಕುವ ಪ್ರಕ್ರಿಯೆ ವರ್ಚ್ಯುವಲ್ ವೇದಿಕೆಯ ಮೂಲಕ ನಡೆಯಲಿದೆ.

### ಜಿಸಿಸಿ ದೇಶಗಳ ಜೊತೆ ಮಾತುಕತೆಗೆ ಒಪ್ಪಿಗೆ

ಮುಕ್ತ ವ್ಯಾಪಾಕ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆ ಆರಂಭಿಸುವುದಕ್ಕೆ ಬೇಕಿರುವ ನಿಬಂಧನೆಗಳನ್ನು ಭಾರತ ಮತ್ತು ಕೊಲ್ಲಿ ಸಹಕಾರ ಮಂಡಳಿಯ (ಜಿಸಿಸಿ) ಸದಸ್ಯ ರಾಷ್ಟ್ರಗಳು ಅಂತಿಮಗೊಳಿಸಿವೆ.

ಈ ನಿಬಂಧನೆಗಳು ಪ್ರಸ್ತಾವಿತ ವ್ಯಾಪಾರ ಒಪ್ಪಂದದ ವ್ಯಾಪ್ತಿಯನ್ನು ವಿವರಿಸುತ್ತವೆ. ನಿಬಂಧನೆಗಳಿಗೆ ಸಹಿ ಹಾಕುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಚಿವ ಪೀಯೂಷ್ ಗೋಯಲ್ ವಹಿಸಿದ್ದರು.

ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್, ಒಮಾನ್ ಮತ್ತು ಬಹರೇನ್ ಜಿಸಿಸಿ ಸದಸ್ಯ ರಾಷ್ಟ್ರಗಳಾಗಿವೆ.

# ‘ಐದು ತೇಜಸ್ ಜೆಟ್‌ಗಳ ಹಸ್ತಾಂತರಕ್ಕೆ ಸಿದ್ಧ’



ನವದೆಹಲಿ (ಪಿಟಿಐ): ಐದು ‘ತೇಜಸ್’ ಲಘು ಯುದ್ಧ ವಿಮಾನಗಳನ್ನು ಭಾರತೀಯ ವಾಯುಪಡೆಗೆ ಹಸ್ತಾಂತರಿಸಲು ಸಿದ್ಧವಿರುವುದಾಗಿ ಸರ್ಕಾರಿ ಸ್ವಾಮ್ಯದ ವೈಮಾನಿಕ ಸಂಸ್ಥೆ ‘ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ತಿಳಿಸಿದೆ.

ತೇಜಸ್ ಎಂಕೆ–1 ಸರಣಿಯ 83 ತೇಜಸ್ ಯುದ್ಧ ವಿಮಾನಗಳ ಖರೀದಿ ಸಂಬಂಧ 2021ರ ಫೆಬ್ರುವರಿ ತಿಂಗಳಲ್ಲಿ ಎಚ್‌ಎಎಲ್ ಹಾಗೂ ರಕ್ಷಣಾ ಇಲಾಖೆಯ ನಡುವೆ ₹48 ಸಾವಿರ ಕೋಟಿ ಒಪ್ಪಂದ ನಡೆದಿತ್ತು.

ಜೆಟ್‌ಗಳಿಗೆ ಅಗತ್ಯವಾದ ಜೆಟ್ ಎಂಜಿನ್‌ಗಳನ್ನು ಪೂರೈಸಲು ‘ಜಿಇ ಏರೋಸ್ಪೇಸ್’ ಸಂಸ್ಥೆ ವಿಳಂಬ ಮಾಡಿದ್ದರಿಂದ ಜೆಟ್‌ಗಳ ಹಸ್ತಾಂತರವು ತಡವಾಗಿತ್ತು.

‘ಒಪ್ಪಂದದಲ್ಲಿ ಸೂಚಿಸಲಾದ ಮಾನದಂಡಗಳಿಗೆ ಅನುಗುಣವಾಗಿಯೇ ತಯಾರಾದ ಐದು ಜೆಟ್‌ಗಳ ಪೂರೈಕೆಗೆ ಸಂಪೂರ್ಣವಾಗಿ ಸಿದ್ಧರಿದ್ದೇವೆ’ ಎಂದು ಎಚ್‌ಎಎಲ್ ವಕ್ತಾರರು ತಿಳಿಸಿದ್ದಾರೆ.

‘ಹೆಚ್ಚುವರಿಯಾಗಿ 9 ವಿಮಾನಗಳನ್ನು ಈಗಾಗಲೇ ವಿನ್ಯಾಸಗೊಳಿಸಲಾಗಿದೆ. ಜಿ.ಇ ಸಂಸ್ಥೆಯಿಂದ ಎಂಜಿನ್‌ಗಳು ಲಭ್ಯವಾಗುತ್ತಿದ್ದಂತೆಯೇ, ಅವುಗಳನ್ನು ಹಸ್ತಾಂತರ ಮಾಡಲಾಗುವುದು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಂದು ಎಂಜಿನ್ ಹೊಂದಿರುವ ತೇಜಸ್ ಯುದ್ಧ ವಿಮಾನವು ಪ್ರತಿಕೂಲ ಹವಾಮಾನದ ಸಂದರ್ಭದಲ್ಲಿಯೂ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ.




# ರೂಬಲ್ ಅವರಿಗೆ 'ಗ್ಲೋಬಲ್ ಟೀಚರ್' ಪ್ರಶಸ್ತಿ ಪ್ರದಾನ

ದುಬೈ (ಎಪಿ): ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದವರಿಗೆ ನೀಡುವ 'ಗ್ಲೋಬಲ್ ಟೀಚರ್' ಪ್ರಶಸ್ತಿಯನ್ನು ಭಾರತದ ಶಿಕ್ಷಕಿ ರೂಬಲ್ ನಾಗಿ ಅವರಿಗೆ ಗುರುವಾರ ಪ್ರದಾನ ಮಾಡಲಾಯಿತು.



ಪ್ರಶಸ್ತಿಯು ಒಂದು ಮಿಲಿಯನ್ ಡಾಲರ್ (ಅಂದಾಜು ₹9 ಕೋಟಿ) ನಗದು ಒಳಗೊಂಡಿದೆ. ರೂಬಲ್ ನಾಗಿ ಪ್ರತಿಷ್ಠಾನದಡಿ ಅವರು ಭಾರತದಾದ್ಯಂತ 800 ಕಲಿಕಾ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ರೂಬಲ್ ನಾಗಿ ಕೊಳೆಗೇರಿಗಳ ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸಿ, ಅವುಗಳ ಮೂಲಕ ಸಾಹಿತ್ಯ, ವಿಜ್ಞಾನ, ಗಣಿತ ಹಾಗೂ ಇತಿಹಾಸದ ಪಾಠಗಳನ್ನು ಬೋಧಿಸುತ್ತಿದ್ದಾರೆ.

'ಶಾಲೆಗೆ ಹೋಗದ ಮಕ್ಕಳಿಗೆ ರಚನಾತ್ಮಕ ಕಲಿಕೆ ಪ್ರಾರಂಭಿಸುವುದು ನನ್ನ ಗುರಿಯಾಗಿದೆ. ಉಚಿತ ವೃತ್ತಿ ತರಬೇತಿ ಕೇಂದ್ರ ಸ್ಥಾಪಿಸಲು ಈ ಪ್ರಶಸ್ತಿ ಮೊತ್ತವನ್ನು ಬಳಸುವ ಯೋಜನೆ ಇದೆ' ಎಂದು ಅವರು ಹೇಳಿದ್ದಾರೆ.

ನಾಗಿ ಅವರು 'ಗ್ಲೋಬಲ್ ಟೀಚರ್' ಪ್ರಶಸ್ತಿ ಪಡೆಯುತ್ತಿರುವ 10ನೇ ವ್ಯಕ್ತಿಯಾಗಿದ್ದಾರೆ. 2015ರಲ್ಲಿ ಈ ಪ್ರಶಸ್ತಿಯನ್ನು ಆರಂಭಿಸಲಾಯಿತು.

# ಸುರುಚಿ– ರಾಣಾ ಜೋಡಿಗೆ ಬೆಳ್ಳಿ

ನವದೆಹಲಿ (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಸಾಮ್ರಾಟ್ ರಾಣಾ ಮತ್ತು ವಿಶ್ವಕಪ್ ವಿಜೇತೆ ಸುರುಚಿ ಸಿಂಗ್ ಅವರಿದ್ದ ಭಾರತದ ಮಿಶ್ರ ಡಬಲ್ಸ್ ತಂಡವು ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಗುರುವಾರ ಬೆಳ್ಳಿ ಪದಕಕ್ಕೆ 'ಗುರಿಯಿಡುವಲ್ಲಿ' ಯಶಸ್ವಿಯಾಯಿತು.

ಎಡಗೈ ಶೂಟರ್ ರಶ್ಮಿಕಾ ಸೆಹಲ್ ಮತ್ತು ವಂಶಿಕಾ ಚೌಧರಿ ಅವರು ಮಹಿಳೆಯರ ಜೂನಿಯರ್ ವಿಭಾಗದಲ್ಲಿ, ಯೂತ್ ವಿಭಾಗದಲ್ಲಿ ಪ್ರಿಯಾಂಶಿ ಪೂರ್ವ ಮತ್ತು ಚಹೆಕ್ ಕೊಹ್ಲಾ ಅವರು ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದರು.

ಭಾರತ ಎರಡನೇ ದಿನದ ಕೊನೆಗೆ ಒಟ್ಟು 10 ಚಿನ್ನ, ಐದು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಪಡೆದುಕೊಂಡಿದ್ದು ಎರಡನೇ ಸ್ಥಾನದಲ್ಲಿರುವ ಉಜ್ಬೇಕಿಸ್ತಾನ-ಕ್ಕಿಂತ ಬಹಳ ಮುಂದಿದೆ. ಉಜ್ಬೇಕಿಸ್ತಾನ ಮೂರು ಚಿನ್ನದ ಪದಕಗಳನ್ನು ಜಯಿಸಿದೆ.

ಎರಡನೇ ದಿನ ಉಜ್ಬೇಕಿಸ್ತಾನದ ಏಕೈಕ ಚಿನ್ನ 10 ಮೀ. ಏರ್ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಬಂದಿತು. ನಿಗಿನಾ ಸೈದುಕುಲೋವಾ– ಮುಕಮ್ಮದ್ ಕಮಲೋವ್ ಅವರು 481.3 ಸ್ಕೋರ್ ದಾಖಲಿಸಿ, ಸಾಮ್ರಾಟ್–ಸುರುಚಿ ಜೋಡಿಯನ್ನು (479.6) ಹಿಂದೆಹಾಕಿದರು.

## ಆರ್‌ಸಿಬಿ ವನಿತೆಯರಿಗೆ 2ನೇ ಬಾರಿ ಡಬ್ಲ್ಯುಪಿಎಲ್ ಕಿರೀಟ ● ಡೆಲ್ಲಿ 4ನೇ ಸಲ ರನ್ನರ್ಸ್ ಅಪ್




ಟ್ರೋಫಿಯೊಂದಿಗೆ ಆರ್‌ಸಿಬಿ ತಂಡದ ಆಟಗಾರ್ತಿಯರ ಸಂಭ್ರಮ ಚಿತ್ರಗಳು: ಎಎಫ್‌ಪಿ / ಪಿಟಿಐ

## ❖ ಸೈಬರ್ ವಂಚಿತರಿಗೆ ಪರಿಹಾರ

**ಸಂದರ್ಭ: ಡಿಜಿಟಲ್ ವಂಚನೆಗೆ ಒಳಗಾದ ಗ್ರಾಹಕರಿಗೆ ಒಂದು ಬಾರಿ ಪರಿಹಾರವಾಗಿ ₹25 ಸಾವಿರ ಪಾವತಿಸುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.**

- 'ಒಟಿಪಿ' ಹಂಚಿಕೊಂಡು ವಂಚನೆಗೆ ಒಳಗಾದ ಗ್ರಾಹಕರಿಗೂ ಪರಿಹಾರ ಲಭಿಸಲಿದೆ.
- ಆದರೆ, ಒಬ್ಬ ಗ್ರಾಹಕ ಜೀವಿತಾವಧಿ ಯಲ್ಲಿ ಒಂದು ಬಾರಿ ಮಾತ್ರ (ಒಂದು ವಂಚನೆ ವಹಿವಾಟಿಗೆ) ಪರಿಹಾರ ಪಡೆಯಲು ಅರ್ಹ ಎಂದಿರುವ ಆರ್‌ಬಿಐ, ಶೀಘ್ರದಲ್ಲೇ, ಪರಿಹಾರ ನೀತಿಯ ಕರಡನ್ನು ಸಾರ್ವಜನಿಕರ ಅಭಿ ಪ್ರಾಯಕ್ಕಾಗಿ ಪ್ರಕಟ ಮಾಡಲಾಗುವುದು ಎಂದಿದೆ.
- ಆರ್‌ಬಿಐ ನಿರ್ವಹಿಸುತ್ತಿರುವ ಸುಮಾರು ₹85 ಸಾವಿರ ಕೋಟಿ ಮೊತ್ತದ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಯಿಂದ (ಡಿಇಎ) ಪರಿಹಾರದ ಮೊತ್ತವನ್ನು ವಂಚನೆಗೆ ಒಳಗಾದ ಗ್ರಾಹಕರ ಖಾತೆಗೆ ಪಾವತಿಸಲಾಗುವುದು ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

## ❖ ಸಾಲದ ಮಿತಿ ₹20 ಲಕ್ಷಕ್ಕೆ ಹೆಚ್ಚಳ

**ಸಂದರ್ಭ: ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ (ಎಂಎಸ್‌ಇ) ಪೂರಕ ಭದ್ರತೆ ಇಲ್ಲದೆ (ಆಡಮಾನರಹಿತ) ನೀಡುವ ಸಾಲದ ಮಿತಿಯನ್ನು ಆರ್‌ಬಿಐ ₹10 ಲಕ್ಷದಿಂದ *20 ಲಕ್ಷಕ್ಕೆ ಹೆಚ್ಚಿಸಿದೆ.**

- ಮುಂದಿನ ಹಣಕಾಸು ವರ್ಷದಿಂದ ಮಂಜೂರಾಗುವ ಸಾಲಕ್ಕೆ ಇದು ಅನ್ವಯಿಸಲಿದೆ. ಮಾರ್ಗಸೂಚಿಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.
- ಕಿಸಾನ್ ಕ್ರೆಡಿಟ್ ಕಾರ್ಡ್ (ಕೆಸಿಸಿ) ಮಾರ್ಗಸೂಚಿಗಳ ಪರಿಷ್ಕರಣೆಗೂ ಆರ್‌ಬಿಐ ಮುಂದಾಗಿದ್ದು, ಕೆಸಿಸಿ ಅವಧಿಯನ್ನು ಆರು ವರ್ಷಕ್ಕೆ ವಿಸ್ತರಣೆ ಮಾಡುವುದು, ವ್ಯಾಪ್ತಿಯನ್ನು ಹೆಚ್ಚಿಸುವುದೂ ಪ್ರಸ್ತಾವಿತ ಮಾರ್ಗಸೂಚಿಯಲ್ಲಿ ಸೇರಿದೆ. ಕರಡು ಮಾರ್ಗಸೂಚಿ ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ❖ ರೆಪೊ ದರ ಯಥಾಸ್ಥಿತಿ

**ಸಂದರ್ಭ: ದೇಶೀಯ ಹಣದುಬ್ಬರ ಮತ್ತು ಆರ್ಥಿಕ ಪ್ರಗತಿಯ ಮುನ್ನೋಟವು ಸಕಾರಾತ್ಮಕವಾಗಿ ಮುಂದುವರಿದಿರುವುದರಿಂದ ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಶೇ.5.25 ಯಥಾಸ್ಥಿತಿಯಲ್ಲೇ ಮುಂದುವರಿಸಲು ಶುಕ್ರವಾರ ನಡೆದ ಸಭೆಯಲ್ಲಿ ಸರ್ವಾನುಮತದ ನಿರ್ಧಾರ ಕೈಗೊಂಡಿದೆ.**

- ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2026-27ನೇ ಸಾಲಿನ ಬಜೆಟ್ ಪ್ರಕಟಿಸಿದ ನಂತರದ. ಆರ್‌ಬಿಐನ ಮೊದಲ ಹಣಕಾಸು ನೀತಿ ಪರಿಶೀಲನೆ ಇದಾಗಿದೆ.
- 'ದೇಶೀಯ ಮತ್ತು ಜಾಗತಿಕ ಮಟ್ಟದ ಆರ್ಥಿಕ ಪರಿಸ್ಥಿತಿಗಳು ಸ್ಥಿರತೆಯತ್ತ ಮರಳುತ್ತಿರುವುದರ ವಿವರವಾದ ಮೌಲ್ಯಮಾಪನದ ನಂತರ ಎಂಪಿಸಿ, ರೆಪೊ ದರದಲ್ಲಿ ತಟಸ್ಥ ನಿಲುವನ್ನು ಕಾಯ್ದುಕೊಂಡಿದೆ ಎಂದು ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದರು.

### ನಿರ್ವಹಣಾ ವೆಚ್ಚದ ಬಳಿಕವೂ ಮಿಗತೆ ಆದಾಯ: ಅಶ್ವಿನಿ ವೈಷ್ಣವ್

# ‘ರೈಲ್ವೆ ಹಣಕಾಸು ಸ್ಥಿತಿಯಲ್ಲಿ ಸುಧಾರಣೆ’

**ನವದೆಹಲಿ(ಪಿಟಿಐ):** ‘ಕಳೆದ ಹತ್ತು ವರ್ಷಗಳಲ್ಲಿ ಭಾರತೀಯ ರೈಲ್ವೆಯ ಹಣಕಾಸು ಸ್ಥಿತಿ ಸಾಕಷ್ಟು ಸುಧಾರಿಸಿದೆ. ಇಲಾಖೆಯ ಎಲ್ಲ ವೆಚ್ಚಗಳನ್ನು ಭರಿಸಿದ ಬಳಿಕವೂ ಸಣ್ಣ ಪ್ರಮಾಣದ ಮಿಗತೆ ಆದಾಯ ಇದೆ’ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಶುಕ್ರವಾರ ಹೇಳಿದ್ದಾರೆ.

‘2014–2024 ಅವಧಿಯಲ್ಲಿ 5.05 ಲಕ್ಷ ಉದ್ಯೋಗಗಳನ್ನು ಸೃಜಿಸಲಾಗಿದೆ. ಸರ್ಕಾರದ ಮೂರನೇ ಅವಧಿಯಲ್ಲಿ 1.5 ಲಕ್ಷ ಉದ್ಯೋಗಗಳ ಸೃಷ್ಟಿಯಾಗಿದೆ’ ಎಂದೂ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆಗಳಿಗೆ ಅವರು ಉತ್ತರಿಸುವ ವೇಳೆ ಅವರು ಈ ಮಾಹಿತಿ ನೀಡಿದ್ದಾರೆ.

‘ಕಳೆದ ಹತ್ತು ವರ್ಷಗಳಲ್ಲಿ ವೆಚ್ಚಗಳಿಗೆ ಕಡಿವಾಣ ಹಾಕುವ ಜೊತೆಗೆ, ಸರಕು ಸಾಗಣೆ ಪ್ರಮಾಣ ಹೆಚ್ಚಿಸಲು, ಪ್ರಯಾಣಿಕರಿಂದ ಬರುವ ಆದಾಯ ಹೆಚ್ಚಳಕ್ಕೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ’ ಎಂದು ಅವರು ಬಿಜೆಪಿಯ ಸಂಸದ ಲಕ್ಷ್ಮೀಕಾಂತ ಬಾಜಪೇಯಿ ಅವರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಈಶಾನ್ಯ ಭಾಗದಲ್ಲಿ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿಗೆ ನಮ್ಮ ಸರ್ಕಾರ ಒತ್ತು ನೀಡಿದೆ. ಈ ಭಾಗಕ್ಕೆ, ಯುಪಿಎ ಆಡಳಿತದ ಅವಧಿಯಲ್ಲಿ ₹2 ಸಾವಿರ ಕೋಟಿಯಷ್ಟು ಹಂಚಿಕೆ ಮಾಡಲಾಗುತ್ತಿತ್ತು. ನಮ್ಮ ಸರ್ಕಾರ ಬಂದ ಬಳಿಕ ಈ ಮೊತ್ತವನ್ನು ₹11,486 ಕೋಟಿಗೆ ಹೆಚ್ಚಿಸಲಾಗಿದೆ’ ಎಂದು ಹೇಳಿದರು.

> **ಎಲ್ಲ ರೈಲು ಮಾರ್ಗಗಳ ವಿದ್ಯುದ್ದೀಕರಣ ಕಾರ್ಯ ಪೂರ್ಣಗೊಳಿಸಿರುವ ಕಾರಣ ಇಂಧನಕ್ಕೆ ತಗಲುವ ವೆಚ್ಚವನ್ನು ತಗ್ಗಿಸಲು ಸಾಧ್ಯವಾಗಿದೆ. ಪರಿಸರಕ್ಕೆ ಆಗುವ ಹಾನಿಯೂ ಕಡಿಮೆಯಾಗಿದೆ**
>
> **ಅಶ್ವಿನಿ ವೈಷ್ಣವ್,** ಕೇಂದ್ರ ರೈಲ್ವೆ ಸಚಿವ

**ಪ್ರಮುಖ ಅಂಶಗಳು**

- ರೈಲ್ವೆಯ 12 ಲಕ್ಷ ಉದ್ಯೋಗಿಗಳ ವೇತನ ಹಾಗೂ ಇತರ ಭತ್ಯೆಗಳಿಗೆ ವರ್ಷಕ್ಕೆ ತಗಲುವ ವೆಚ್ಚ ₹1.18 ಲಕ್ಷ ಕೋಟಿ
- 18 ಲಕ್ಷ ನಿವೃತ್ತ ನೌಕರರ ಪಿಂಚಣಿಗೆ ವಾರ್ಷಿಕ ₹65 ಸಾವಿರ ಕೋಟಿ ವೆಚ್ಚ
- ಇಂಧನಕ್ಕಾಗಿ ₹32 ಸಾವಿರ ಕೋಟಿ, ನಿರ್ವಹಣೆಗೆ ₹8 ಸಾವಿರ ಕೋಟಿ ವೆಚ್ಚ
- ನಾಲ್ಕು ವರ್ಷಗಳ ಹಿಂದೆ ಇಂಧನ ವೆಚ್ಚ ₹37,841 ಕೋಟಿ ಇದ್ದದ್ದು ಈಗ ₹32,400 ಕೋಟಿಗೆ ತಗ್ಗಿದೆ
- ಎಲ್ಲ ವರ್ಗದ ಪ್ರಯಾಣಿಕರಿಗೆ ನೀಡುವ ವಾರ್ಷಿಕ ಸಬ್ಸಿಡಿ ಮೊತ್ತ ₹60 ಸಾವಿರ ಕೋಟಿ

# ರೈಲ್ವೆ: ಗುಜರಾತ್, ರಾಜಸ್ಥಾನಕ್ಕಿಂತಲೂ ಕರ್ನಾಟಕಕ್ಕೆ ಕಡಿಮೆ ಅನುದಾನ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಈ ಸಲದ ಕೇಂದ್ರ ಬಜೆಟ್‌ನಲ್ಲಿ ರೈಲ್ವೆ ಯೋಜನೆಗಳ ಅನುಷ್ಠಾನಕ್ಕಾಗಿ ಗುಜರಾತ್, ರಾಜಸ್ಥಾನಕ್ಕಿಂತಲೂ ಕರ್ನಾಟಕಕ್ಕೆ ಕಡಿಮೆ ಅನುದಾನ ಸಿಕ್ಕಿದೆ.

ಜಿಎಸ್‌ಟಿ ಸಂಗ್ರಹದಲ್ಲಿ ಎರಡನೇ ಸ್ಥಾನದಲ್ಲಿರುವ ರಾಜ್ಯವು ರೈಲ್ವೆ ಅನುದಾನ ಪಡೆದಿರುವ ರಾಜ್ಯಗಳ ಪಟ್ಟಿಯಲ್ಲಿ 11ನೇ ಸ್ಥಾನದಲ್ಲಿದೆ. ಗುಜರಾತ್‌ಗೆ ₹17,366 ಕೋಟಿ, ರಾಜಸ್ಥಾನಕ್ಕೆ ₹10,228 ಕೋಟಿ ಅನುದಾನ ಹಂಚಿಕೆಯಾಗಿದ್ದರೆ, ರಾಜ್ಯಕ್ಕೆ ನೀಡಿರುವುದು ₹7,748 ಕೋಟಿ.

**ರಾಜ್ಯವಾರು ಅನುದಾನ ಹಂಚಿಕೆ (₹ಕೋಟಿಗಳಲ್ಲಿ)**




### 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ತೆರೆ

# ಜಪಾನ್‌ನ ‘ಲಾಸ್ಟ್ ಲ್ಯಾಂಡ್’ ಅತ್ಯುತ್ತಮ ಚಿತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಶುಕ್ರವಾರ ನಗರದ ಲುಲು ಮಾಲ್‌ನಲ್ಲಿ ತೆರೆ ಬಿದ್ದಿದ್ದು, ಚಿತ್ರೋತ್ಸವದ ಏಷ್ಯನ್ ವಿಭಾಗದಲ್ಲಿ ಜಪಾನ್ ದೇಶದ ‘ಲಾಸ್ಟ್ ಲ್ಯಾಂಡ್’ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದರೆ, ಮರಾಠಿಯ ‘ಸಬರ್ ಬೊಂದಾ’ ಚಿತ್ರಭಾರತಿ ವಿಭಾಗದಲ್ಲಿ ಅತ್ಯುತ್ತಮ ಚಿತ್ರವಾಗಿ ಹೊರಹೊಮ್ಮಿತು. ಕನ್ನಡ ವಿಭಾಗದಲ್ಲಿ ‘ವನ್ಯಾ’ ಚಿತ್ರ ಮೊದಲ ಬಹುಮಾನಕ್ಕೆ ಭಾಜನವಾಯಿತು.

ಏಷ್ಯನ್ ಚಿತ್ರ ವಿಭಾಗದಲ್ಲಿ ಭಾರತದ ‘ಶೇಪ್ ಆಫ್ ಮೋಮೋ’ ಮತ್ತು ಜಪಾನ್‌ನ ‘ದಿ ಡೀಪೆಸ್ಟ್ ಸ್ಪೇಸ್ ಇನ್ ಯುಎಸ್’ ಚಿತ್ರಗಳು ದ್ವಿತೀಯ ಮತ್ತು ತೃತೀಯ ಚಿತ್ರ ಪ್ರಶಸ್ತಿಗೆ ಭಾಜನವಾದವು. ಫಿಲಿಪ್ಪೀನ್ಸ್‌ನ ‘ರಿಪಬ್ಲಿಕ್ ಆಫ್ ಪಿಪೊಲಿಪಿನಾಸ್’ ಚಿತ್ರವು ತೀರ್ಪುಗಾರರ ವಿಶೇಷ ಮೆಚ್ಚುಗೆಯನ್ನು ಪಡೆಯಿತು.

ಭಾರತೀಯ (ಚಿತ್ರಭಾರತಿ) ವಿಭಾಗದಲ್ಲಿ ಮಲಯಾಳದ ‘ಮೋಹಂ’ ಮತ್ತು ‘ಕಾಡು’ ಚಿತ್ರಗಳು ಕ್ರಮವಾಗಿ ‘ದ್ವಿತೀಯ ಮತ್ತು ತೃತೀಯ’ ಪ್ರಶಸ್ತಿಗಳನ್ನು ಗೆದ್ದಿವೆ. ಮರಾಠಿ ಭಾಷೆಯ ‘ಗೊಂದಾಳ್’ ಚಿತ್ರವು ಫಿಪ್ರೆಸ್ಕಿ ಪ್ರಶಸ್ತಿ ಪಡೆದರೆ, ಮಲಯಾಳಂ ಭಾಷೆಯ ‘ಸರ್ಕೀಟ್’ ಚಿತ್ರವು ತೀರ್ಪುಗಾರರ ವಿಶೇಷ ಮೆಚ್ಚುಗೆಯನ್ನು ಪಡೆದಿದೆ.

ಕನ್ನಡ ಸ್ಪರ್ಧಾ ವಿಭಾಗದಲ್ಲಿ ದ್ವಿತೀಯ ಹಾಗೂ ತೃತೀಯ ಅತ್ಯುತ್ತಮ ಚಿತ್ರಗಳಾಗಿ ‘ನಮ್ ಸಾಲಿ’ ಮತ್ತು ‘ರಾವಣ ರಾಜ್ಯದಲ್ಲಿ ನವದಂಪತಿಗಳು’ ಆಯ್ಕೆಯಾದರೆ, ‘ಹಕ್ಕಿಗಾಗಿ’ ಚಿತ್ರಕ್ಕೆ ನೆಟ್‌ಪ್ಯಾಕ್ ತೀರ್ಪುಗಾರರ ಪ್ರಶಸ್ತಿ ಸಿಕ್ಕಿದೆ. ‘ಮೃಗತೃಷ್ಣ’ ಮತ್ತು ‘ಫ್ಲೋರ್ ಬೈ ಫ್ಲೋರ್’ ಚಿತ್ರಗಳು ತೀರ್ಪುಗಾರರ ವಿಶೇಷ ಮನ್ನಣೆಗೆ ಭಾಜನವಾಗಿವೆ.

ಅತ್ಯುತ್ತಮ ಚಿತ್ರ ಪ್ರಶಸ್ತಿ ವಿಜೇತರಿಗೆ ಪಾರಿತೋಷಕದ ಜೊತೆಗೆ ₹10 ಲಕ್ಷ ನಗದು ಬಹುಮಾನ ನೀಡಲಾಯಿತು. ದ್ವಿತೀಯ ಮತ್ತು ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಗಳನ್ನು ಗೆದ್ದವರಿಗೆ ತಲಾ ₹5 ಲಕ್ಷ ಮತ್ತು ₹2 ಲಕ್ಷ ನೀಡಿ ಗೌರವಿಸಲಾಯಿತು.

ಇದೇ ವೇಳೆ ಸಂಗೀತ ನಿರ್ದೇಶಕ, ಗೀತ ಸಾಹಿತಿ ಹಂಸಲೇಖ ಅವರಿಗೆ 17ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ‘ಒಬ್ಬನಿಂದ ಸಿನಿಮಾವಲ್ಲ, ಇದೊಂದು ಸಾಮೂಹಿಕ ಕೃಷಿ. ‘ಕಾಂತಾರ’, ‘ಕೆಜಿಎಫ್’ನಂಥ ಚಿತ್ರಗಳು ಉತ್ತರದವರು ದಕ್ಷಿಣದತ್ತ ತಿರುಗಿ ನೋಡುವಂತೆ ಮಾಡಿವೆ. ಜತೆಗೆ ಪ್ರಜಾಪ್ರಭುತ್ವ ರಕ್ಷಿಸುವ ಸಿನಿಮಾಗಳು ಬರಬೇಕು’ ಎಂದು ಹಂಸಲೇಖ ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್, ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಮುರಳಿ ಪಿ.ಬಿ ಸೇರಿ ಅನೇಕ ಗಣ್ಯರು ಹಾಜರಿದ್ದರು.



ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು

> **ಸಿನಿಮಾ ಒಂದು ಭಾಷೆ. ಯಾವ ಸಿನಿಮಾವನ್ನೂ ಬೇಡ ಎನ್ನುವ ಹಕ್ಕಿಲ್ಲ. ಈ ಉದ್ದೇಶದಿಂದ ನಾನು ಚಿತ್ರೋತ್ಸವದ ಪ್ರಾರಂಭದಲ್ಲಿ ಮಾತನಾಡಿದ್ದೆ. ಪ್ರತಿ ದೇಶದ ಕಲಾವಿದ ಅವನ ನೋವನ್ನು ಹೇಳುತ್ತಾನೆ. ಅದಕ್ಕೆ ಅವಕಾಶ ನೀಡಬೇಕು**
>
> **ಪ್ರಕಾಶ್ ರಾಜ್,** ನಟ

## ಅಗ್ನಿ-3 ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲೇಶ್ವರ (ಒಡಿಶಾ)(ಪಿಟಿಐ): ಅಣ್ವಸ್ತ್ರ ಸಿಡಿತಲೆ ಹೊತ್ತು ಸಾಗಬಲ್ಲ ಅಗ್ನಿ-3 ಬ್ಯಾಲಿಸ್ಟಿಕ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾದ ಕರಾವಳಿಯಲ್ಲಿ ಶುಕ್ರವಾರ ಯಶಸ್ವಿಯಾಗಿ ನೆರವೇರಿಸಲಾಯಿತು.

ನೆಲದಿಂದ ಚಿಮ್ಮಿ ನೆಲದಲ್ಲಿನ ಗುರಿಯನ್ನು ನಾಶಪಡಿಸುವ ಸಾಮರ್ಥ್ಯವಿರುವ ಈ ಕ್ಷಿಪಣಿ 3 ಸಾವಿರ ಕಿ.ಮೀ.ಗೂ ಅಧಿಕ ದೂರ ಸಾಗಬಲ್ಲದು. ಕಾರ್ಯಾಚರಣೆ ಹಾಗೂ ತಾಂತ್ರಿಕ ಸಾಮರ್ಥ್ಯಕ್ಕೆ ಸಂಬಂಧಿಸಿದ ಎಲ್ಲ ಮಾನದಂಡಗಳು ಈ ಪರೀಕ್ಷೆಯಲ್ಲಿ ದೃಢಪಟ್ಟವು ಎಂದು ಡಿಆರ್‌ಡಿಒ ಮೂಲಗಳು ಹೇಳಿವೆ.




ಈ ಶ್ರೇಣಿಯ ಕ್ಷಿಪಣಿಗಳ ಪೈಕಿ ಅಗ್ನಿ-3 ಅತ್ಯಾಧುನಿಕ ಆಯುಧವಾಗಿದೆ. ಇದು 1.5 ಟನ್ ತೂಕದ ಸಿಡಿತಲೆಗಳನ್ನು ಹೊತ್ತು ಸಾಗಬಲ್ಲದು ಎಂದು ಇವೇ ಮೂಲಗಳು ಹೇಳಿವೆ.

## ❖ ಜಿಡಿಪಿ ಶೇ 7.4ರಷ್ಟು ನಿರೀಕ್ಷೆ

**ಸಂದರ್ಭ: ವ್ಯಾಪಾರ ಒಪ್ಪಂದ, ಜಿಎಸ್‌ಟಿ ಪರಿಷ್ಕರಣೆ ಪ್ರಗತಿಗೆ ಕಾರಣ: ಆರ್‌ಬಿಐ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7.4ರಷ್ಟಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ಅಂದಾಜನ್ನು ಪರಿಷ್ಕರಿಸಿದೆ. ಈ ಮೊದಲು ಶೇ 7.3ರಷ್ಟಾಗಲಿದೆ ಎಂದು ಹೇಳಿತ್ತು.**

- ಮುಂದಿನ ಆರ್ಥಿಕ ವರ್ಷದ ಮೊದಲ ಮತ್ತು ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಕ್ರಮವಾಗಿ ಶೇ 6.9 ಮತ್ತು ಶೇ 7ರಷ್ಟಾಗಲಿದೆ ಎಂದು ಅಂದಾಜಿಸಿದೆ.
- ಈ ಮೊದಲು ಡಿಸೆಂಬರ್‌ನಲ್ಲಿ ಜಿಡಿಪಿಯು ಇದೇ ಅವಧಿಯಲ್ಲಿ ಕ್ರಮವಾಗಿ ಶೇ 6.7 ಮತ್ತು ಶೇ 6.8ರಷ್ಟು ಇರಲಿದೆ ಎಂದು ಅಂದಾಜಿಸಿತ್ತು. ಮುಂದಿನ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಜಿಡಿಪಿಯು ಶೇ 6.95ರಷ್ಟಾಗಲಿದೆ.
- 2026-27ರ ಪೂರ್ಣ ಆರ್ಥಿಕ ವರ್ಷದ ಜಿಡಿಪಿಯನ್ನು ಏಪ್ರಿಲ್‌ನಲ್ಲಿ ನಡೆಯುವ ಮುಂದಿನ ಎಂಪಿಸಿಸಭೆಯಲ್ಲಿ ಆರ್‌ಬಿಐ ಪ್ರಕಟಿಸಲಿದೆ.
- 'ವ್ಯಾಪಾರ ಒಪ್ಪಂದಗಳು, ಜಿಎಸ್‌ಟಿ ದರ ಪರಿಷ್ಕರಣೆ ಮತ್ತು ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವು ಜಿಡಿಪಿ ಪರಿಷ್ಕರಣೆಗೆ ಕಾರಣ' ಎಂದು ಆರ್‌ಬಿಐನ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಹಣಕಾಸು ನೀತಿ ಸಮಿತಿಯ (ಎಂಪಿಸಿ) ನಿರ್ಧಾರ ಪ್ರಕಟಿಸಿದ ಬಳಿಕ ಹೇಳಿದ್ದಾರೆ.
- ದೇಶದಲ್ಲಿ ಜನರ ಖರೀದಿ ಸಾಮರ್ಥ್ಯ ಮತ್ತು ಸ್ಥಿರವಾದ ಹೂಡಿಕೆಯ ಪ್ರಮಾಣ ಹೆಚ್ಚಳವಾಗಿದೆ. ಇದು ಜಿಡಿಪಿ ಬೆಳವಣಿಗೆಗೆ ಸಹಕಾರಿ ಆಗಿದೆ ಎಂದು ಹೇಳಿದ್ದಾರೆ.
- ಜಲಾಶಯಗಳಲ್ಲಿ ನೀರಿನ ಮಟ್ಟ ಮತ್ತು ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಹೆಚ್ಚಿದೆ. ಇದು ಕೃಷಿ ಚಟುವಟಿಕೆ ಪ್ರಗತಿಗೆ ನೆರವಾಗಿವೆ. ನಿರ್ಮಾಣ ಮತ್ತು ಸೇವಾ ವಲಯವು ದೇಶೀಯ ಬೇಡಿಕೆಯನ್ನು ಹೆಚ್ಚಿಸಿವೆ ಎಂದು ತಿಳಿಸಿದ್ದಾರೆ.
- ಭಾರತ-ಐರೋಪ್ಯ ಮುಕ್ತ ವ್ಯಾಪಾರ ಒಪ್ಪಂದ, ಭಾರತ ಅಮೆರಿಕ ವ್ಯಾಪಾರ ಒಪ್ಪಂದ ಸೇರಿ ಹಲವು ವ್ಯಾಪಾರ ಒಪ್ಪಂದಗಳು ದೇಶದ ರಫ್ತಿಗೆ ಸಹಕಾರಿ ಆಗಲಿವೆ. ಅಲ್ಲದೆ, ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ ಕ್ರಮಗಳು ಸಹ ಬೆಳವಣಿಗೆಗೆ ಕಾರಣವಾಗಲಿವೆ ಎಂದು ಹೇಳಿದ್ದಾರೆ.

## ❖ ಚಿಲ್ಲರೆ ಹಣದುಬ್ಬರ ದರ ಪರಿಷ್ಕರಣೆ

**ಸಂದರ್ಭ: ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು 2025-26ರ ಆರ್ಥಿಕ ವರ್ಷದಲ್ಲಿ ಶೇ 2.1ರಷ್ಟಾಗಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಪ್ರಸಕ್ತ ಮಾರ್ಚ್ ತ್ರೈಮಾಸಿಕದಲ್ಲಿ ಹಣದುಬ್ಬರ ಶೇ 3ಕ್ಕೂ ಹೆಚ್ಚಿರಲಿದೆ ಎಂದು ಹೇಳಿದೆ.**

- 2026-27ರ ಆರ್ಥಿಕ ವರ್ಷದ ಮೊದಲ ಮತ್ತು ಎರಡನೇ ತ್ರೈಮಾಸಿಕದಲ್ಲಿ ಹಣದುಬ್ಬರವು ಕ್ರಮವಾಗಿ ಶೇ 4 ಮತ್ತು ಶೇ 4.2ರಷ್ಟಾಗಬಹುದು ಎಂದು ಹೇಳಿದೆ.
- ಕಳೆದ ಡಿಸೆಂಬರ್‌ನಲ್ಲಿ ಆರ್‌ಬಿಐ, 2025-26ರಲ್ಲಿ ಚಿಲ್ಲರೆ ಹಣದುಬ್ಬರ ಶೇ 2ರಷ್ಟಾಗಲಿದೆ. ಇದು ಮುಂದಿನ ಆರ್ಥಿಕ ವರ್ಷದ ಮೊದಲ ಮತ್ತು ಎರಡನೇ ತ್ರೈಮಾಸಿಕದಲ್ಲಿ ಕ್ರಮವಾಗಿ ಶೇ 3.9 ಮತ್ತು ಶೇ 4ರಷ್ಟಾಗಬಹುದು ಎಂದು ಹೇಳಿತ್ತು. ಅಮೂಲ್ಯ ಲೋಹಗಳ ಬೆಲೆಯಲ್ಲಿ ಹೆಚ್ಚಳವಾಗಿದೆ. ಇದು ಚಿಲ್ಲರೆ ಹಣದುಬ್ಬರ ಏರಿಕೆಗೆ ಒಂದು ಕಾರಣ ಎಂದು ತಿಳಿಸಿದೆ.

## ❖ ವಿದೇಶಿ ವಿನಿಮಯ ಸಂಗ್ರಹ ಏರಿಕೆ

**ಸಂದರ್ಭ: ಜನವರಿ 30ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣ ₹1.30 ಲಕ್ಷ ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ಆರ್‌ಬಿಐ ತಿಳಿಸಿದೆ.**

- ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ₹65.59 ಲಕ್ಷ ಕೋಟಿಯಾಗಿದೆ. ಇದು ಇದುವರೆಗಿನ ಗರಿಷ್ಠ ಹೆಚ್ಚಳವಾಗಿದೆ ಎಂದು ತಿಳಿಸಿದೆ.
- ಚಿನ್ನದ ಮೀಸಲು ಸಂಗ್ರಹವು ₹12.47 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

-----------------------------------------ಶುಭವಂದನೆಗಳು-----------------------------------------

Dr. Rajkumar IAS/KAS Academy